ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು - 570 006

Karnataka State Open University

Manasagangothri, Mysore - 570 006



# ಸಾರ್ವಜನಿಕ ಆಡಳಿತ

938

## ಎಂ.ಎ (ಪ್ರಥಮ)

# ಭಾರತದ ರಾಜಕೀಯ ವ್ಯವಸ್ಥೆ

ಕನ್ನಡ ಮಾಧ್ಯಮ



ಕೋರ್ಸ್-5

ಬ್ಲಾಕ್-1

*ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.*

*ರಾಷ್ಟ್ರೀಯ ಶಿಕ್ಷಣ ನೀತಿ* **1986**

*The Open University system has been initiated in order to augment opportunities for higher education and as an instrument of democratising education.*

***National Education Policy 1986***

ಕರ್ನಾಟಕ ರಾಜ್ಯ
ಮುಕ್ತ ವಿಶ್ವವಿದ್ಯಾನಿಲಯ

ಸಾರ್ವಜನಿಕ ಆಡಳಿತ
ಕೋರ್ಸ್ – 5

# ಬ್ಲಾಕ್

# 1

## ಪೀಠಿಕೆ


ಘಟಕ –1

ಭಾರತ ಸಂವಿಧಾನ : ಐತಿಹಾಸಿಕ ಹಿನ್ನೆಲೆ, ಸಂವಿಧಾನ ರಚನೆ ಹಾಗು ಸಂವಿಧಾನ ರಚನಾ ಸಭೆ 1–12

ಘಟಕ –2

ರಾಜ್ಯಗಳ ಪುನರ್ ವಿಂಗಡಣೆ 13–24

ಘಟಕ – 3

ಭಾರತದ ಸಂವಿಧಾನದ ಪ್ರಧಾನ ಲಕ್ಷಣಗಳು 25–36

ಘಟಕ –4

ಸಂವಿಧಾನದ ಪ್ರಸ್ತಾವನೆ ಹಾಗೂ ತತ್ವ 37–44

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ


ಕುಲಪತಿಗಳು ಮತ್ತು ಅಧ್ಯಕ್ಷರು,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಪ್ರೊ. ಜಗದೀಶ್
ಡೀನ್ (ಶೈಕ್ಷಣಿಕ) ಸಮಾವೇಶಕರು,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ


## ವಿಷಯ ಸಂಯೋಜಕರು


ಡಾ. ಟಿ.ಡಿ. ದೇವೇಗೌಡ
ಅಧ್ಯಕ್ಷರು,
ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ


## ಪಠ್ಯಕ್ರಮ ನಿರೂಪಕರು

ವಿಭಾಗದಿಂದ

## ಪ್ರಕಾಶಕರು


ಕುಲಸಚಿವರು (ಆಡಳಿತ)

ಕ.ರಾ.ಮು.ವಿ.,ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.



**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**, 2009

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸಗಂಗೋತ್ರಿ, ಮೈಸೂರು – 6 ಇಲ್ಲಿಂದ ಪಡೆಯಬಹುದು.

# ಕೋರ್ಸ್ ಪರಿಚಯ

**ಕೋರ್ಸ್ 5** **ಭಾರತದ ರಾಜಕೀಯ ಪದ್ಧತಿ**

ಪ್ರಿಯ ವಿದ್ಯಾರ್ಥಿ

ಮೊದಲನೆ ಎಂ.ಎ. ಸಾರ್ವಜನಿಕ ಆಡಳಿತ ವಿದ್ಯಾರ್ಥಿಗಳಾದ ನೀವು ಐದು ಪತ್ರಿಕೆಗಳನ್ನು ಅಭ್ಯಸಿಸಬೇಕಾಗುತ್ತದೆ. ಇವುಗಳಲ್ಲಿ ಈ ಪತ್ರಿಕೆ ಐದನೆಯದು. ಇದನ್ನು ಕೋರ್ಸ್ 5 ಎಂದು ಕರೆಯಲಾಗಿದೆ.

ಈ ಪತ್ರಿಕೆಯಲ್ಲಿ ಭಾರತದ ಸಂವಿಧಾನ ಹಾಗೂ ಅದರ ಕಾರ್ಯಾಚರಣೆಯ ಬಗ್ಗೆ ವಿದ್ಯಾರ್ಥಿಗೆ ಬೆಳಕನ್ನು ಚೆಲ್ಲುವ ಪ್ರಯತ್ನ. ನಮ್ಮ ಭಾರತದ ಸಂವಿಧಾನವನ್ನು ಸಂವಿಧಾನ ರಚನಾ ಸಭೆ ಸಿದ್ಧಪಡಿಸಿದೆ. ಅದರಲ್ಲಿದ್ದ ಪ್ರತಿನಿಧಿಗಳು ವಕೀಲರು, ರಾಜಕೀಯ ಧುರೀಣರು ಮತ್ತು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಾಯಕರುಗಳು. ಇವರೆಲ್ಲರು ಸುಮಾರು ಮೂರು ವರ್ಷಗಳ ಕಾಲ ಅಂದರೆ 1946 ರಿಂದ 1949 ರವರೆಗೆ ಸತತವಾಗಿ ಪ್ರಯತ್ನ ನಡೆಸಿ ಭಾರತದ ಸಂವಿಧಾನವನ್ನು ಸಿದ್ಧಪಡಿಸಿದ್ದಾರೆ. ಇದು ನವೆಂಬರ್ 1949 ರ 26 ರಂದು ಸಿದ್ಧವಾಯಿತು. ಹೀಗೆ ಸಿದ್ಧವಾದ ಸಂವಿಧಾನವನ್ನು ಜನವರಿ, 1950 ರ ಜನವರಿ 26 ರಂದು ಜಾರಿಗೊಳಿಸಲಾಯಿತು. ಆ ದಿನವೇ ನಮ್ಮ ಭಾರತ ಗಣರಾಜ್ಯವಾಯಿತು ಹಾಗೂ ಆ ದಿನವನ್ನು ಗಣರಾಜ್ಯದ ದಿನವೆಂದು ಪ್ರತಿವರ್ಷವೂ ಆಚರಿಸುತ್ತಾ ಬಂದಿದ್ದೇವೆ. ನಮ್ಮ ಭಾರತ ಕೇವಲ ಗಣರಾಜ್ಯವಷ್ಟೆ ಅಲ್ಲ. ಅದು ಪ್ರಜಾಪ್ರಭುತ್ವ, ಸಾರ್ವಭೌಮ, ಜಾತ್ಯಾತೀತ ಸಮಾಜವಾದಿ ರಾಷ್ಟ್ರವೂ ಹೌದು.

ಸಂವಿಧಾನವೆಂದರೆ ಪ್ರಜೆಗಳ ಆಸೆ ಆಕಾಂಕ್ಷೆಗಳನ್ನು, ಆಸಕ್ತಿಗಳನ್ನು, ಗುರಿ ಮತ್ತು ಧ್ಯೇಯಗಳನ್ನು ಪ್ರತಿನಿಧಿಸುವಂತಹುದು, ಇವೆಲ್ಲವನ್ನು ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಹಾಗೂ ರಾಜ್ಯ ನೀತಿ ನಿರ್ದೇಶಕ ತತ್ವಗಳ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ. ಇವೆಲ್ಲಾ ಧ್ಯೇಯ ಮತ್ತು ಗುರಿಗಳನ್ನು ನಮ್ಮ ಸಂವಿಧಾನ ರಚನಾಕಾರರ ಇಚ್ಛೆಯಂತೆ ನಾವು ಈಗಾಗಲೇ ಸಾಧಿಸಬೇಕಾಗಿತ್ತು.

ಭಾರತದ ಪ್ರಜಾಪ್ರಭುತ್ವ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮಾನತೆಯ ಅಡಿಪಾಯವನ್ನು ಆಧಾರವಾಗಿಟ್ಟುಕೊಂಡು, ರಾಮರಾಜ್ಯವನ್ನು ಕಟ್ಟಬೇಕು ಎನ್ನುವ ಹಂಬಲದಿಂದ ಸಂವಿಧಾನವನ್ನು ರಚಿಸಿಕೊಂಡಿದ್ದೇವೆ. ಒಂದು ವೇಳೆ ಸಂವಿಧಾನದಲ್ಲಿರುವ ಗುರಿಯನ್ನು, ಆ ಗುರಿ ಸಾಧಿಸಲು ತಿಳಿಸಿರುವ ನಿಯಮ ಅನುಸರಿಸಿದರೆ ಕಲ್ಯಾಣರಾಜ್ಯ ಸ್ಥಾಪಿಸುವುದು ಖಂಡಿತಸಾಧ್ಯ. ಆದುದರಿಂದಲೇ ನಾವೆಲ್ಲರೂ ನಮ್ಮದೇ ಆದ ಸಂವಿಧಾನವನ್ನು ತಿಳಿದಿಕೊಳ್ಳುವುದು ಬಹು ಅಗತ್ಯ. ಈ ನಿಟ್ಟಿನಲ್ಲಿ ರಾಜ್ಯಶಾಸ್ತ್ರ ಹಾಗೂ ಸಾರ್ವಜನಿಕ ಆಡಳಿತ ವಿಭಾಗ, ಈ ಪತ್ರಿಕೆಗೆ ಸಂಬಂಧಪಟ್ಟಂತೆ ಪಠ್ಯಕ್ರಮವನ್ನು ಸಿದ್ಧಪಡಿಸಿದೆ. ಇದನ್ನು ಅಭ್ಯಸಿಸುವುದರಿಂದ ನಿಜವಾಗಿಯೂ ಸಂವಿಧಾನವನ್ನು ತಿಳಿಯಬೇಕು ಎನ್ನುವವರಿಗೆ ಸಹಾಯಕವಾಗಿರುತ್ತದೆ. ಸಂವಿಧಾನವನ್ನು ಪ್ರತಿಯೊಬ್ಬ ಭಾರತದ ಪ್ರಜೆಯೂ ತಿಳಿಯಬೇಕು, ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ಆಡಳಿತದ ವಿದ್ಯಾರ್ಥಿಯಾದ ನಾವು ತಿಳಿದುಕೊಳ್ಳಲೇಬೇಕು.

ಈ ಪತ್ರಿಕೆಯ ಪಠ್ಯಕ್ರಮವನ್ನು 7 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಬ್ಲಾಕ್‌ನ್ನು ಪುನಃ ನಾಲ್ಕು ಘಟಕಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಬ್ಲಾಕ್‌ನಲ್ಲಿ ಭಾರತದ ರಾಜಕೀಯ ಪದ್ಧತಿಯ ವಿವಿಧ ಅಂಶಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.


ಡಾ. ಟಿ.ಡಿ. ದೇವೇಗೌಡ

ಅಧ್ಯಕ್ಷರು

ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ

ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಬ್ಲಾಕ್ – 1

## ಪರಿಚಯ

ಬ್ಲಾಕ್ ಒಂದರಲ್ಲಿ ನಾಲ್ಕು ಘಟಕಗಳಿದ್ದು ಇವುಗಳಲ್ಲಿ ಭಾರತ ಸಂವಿಧಾನ ರಚನೆಯ ಬಗ್ಗೆ ವಿವರಿಸಲಾಗಿದೆ. ಘಟಕ ಒಂದರಲ್ಲಿ ಭಾರತ ಸಂವಿಧಾನದ ಐತಿಹಾಸಿಕ ಹಿನ್ನೆಲೆ, ಸಂವಿಧಾನ ರಚನೆ ಮತ್ತು ರಚನಾ ಸಭೆಯ ಬಗ್ಗೆ ವಿವರಿಸಲಾಗಿದೆ. ಘಟಕ ಎರಡರಲ್ಲಿ ರಾಜ್ಯಗಳ ಪುನರ್‌ರಚನೆ ಬಗ್ಗೆ ವಿವರಿಸಲಾಗಿದೆ. ಘಟಕ ಮೂರರಲ್ಲಿ ಸಂವಿಧಾನದದಲ್ಲಿರುವ ಪ್ರಮುಖ ಲಕ್ಷಣಗಳನ್ನು ವಿವರಿಸಲಾಗಿದೆ. ನಾಲ್ಕನೇ ಘಟಕದಲ್ಲಿ ಸಂವಿಧಾನದ ಪ್ರಸ್ತಾವನೆ ಹಾಗೂ ತತ್ವಗಳ ಬಗ್ಗೆ ವಿವರಣೆ ನೀಡಲಾಗಿದೆ.

# ಘಟಕ – 1 : ಭಾರತ ಸಂವಿಧಾನ : ಐತಿಹಾಸಿಕ ಹಿನ್ನೆಲೆ, ಸಂವಿಧಾನ ರಚನೆ ಮತ್ತು ರಚನಾ ಸಭೆ

## ರಚನೆ


1.0 ಉದ್ದೇಶಗಳು

1.1 ಪೀಠಿಕೆ

1.2 ಐತಿಹಾಸಿಕ ಹಿನ್ನೆಲೆ

1.3 ಸಂವಿಧಾನ ರಚನೆ ಮತ್ತು ರಚನಾ ಸಭೆ

1.4 ಸಾರಾಂಶ

1.5 ಕಠಿಣ ಪದಗಳು

1.6 ಉಪಯುಕ್ತ ಗ್ರಂಥಗಳು

1.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 1.0 ಉದ್ದೇಶಗಳು

ಈ ಘಟಕವನ್ನು ಓದಿದ ನಂತರ, ನೀವು

- ಸಂವಿಧಾನದ ಬೆಳವಣಿಗೆಯನ್ನು ತಿಳಿಯಬಹುದು.
- ಸಂವಿಧಾನ ರಚನಾ ಸಭೆಯ ಪಾತ್ರವನ್ನು ತಿಳಿಯಬಹುದು
- ಸಂವಿಧಾನ ರಚನಾ ಪ್ರಕ್ರಿಯೆಯನ್ನು ಪರಿಶೀಲಿಸಬಹುದು.

## 1.1 ಪೀಠಿಕೆ

ಭಾರತದ ಸಂವಿಧಾನವನ್ನು ಅಭ್ಯಸಿಸುವ ಮೊದಲು ಭಾರತೀಯರು ತಮ್ಮ ಸಂವಿಧಾನವನ್ನು ಸಿದ್ಧ ಮಾಡಿಕೊಳ್ಳಲು ಪ್ರೇರೇಪಿಸಿದ ಐತಿಹಾಸಿಕ ಹಿನ್ನೆಲೆಯನ್ನು ತಿಳಿಯುವುದು ಹಾಗೂ ಆ ಹಿನ್ನೆಲೆಯ ಘಟನೆಗಳನ್ನು ವಿಶ್ಲೇಷಿಸುವುದು ಸೂಕ್ತ ಹಾಗೂ ಅಗತ್ಯ.

ಸುಮಾರು 6 ಶತಮಾನಗಳಷ್ಟು ಕಾಲ ಭಾರತೀಯರನ್ನು ಪರಕೀಯರು ಆಳಿದರು. ಅದರಲ್ಲೂ 1600 ರಿಂದ 1947 ರವರೆಗೆ ಕೇಂದ್ರೀಕೃತ ಆಡಳಿತದ ಮೂಲಕ ಬ್ರಿಟೀಷರು ನಮ್ಮನ್ನು ಆಳಿದರು. 1600 ರಲ್ಲಿ ಮೊದಲು ವ್ಯಾಪಾರಿಗಳಾಗಿ ಬಂದರು ಬ್ರಿಟಿಷರು, ನಂತರ ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿದರು ಈ ಸಂಸ್ಥೆಯ ಮೂಲಕ ಆರ್ಥಿಕ ಶೋಷಣೆ ಪ್ರಾರಂಭವಾಯಿತು. ಅಷ್ಟರಲ್ಲೇ ಅವರ ಶೋಷಣೆ ನಿಲ್ಲಲಿಲ್ಲ. ನಿಧಾನವಾಗಿ ರಾಜಕೀಯ ಅಧಿಕಾರವನ್ನು ಸಹ ಪಡೆಯಲು ಪ್ರಾರಂಭ ಮಾಡಿದರು. ಇದಕ್ಕೆ ಅವರಿಗೆ ಎರಡು ಕಾರಣಗಳು ಪ್ರಬಲವಾಗಿ ಸಹಾಯ ಮಾಡಿದವು. ಮೊದಲನೆಯದಾಗಿ ಭಾರತದ ರಾಜರುಗಳಲ್ಲಿ ಇಲ್ಲದಿದ್ದ ಒಗ್ಗಟ್ಟು ಮತ್ತು ಎರಡನೆಯದಾಗಿ, ಮೊಗಲ್ ಸಾಮ್ರಾಜ್ಯದ ಅವನತಿ. ಹೀಗಾಗಿ ಸಂಪೂರ್ಣವಾಗಿ 1858ರ ಕಾಯ್ದೆಯ ಪ್ರಕಾರ (ಈ ಕಾಯ್ದೆಯನ್ನು ಬ್ರಿಟಿಷ್ ಸಂಸತ್ತು ಅಂಗೀಕರಿಸಿತು) ರಾಜಕೀಯ ಅಧಿಕಾರವನ್ನು ಪಡೆದರು. ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬ್ರಿಟೀಷರ ಆಡಳಿತಕ್ಕೆ ಭಾರತ ಒಳಗಾಯಿತು ಮತ್ತು ಭಾರತವನ್ನು ಬ್ರಿಟಿಷರ ವಸಾಹತು ಎಂದು ಘೋಷಿಸಲಾಯಿತು.

ಭಾರತ ಬ್ರಿಟೀಷರ ವಸಾಹತು ಆದ ನಂತರ ವಸಾಹತುಶಾಹಿ ತತ್ವಕ್ಕೆ ಅನುಗುಣವಾಗಿ, ಭಾರತೀಯರು ಬಹಳ ತೊಂದರೆ ಅನುಭವಿಸಿದರು. ಆರ್ಥಿಕವಾಗಿ ಸಂಪೂರ್ಣ ಶೋಷಣೆಗೆ ಒಳಗಾದರೂ ಹಾಗೂ ರಾಜಕೀಯವಾಗಿ ಅವರು ಬ್ರಿಟೀಷರ ಅಧೀನರಾದರು.

ಭಾರತ, ಭೌಗೋಳಿಕವಾಗಿ ವಿಶಾಲವಾಗಿದ್ದು ಆಡಳಿತದ ಅನುಕೂಲಕ್ಕೋಸ್ಕರ ಬ್ರಿಟೀಷರು ಕೆಲವು ಅಭಿವೃದ್ಧಿಯನ್ನು ಮಾಡಿದರು. ಶಿಕ್ಷಣ, ಸಾರಿಗೆ ಸಂಪರ್ಕ, ಈ ದಿಶೆಯಲ್ಲಿ ಪ್ರಗತಿಯನ್ನು ಮಾಡಿಕೊಂಡರು ಆದರೆ ಪರೋಕ್ಷವಾಗಿ ಭಾರತೀಯರಿಗೆ ಈ ಅಭಿವೃದ್ಧಿಯಿಂದ ಅನುಕೂಲವಾಯಿತು. ಅಂದರೆ ಹೊರ ರಾಷ್ಟ್ರಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯಕರವಾಯಿತು. ಇದರಿಂದಾಗಿ ನಿಧಾನವಾಗಿ ರಾಷ್ಟ್ರೀಯ ಮನೋಭಾವನೆ ಬೆಳೆಯಲು ಪ್ರಾರಂಭಾವಾಯಿತು. ಮೊದಲನೆಯ ಹೆಜ್ಜೆ, ಈ ಬೆಳವಣಿಗೆ ತೋರಿಸಲು, ಭಾರತೀಯರು ನಡೆಸಿದ 1857 ರ ಸಿಪಾಯಿ ದಂಗೆ. ಇದನ್ನು ಭಾರತ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆಯಲಾಗಿದೆ. ಈ ಸಂಗ್ರಾಮ 1947 ರಲ್ಲಿ ಸ್ವಾತಂತ್ರ್ಯ ಪಡೆಯುವವರೆಗೂ ಮುಂದುವರಿಯಿತು.

1857 ರಿಂದ 1947 ರವರೆಗೆ ಅರ್ಥಿಕವಾಗಿ ಹಾಗೂ ಮುಖ್ಯವಾಗಿ ರಾಜಕೀಯವಾಗಿ ಯಾವ ಯಾವ ರೀತಿಯ ಬದಲಾವಣೆಗಳಾದವು ಎಂಬುದನ್ನು ಈ ಘಟಕದಲ್ಲಿ ಅಭ್ಯಸಿಸುವ ಪ್ರಯತ್ನ. ಮೊದಲು ಈ ಘಟಕ ವಸಾಹತುಶಾಹಿ ಹೇಗೆ, ಏಕೆ ಬೆಳೆಯಿತು ಎಂಬುದನ್ನು ಹಾಗೂ ಎರಡನೆಯ ಹಂತದಲ್ಲಿ, ರಾಷ್ಟ್ರೀಯ ಮನೋಭಾವನೆ ಬೆಳೆಯಲು

ಕಾರಣಗಳು ಯಾವುವು ಎಂಬುದನ್ನು ತಿಳಿದುಕೊಂಡು, ಈ ರಾಷ್ಟ್ರೀಯತೆ ಭಾರತ ಸ್ವಾತಂತ್ರ್ಯಗಳಿಸಲು ಹೇಗೆ ಅನುಕೂಲವಾಯಿತು ಎಂಬುದನ್ನು ತಿಳಿಸುತ್ತದೆ.

ಕ್ಯಾಬಿನೆಟ್ ಕಮಿಷನ್ನ ಶಿಫಾರಸ್ಸಿನಂತೆ ಸಂವಿಧಾನ ರಚನಾ ಸಭೆಯನ್ನು 1946ರಲ್ಲಿ ರಚಿಸಲಾಯಿತು. ಈ ಸಭೆಯು 1949ರಲ್ಲಿ ತನ್ನ ಕರಡು ಸಂಪಿಧಾನವನ್ನು ಸಲ್ಲಿಸಿತು. ನಂತರ 1950ರ ಜನವರಿ 26 ರಂದು ಈ ನಮ್ಮ ಸಂವ್ಧಾನ ಅನುಷ್ಠಾನಗೊಂಡಿತು.

## 1.2 ಐತಿಹಾಸಿಕ ಹಿನ್ನೆಲೆ

### ಮೊದಲನೆಯ ಹಂತ (1600–1858)

ಮೊಗಲರ ಚಕ್ರಾಧಿತ್ಯದ ಅವನತಿ ಮತ್ತು ಪತನದೊಂದಿಗೆ, ಯುರೋಪಿನ ಹಲವಾರು ರಾಷ್ಟ್ರಗಳಿಗೆ ಭಾರತವನ್ನು ವಸಾಹತು ಮಾಡಿಕೊಳ್ಳಲು ಒಂದು ಉತ್ತಮ ಅವಕಾಶ ಸಿಕ್ಕಿದಂತೆ ಆಯಿತು. 18 ನೇ ಶತಮಾನದ ಪ್ರಾರಂಭದಲ್ಲಿ ರಾಜಕೀಯವಾಗಿ ವಸಾಹತು ತತ್ವವನ್ನು ಬೆಳೆಸಿಕೊಳ್ಳಲು ಒಂದು ಅವಕಾಶ ಒದಗಿತು. ಪ್ರಾರಂಭದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಕಾರಣಗಳಿಗಾಗಿ ವಸಾಹತು ರಾಷ್ಟ್ರಗಳಲ್ಲಿ ಪ್ರಯತ್ನ ಪಟ್ಟರು ನಂತರ ಆಯಾ ದೇಶಗಳಲ್ಲೆ ನೆಲ ಊರಲು ಪ್ರಾರಂಭಿಸಿದರು. 18ನೇ ಶತಮಾನದ ಪೂರ್ವಭಾಗದಲ್ಲಿ ಇಂಗ್ಲೀಷರು ಮತ್ತು ಫ್ರೆಂಚರ ನಡುವೆ ಹಣಾಹಣಿ ಉಂಟಾಗಿ ಒಬ್ಬರು ಮತ್ತೊಬ್ಬರನ್ನು ಭಾರತದಿಂದ ತೊಲಗಿಸಲು ತಮ್ಮ ಸರ್ವ ಪ್ರಯತ್ನ ನಡೆಸಿದರು. ಈ ಪ್ರಯತ್ನದಲ್ಲಿ ಇಂಗ್ಲೀಷರು ಗೆದ್ದರು. ಇದನ್ನು 1756 ರ ಪ್ಲಾಸಿ ಕದನ ರುಜುವಾತು ಮಾಡಿತು. ನಂತರ ನಿಧಾನವಾಗಿ ಇಂಡಿಯಾದಲ್ಲಿ ಸ್ವಲ್ಪ ಮಟ್ಟಿಗೆ ಪ್ರಬಲರಾಗಿದ್ದ ಮರಾಠರು, ನವಾಬರು ಮತ್ತು ಮೊಗಲ್ ಚಕ್ರಾಧಿಪತ್ಯವನ್ನು ತಮ್ಮ ವಶಕ್ಕೆ ಬರುವಂತೆ ಮಾಡಿಕೊಂಡರು. ಹೀಗೆ ಇಂಡಿಯಾ ದೇಶದ ಮೇಲೆ ತಮ್ಮ ಸಂಪೂರ್ಣ ಹತೋಟಿಯನ್ನು ಸಾಧಿಸಿದರು.

1857ರ ಸಿಪಾಯಿ ದಂಗೆ ಅಥವಾ ಮೊದಲನೆಯ ಸ್ವಾತಂತ್ರ್ಯದ ಯುದ್ಧ ನಡೆಯುವವರಗು, ಇಂಗ್ಲೀಷರು ಯುದ್ಧ ಮಾಡುವುದರಲ್ಲಿ, ತಮ್ಮ ಏಕಸ್ವಾಮ್ಯತೆಯನ್ನು ಮುಂದುವರಿಸುವಲ್ಲಿ ಮತ್ತು ಇಡೀ ದೇಶವನ್ನು ಒಂದು ದೇಶವನ್ನಾಗಿ ಮಾಡುವ ಪ್ರಯತ್ನದಲ್ಲಿದ್ದರು. ಆದರೆ ಸಿಪಾಯಿ ದಂಗೆಯಿಂದ ಬ್ರಿಟಿಷ್ ಆಡಳಿತಗಾರರ ಕಣ್ಣು ತೆರೆಯಿತು. ಅದರ ಪರಿಣಾಮವಾಗಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವನ್ನು ಹತೋಟಿಗೆ ತರಲು ಮತ್ತು ಅದರ ಮೇಲೆ ನಿಯಂತ್ರಣವನ್ನು ಬ್ರಿಟಿಷ್ ಸರ್ಕಾರ ಹೊಂದಲು ಪ್ರಯತ್ನಿಸಲಾಯಿತು. ಈ ದಿಸೆಯಲ್ಲಿ 1773 ರ ರೆಗ್ಯುಲೇಟಿಂಗ್ ಕಾಯ್ದೆ,1784 ರ ಪಿಟ್ಸ್ ಇಂಡಿಯಾ ಕಾಯ್ದೆ, 1793, 1813, 1833 ಮತ್ತು 1853 ರ ಸನ್ನದ್ದು ಕಾಯ್ದೆಗಳನ್ನು ಅಂಗೀಕರಿಸಿ ನಿಯಂತ್ರಣಕ್ಕೊಳ ಪಡಿಸಲಾಯಿತು. ಆದರೆ ಭಾರತದ ಜನತೆಗೆ ಮಾತ್ರ ಆ ಸರ್ಕಾರದ ಮತ್ತು ಆಡಳಿತ ಪರಕೀಯರದಾಗಿತ್ತು. ಕೇವಲ ದೇಶದ ರಕ್ಷಕನಾಗಿ ಆಡಳಿತದ ವ್ಯವಸ್ಥೆ ಕಾರ್ಯ ನಿರ್ವಹಿಸುತ್ತಿತ್ತು. ಹೀಗೆ ಮೊದಲನೆಯ ಹಂತದಲ್ಲಿ ಇಂಗ್ಲೀಷರ ರಾಜ್ಯಭಾರದ ವಿಸ್ತರಣೆಯಾಯಿತು.

### ಎರಡನೆಯ ಹಂತ (1858–1905)

1857 ರಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಮೊದಲನೆಯ ಯುದ್ಧ ಬ್ರಿಟಿಷರಿಗೆ ಒಂದು ಬಲವಾದ ಪೆಟ್ಟಾಗಿತ್ತು. ಇದನ್ನು ಅವರು ಸಿಪಾಯಿ ದಂಗೆ ಎಂದು ಕರೆದರು. ಆವರೂ ಅಲ್ಲಿಯವರೆಗೆ ಅವರುಗಳು ಅನುಸರಿಸುತ್ತಿದ್ದ ನೀತಿಯನ್ನು ಬದಲಾಯಿಸಿಕೊಳ್ಳುವಂತಾಯಿತು. ಅಷ್ಟೇ ಅಲ್ಲದೆ 1858 ಕಾಯ್ದೆಯನ್ನು ಬ್ರಿಟಿಷ್ ಸಂಸತ್ತು ಅಂಗೀಕರಿಸಿ, ಭಾರತದ ವಸಾಹತು ದೇಶದ ಆಡಳಿತವನ್ನು ನೇರವಾಗಿ ರಾಣಿಯೇ ವಹಿಸಿಕೊಳ್ಳಲಾಯಿತು. ಅಂದರೆ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಯಾಯಿತು. ಭಾರತದ ಆಡಳಿತ ನೇರವಾಗಿ ಬ್ರಿಟಿಷ್ ಸರ್ಕಾರಕ್ಕೆ ಸೇರಿತು. ಬ್ರಿಟಿಷ್ ರಾಣಿಯಾದ ವಿಕ್ಟೋರಿಯಾ, ಇನ್ನು ಮುಂದೆ ಭಾರತದ ಜನತೆಗೆ ಉತ್ತಮ ಸರ್ಕಾರ, ಸ್ವಾತಂತ್ರ್ಯ, ಸರ್ಕಾರೆ ಸೇವೆಗೆ ಸೇರುವ ಹಕ್ಕು ಮತ್ತು ಸಮಾನ ಹಾಗೂ ಸಂಪೂರ್ಣವಾದ ರಕ್ಷಣೆಯನ್ನು ಕೊಡುತ್ತದೆ ಎಂಬ ಭರವಸೆಯನ್ನು ನೀಡಿದರು.

ವಾಸ್ತವವಾಗಿ ಇಲ್ಲಿಂದ ಬ್ರಿಟಿಷರ ವಸಾಹತುಶಾಹಿ ಸಾಮ್ರಾಜ್ಯ ಪ್ರಾರಂಭವಾಯಿತು ಎಂದು ಹೇಳಬಹುದು. ಆದುದರಿಂದ 1861 ರ ಕಾಯ್ದೆಯನ್ನು ಅಂಗೀಕರಿಸಿ ಭಾರತೀಯರನ್ನು ಆಡಳಿತದಲ್ಲಿ ಭಾಗವಹಿಸುವ ಅವಕಾಶವನ್ನು ನೀಡಲಾಗುತ್ತದೆ ಎಂದು ತಿಳಿಸಿದರು. ಇದು ಕೇವಲ ಬ್ರಿಟಿಷರ ಚಾಣಾಕ್ಷತನವಾಗಿತ್ತು. ಆದರೂ ಮೊಟ್ಟ ಮೊದಲ ಬಾರಿಗೆ ಭಾರತೀಯರನ್ನು ಕಾರ್ಯಾಂಗ ಸಮಿತಿಗೆ ಸೇರಿಸಿಕೊಳ್ಳಲಾಯಿತು. ಇದನ್ನು 1892 ರ ಕಾಯ್ದೆಯಲ್ಲಿ ಮುಂದುವರಿಸಿದರು ಹೀಗೆ ಎರಡನೆಯ ಹಂತದಲ್ಲಿ ತಮ್ಮ ಆಡಳಿತವನ್ನು ನೆಲೆಗೊಳಿಸಲು ಬೇಕಾದ ಕಾರ್ಯಕ್ರಮಗಳನ್ನು ಕೈಗೊಂಡು ಭಾರತೀಯರನ್ನೂ ಸಹ ಆಡಳಿತದಲ್ಲಿ ಪಾತ್ರ ವಹಿಸಲು ಅವಕಾಶ ಮಾಡಿಕೊಟ್ಟಿದ್ದೇವೆ ಎಂಬುವ ನಂಬಿಕೆ ಹುಟ್ಟಿಸಿದರು, ಮತ್ತೊಮ್ಮೆ ಯಾವ ರೀತಿಯ ದಂಗೆಯು ಆಗದಂತೆ ತಡೆಗಟ್ಟುವುದೇ ಇವುಗಳ ಉದ್ದೇಶವಾಗಿತ್ತು.

**ಮೂರನೆಯ ಹಂತ (1909–1940)**

ಈ ಅವಧಿಯಲ್ಲಿ ಬ್ರಿಟಿಷರು ಭಾರತೀಯರನ್ನು ಸಮಾಧಾನದಿಂದ ಇರುವಂತೆ ನೋಡಿಕೊಳ್ಳುವುದರ ಜೊತೆಗೆ, ದಬ್ಬಾಳಿಕೆ ತತ್ವವನ್ನು ಸಹ ಅನುಸರಿಸಿದರು. ಅಲ್ಲದೆ ತಮ್ಮ ಅಧಿಕಾರವನ್ನು ಬಲಗೊಳಿಸಲು ಒಡೆದು ಆಳುವ ನೀತಿಯನ್ನು ಅನುಸರಿಸಲು ಪ್ರಾರಂಭಿಸಿದರು, ಈ ದಿಸೆಯಲ್ಲಿ ಭಾರತೀಯರನ್ನು ಅಶಸ್ತ್ರಗೊಳಿಸಲು ಅಂಗೀಕರಿಸಿದ ಶಸ್ತ್ರಾಸ್ತ್ರಗಳ ಕಾಯ್ದೆ, ಪತ್ರಿಕಾ ಸ್ವಾತಂತ್ರ್ಯವನ್ನು ಮಿತಿಗೊಳಿಸಲು ವಂಗ ಪತ್ರಿಕಾ ಕಾಯ್ದೆ ಬಹಳ ಮುಖ್ಯವಾದವು. ಲಕ್ಷಾಂತರ ಜನರು ಬರಗಾಲದಿಂದ ಸಾಕಷ್ಟು ಸಂಕಟವನ್ನು ಅನುಭವಿಸುವಾಗ, ಬ್ರಿಟಿಷ್ ರಾಣಿಯನ್ನು ಭಾರತಕ್ಕೆ ಕರೆಸಿ, ವಿಜೃಂಭಣೆಯಿಂದ ಕಾರ್ಯಕ್ರಮಗಳನ್ನು ನಡೆಸಲಾಯಿತು. ಇವುಗಳು ಸಾಲದು ಎಂಬಂತೆ, ಬಂಗಾಳವನ್ನು ವಿಭಜಿಸಲಾಯಿತು. ಇದಕ್ಕೆ ಅವರು ಅನುಸರಿಸಿದ ಆಧಾರವೆಂದರೆ – ಹಿಂದೂ, ಮುಸ್ಲಿಂ ಜನಾಂಗದ ಅಂಕಿ ಅಂಶದ ಪ್ರಕಾರ ಮಾಡಲಾಯಿತು. ಬಂಗಾಳವನ್ನು ಇಬ್ಭಾಗ ಮಾಡಿದ್ದು ಬ್ರಿಟಿಷರ ಒಡೆದು ಆಳುವ ನೀತಿಗೆ ಇನ್ನಷ್ಟು ಒತ್ತನ್ನು ಕೊಟ್ಟಿತು. ಇದೇ ಮೂಲವಾಗಿ ಮುಸ್ಲಿಂ ಜನಾಂಗದವರು ತಮಗೆ ಬೇರೆ ರಾಜ್ಯವನ್ನು ಕೊನೆಗೆ ಕೇಳಿದರು ಈ ಆಧಾರದ ಮೇಲೆ ದೇಶವನ್ನು ವಿಭಜಿಸಲಾಯಿತು. ಇದಕ್ಕೆ ಪೂರಕವಾಗಿ 1909 ರ ಕಾಯ್ದೆಯಲ್ಲಿ ಜಾತಿಯ ಆಧಾರದ ಮೇಲೆ ಚುನಾವಣಾ ಕ್ಷೇತ್ರಗಳನ್ನು ನೀಡಲು ಅವಕಾಶ ಮಾಡಿಕೊಡಲಾಯಿತು. ಇದರಿಂದ ಮತ್ತೊಂದು ಬಲವಾದ ಪೆಟ್ಟು ಭಾರತೀಯರಿಗೆ ಅನಾನುಕೂಲಕರವದದ್ದು ಎಂದರೆ, ಬ್ರಿಟಿಷರಿಗೆ ಆದಷ್ಟು ಹಿಂದೂಗಳನ್ನು ಆಡಳಿತದಿಂದ ದೂರವಿಡುವುದೇ ಆಗಿತ್ತು.

ಇಷ್ಟೆಲ್ಲಾ ಪ್ರಗತಿಯನ್ನು ತಮಗೆ ಅನುಕೂಲವಾಗುವ ರೀತಿಯಲ್ಲಿ ಬ್ರಿಟಿಷರು ಮಾಡಲು ಹೊರಟ್ಟಿದ್ದಾಗ, 1914 ರಲ್ಲಿ ಮೊದಲನೆಯ ಮಹಾಯುದ್ಧ ಪ್ರಾರಂಭವಾಯಿತು. ಭಾರತೀಯರ ಬೇಡಿಕೆಯಾದ ಸ್ವಯಂ ಸರ್ಕಾರವನ್ನು ನೀಡಲು ಯೋಚಿಸಬೇಕಾದ ಸಂದರ್ಭ ಉಂಟಾಯಿತು. ಎಕೆಂದರೆ ಯುದ್ಧದಲ್ಲಿ ಭಾರತೀಯರ ಸಹಕಾರ ಅತ್ಯಂತ ಅಗತ್ಯವಾಗಿತ್ತು. ಈ ವೇಳೆಗಾಗಲೇ ಭಾರತದ ರಾಷ್ಟ್ರೀಯ ಕಾಂಗ್ರೆಸ್, ಮತ್ತು ಬ್ರಿಟಿಷರ ಸಹಕಾರದಿಂದ ಮುಸ್ಲಿಂ ಲೀಗ್ ಎರಡೂ ಪ್ರಬಲವಾಗಿ ಬೆಳೆದಿದ್ದವು ಈರ್ವರನ್ನು ತೃಪ್ತಿಗೊಳಿಸಿ, ಅವರ ಸಹಕಾರವನ್ನು ಪಡೆಯಲು ಬ್ರಿಟಿಷರು ಯೋಜನೆ ಹಾಕಿದರು. ಆದರೆ ಇಷ್ಟರಲ್ಲಾಗಲೇ ರಾಷ್ಟ್ರೀಯತೆ ಸಾಕಷ್ಟು ಬೆಳೆದು ಪ್ರಬಲವಾಗಿತ್ತು. ಈ ಬೆಳವಣಿಗೆಯನ್ನು ಹತ್ತಿಕ್ಕುವುದು ಕಷ್ಟವಾಗಿತ್ತು. ಆದುದರಿಂದ 1919ರ ಕಾಯ್ದೆಯನ್ನು ಬ್ರಿಟಿಷ್ ಸಂಸತ್ತು ಅಂಗೀಕರಿಸಿತು. ಈ ಮೂಲಕ ಎರಡೂ ಬಣಗಳ ಬೇಡಿಕೆಯನ್ನು ಪೂರೈಸಲು ಹೊರಟರು. 1919ರ ಕಾಯ್ದೆಯ ಅನುಸಾರ ಮುಂದೆ ಜವಾಬ್ದಾರಿಯುತ ಸರ್ಕಾರವನ್ನು ಹೊಂದಲು ಬೇಕಾದ ಅನುಭವಕ್ಕಾಗಿ ಭಾರತೀಯರನ್ನು ಎಲ್ಲಾ ಆಡಳಿತ ವಿಭಾಗಗಳಲ್ಲಿ ಭಾಗವಹಿಸಲು ಹೆಚ್ಚು ಅವಕಾಶಗಳನ್ನು ಕಲ್ಪಿಸಿ ಕೊಡುತ್ತೇವೆ. ಆದರೆ ಭಾರತ ಬ್ರಿಟಿಷ್ ರಾಜ್ಯದ ಅಂಶವಾಗಿಯೇ ಇರಬೇಕಾಗುತ್ತದೆ ಎನ್ನುವುದನ್ನು ಸ್ಪಷ್ಟಪಡಿಸಲಾಯಿತು.

1919ರ ಕಾಯ್ದೆ ಪ್ರಕಾರ ದ್ವಿ ಸಭಾ ತತ್ವವನ್ನು ಅನುಸರಿಸಿ ಕೇಂದ್ರದಲ್ಲಿ ಶಾಸನ ಸಭೆಯನ್ನು ರಚಿಸಲಾಯಿತು. ಆದರೆ ಈ ಸುಧಾರಣೆಗಳು ಸತ್ಯಕ್ಕೆ ಬಹಳ ದೂರವಾಗಿದ್ದವು. ಜೊತೆಗೆ ಬ್ರಿಟಿಷರ ದಮನ ಮಾಡುವ ಕಾರ್ಯ ಮುಂದುವರಿಯಿತು. 1918 ರ ರೋವಲೆಟ್ ಕಾಯ್ದೆ, 1919 ಜಲಿಯನ್ ವಾಲ ಭಾಗ್ ದುರಂತ, ಮಹಾತ್ಮಗಾಂಧೀಜಿಯವರು 1920–22 ರಲ್ಲಿ ಪ್ರಾರಂಭ ಮಾಡಿದ ಅಸಹಕಾರ ಅಹಿಂಸಾ ಚಳುವಳಿಯನ್ನು ಹಾಗೂ 1930–32 ರಲ್ಲಿ ನಡೆಸಿದ ನಾಗರಿಕಸೇವೆಯ ಅವಿದೇಯತೆಯ ಚಳುವಳಿಯನ್ನು ಹತ್ತಿಕಿದುದು ಉದಾಹರಣೆಗಳಾಗಿವೆ.

ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ ಬ್ರಿಟಿಷರಿಗೆ ಸಹಕಾರ ಯಾವ ರೀತಿಯಲ್ಲೂ ದೊರಕಲು ಅವಕಾಶವಿಲ್ಲದಂತಾದಾಗ, ಸೈಮನ್ ಆಯೋಗವನ್ನು ಕಳುಹಿಸಿದರು. ಅದರ ವೈಫಲ್ಯತೆಯಿಂದ ಪುನಃ ಮೂರು ದುಂಡು ಮೇಜಿನ ಸಮ್ಮೇಳನಗಳನ್ನು ನಡೆಸಿದರು. ಆದರೆ ಅವುಗಳೂ ಸಹ ಇಬ್ಬರ ನಡುವೆ ಹೊಂದಾಣಿಕೆ ತರಲು ವಿಫಲವಾದವು ಇದರ ಜೊತೆಗೆ ಬ್ರಿಟಿಷರೇ ಬೆಳೆಸಿ  ಪೋಷಿಸಿದ ಒಡೆದು ಆಳುವ ನೀತಿಯಿಂದ ಮುಸ್ಲಿಂಮರು ತಮಗೆ ಬೇರೆ ರಾಜ್ಯ ಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟರು. ಹೀಗಾಗಿ ಸಂವಿಧಾನ ಸುಧಾರಣೆಯ ದೃಷ್ಟಿಯಿಂದ 1935ರ ಕಾಯ್ದೆಯನ್ನು ಬ್ರಿಟಿಷ್ ಸಂಸತ್ತು ಅಂಗೀಕರಿಸಿತು. ಆದರೆ ಈ ಕಾಯ್ದೆಯ ಪ್ರಕಾರವೂ ಸಹ ಆಡಳಿತ ಗೌರ್ನರ್–ಜನರಲ್ನಲ್ಲಿ ಕೇಂದ್ರೀಕೃತವಾಗಿತ್ತು.

ಈ ಅವಧಿ ದೇಶಿಯರು/ದೇಶಿಯರ ವಿರುದ್ಧ ಹೋರಾಟ ನಡೆಸುವ ಕಾಲವಾಗಿತ್ತು. ಇದನ್ನು ಬ್ರಿಟಿಷರು ಪೋಷಿಸಿದರು.

**ನಾಲ್ಕನೆಯ ಹಂತ (1940–47)**

1935 ರ ಕಾಯ್ದೆಯಲ್ಲಿದ್ದ ಬಹುತೇಕ ಸುಧಾರಣೆಗಳನ್ನು ಜಾರಿಯಲ್ಲಿ ತರಲು ಸಾಧ್ಯವಾಗಲಿಲ್ಲ. ಏಕೆಂದರೆ ಈ ಅವಧಿಯಲ್ಲಿ ಎರಡನೆ ಮಹಾಯುದ್ಧ ಪ್ರಾರಂಭವಾಯಿತು. ಅಲ್ಲದೆ ಭಾರತದ ಜನತೆಯನ್ನಾಗಲಿ, ರಾಷ್ಟ್ರೀಯ ಕಾಂಗ್ರೆಸ್ನ್ನಾಗಲೀ ಕೇಳದೆ ಯುದ್ದಕ್ಕೆ ಭಾಗಿಗಳನ್ನಾಗಿ ಮಾಡಿದರು. ಕಾಂಗ್ರೆಸ್ ನೇತಾರರ ಭಾವನೆಗಳನ್ನು ಬಗ್ಗೆ ಯಾವ ಗಮನವನ್ನು ಹರಿಸಲಿಲ್ಲ. ಆದುದರಿಂದ 1939 ರಲ್ಲಿ ಪ್ರಾಂತ್ಯ ಸರ್ಕಾರಗಳಿಂದ ತಮ್ಮ ಸಚಿವ ಸ್ಥಾನಗಳಿಗೆ ರಾಜೀನಾಮೆ ನೀಡಿದರು. ಆಗ ಭಾರತೀಯರನ್ನು ತೃಪ್ತಿಗೊಳಿಸಲು ಬ್ರಿಟಿಷ್ ಸಾಮ್ರಾಜ್ಯದ ಅಂಗವಾಗಿದ್ದುಕೊಂಡು, ಸ್ವಾತಂತ್ರ್ಯವನ್ನು ಪಡೆಯಲು ಅವಕಾಶ ಮಾಡಿಕೊಡುತ್ತೇವೆ ಎಂದು ನಂಬಿಸಲು ಪ್ರಯತ್ನ ನಡೆಸಲಾಯಿತು. ಆದರೆ ಕಾಂಗ್ರೆಸ್ ಈಗಾಗಲೇ ಸಾಕಷ್ಟು ಬ್ರಿಟಿಷರನ್ನು ಅರ್ಥ. ಮಾಡಿಕೊಂಡಿದ್ದರಿಂದ ಕ್ವಿಟ್–ಇಂಡಿಯಾ ಚಳುವಳಿಯನ್ನು 1942ರಲ್ಲಿ ಪ್ರಾರಂಭಿಸಿತು.

ಬ್ರಿಟಿಷರು ಒಡೆದು ಆಳುವ ನೀತಿಯನ್ನು ಮುಂದುವರಿಸಿಕೊಂಡು ಹೋಗುತ್ತಲೇ ಬಂದರು. ಇದರ ಪರಿಣಾಮವೆಂದರೆ, ಮುಸ್ಲಿಂ ಲೀಗ್ – ತನಗೆ ಬೇರೆ ರಾಷ್ಟ್ರವನ್ನು ನೀಡದಿದ್ದರೆ ಇನ್ನಾವುದಕ್ಕೂ ನಾವು ಒಪ್ಪುವುದಿಲ್ಲವೆಂದು ಪಟ್ಟುಹಿಡಿದಿದ್ದರು. ಇದಕ್ಕೆ ಬ್ರಿಟಿಷರ ಪರೋಕ್ಷ ಸಹಕಾರ ಸಂಪೂರ್ಣವಾಗಿದ್ದಿತು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್, ಈ ಎರಡೂ ಸಂಘಗಳು ಯಾವ ಸುಧಾರಣೆಗಳಿಗೂ ಒಪ್ಪದಿದ್ದಾಗ 1946ರಲ್ಲಿ ಕ್ಯಾಬಿನೆಟ್ ಮಿಷನ್ ಯೋಜನೆಯನ್ನು ನೀಡಲಾಯಿತು. ಆದರೆ ಇದನ್ನು ಒಪ್ಪದಿದ್ದ ಮುಸ್ಲಿಂ ಲೀಗ್ ಮತೀಯ ಗಲಭೆಗಳು ನಡೆಯುವಂತೆ ಪ್ರಚೋದನೆ ಪ್ರಾರಂಭಿಸಿದರು. ಅಂತಿಮವಾಗಿ ಮೌಂಟ್ ಬ್ಯಾಟನ್ ಯೋಜನೆಯನ್ನು 1947ರಲ್ಲಿ ನೀಡಿ ಆ ಮೂಲಕ ದೇಶವನ್ನು ವಿಭಜಿಸಿ, ಭಾರತ ಹಾಗೂ ಪಾಕಿಸ್ತಾನ ಎಂಬ ಎರಡು ರಾಷ್ಟ್ರಗಳನ್ನು ರಚಿಸಿ ಸ್ವಾತಂತ್ರ್ಯ ನೀಡಲಾಯಿತು.

**ನಿಮ್ಮ ಪ್ರಗತಿ ಪರಿಶೀಲನೆ –1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶಿಲಿಸಿ.

**1. ಭಾರತದಲ್ಲಿ ಸಂವಿಧಾನ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ತಿಳಿಸಿರಿ.**

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

## 1.3 ಸಂವಿಧಾನ ರಚನೆ ಮತ್ತು ರಚನಾ ಸಭೆ

ಬ್ರಿಟಿಷರ ಆಡಳಿತಕ್ಕೆ ಒಳಗಾಗಿದ್ದ ಭಾರತೀಯರಲ್ಲಿ ದೇಶಪ್ರೇಮ, ಸಾಮಾಜಿಕ ಹಾಗೂ ರಾಜಕೀಯ ಪ್ರಜ್ಞೆಗಳನ್ನು ಉಂಡು ಮಾಡಲು ಅನೇಕ ಭಾರತೀಯ ಗಣ್ಯರು ಮತ್ತು ಸುಧಾರಕರು ಶ್ರಮಿಸಿದರು. ಇದರ ಬಗ್ಗೆ ಹಿಂದಿನ ಘಟಕದಲ್ಲಿ ವಿವರವಾಗಿ ತಿಳಿಯಲಾಗಿದೆ.

ಈಗ ಸಂವಿಧಾನವನ್ನು ರಚಿಸಲು ನಮ್ಮದೇ ಆದ ವ್ಯವಸ್ಥೆಯಿರಬೇಕು ಎಂಬುದನ್ನು ಭಾರತೀಯರು ಹೇಗೆ, ಯಾವಾಗ ಮನಗಂಡರು ಎಂಬುದನ್ನು ಐತಿಹಾಸಿಕವಾಗಿ ನೋಡುವುದಾದರೆ ದೇಶದ ಸ್ವಾತಂತ್ರ್ಯ ಹೋರಾಟಗಾರರು, ಅದರಲ್ಲೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ನಮಗೆ ಸ್ವರಾಜ್ಯ ಬೇಕು ಎಂಬ ಬೇಡಿಕೆಯ ಜೊತೆಗೆ 1905 ರಲ್ಲೇ ಸಂವಿಧಾನವನ್ನು ರಚಿಸಲು ಒಂದು ಸಭೆಯ ಅಗತ್ಯವಿದೆ ಎಂಬುದನ್ನು ತಿಳಿದು ಅದನ್ನು ವ್ಯಕ್ತಪಡಿಸಲಾಗಿತ್ತು. 1922 ರಲ್ಲಿ ಮಹಾತ್ಮಾ ಗಾಂಧೀಜಿಯವರು ಸಹ ದೇಶದ ಪ್ರತಿನಿಧಿಗಳೇ ನಿರ್ಧರಿಸಬೇಕು ಎಂಬುದನ್ನು ಹೇಳಿದ್ದರು. 1934 ರವರೆಗೆ ಇದನ್ನು ಕೇವಲ ಬರೀ ಮಾತಿನಲ್ಲಿ ಹೇಳುತ್ತಿದ್ದರು. ಆದರೆ 1934ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ತನ್ನ ಅಧಿವೇಶನದಲ್ಲಿ ಸಂವಿಧಾನ ರಚನಾ ಸಭೆಯ ಅಗತ್ಯದ ಬೇಡಿಕೆಯನ್ನು ಅಧಿಕೃತವಾಗಿ ಒಪ್ಪಿಕೊಳ್ಳಲಾಯಿತು ಮತ್ತು ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಇಲ್ಲಿಂದ ಮುಂದೆ ಭಾರತೀಯರೇ, ಭಾರತೀಯರಿಗೆ ಸಂವಿಧಾನವನ್ನು ರಚಿಸಬೇಕು ಎಂಬ ಬೇಡಿಕೆ ಅಧಿಕೃತವಾದ ತತ್ವವಾಯಿತು. 1938 ರಲ್ಲಿ ಜವಹರ್ ಲಾಲ್ ನೆಹರೂರವರು ಈ ಅಧಿಕೃತ ತತ್ವಕ್ಕೆ ಸ್ಪಷ್ಟನೆ ನೀಡಿದರು. ಅಂದರೆ "ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ರಾಜ್ಯವನ್ನು ಬಯಸುತ್ತದೆ; ಅಲ್ಲದೆ ಸ್ವತಂತ್ರ್ಯವಾದ ಭಾರತದ ಸಂವಿಧಾನವನ್ನು ಪರಕೀಯರ ಹಸ್ತಕ್ಷೇಪವಿಲ್ಲದೆ, ವಯಸ್ಕ ಮತದಾನದಿಂದ ಆಯ್ಕೆಯಾದ ಭಾರತೀಯ ಪ್ರತಿನಿಧಿಗಳಿಂದಲೇ ಸಿದ್ಧವಾಗಬೇಕು ಎಂಬುದನ್ನು ಸ್ಪಷ್ಟ ಪಡಿಸಿದ್ದರು". 1939ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಂವಿಧಾನ ರಚನಾ ಸಭೆಯ ಅಗತ್ಯವನ್ನು ಪುನರುಚ್ಚರಿಸಿತು. ಹೀಗೆ ಇಂತಹ ಬೇಡಿಕೆ 1940 ರವರೆಗೆ ಮುಂದುವರಿದಿತ್ತು. ಎರಡನೆ ಮಹಾಯುದ್ಧದ ನಂತರ ಬ್ರಿಟಿಷರು, ಭಾರತೀಯರ ಬೇಡಿಕೆಯನ್ನು ಒಪ್ಪಿಕೊಂಡರು. 1942ರ ಕ್ರಿಪ್ಸ್ ಯೋಜನೆಗನುಸಾರವಾಗಿ ಈ ಬೇಡಿಕೆಯನ್ನು ಅಧಿಕೃತವಾಗಿ ಬ್ರಿಟಿಷ್ ಸರ್ಕಾರ ಒಪ್ಪಿಕೊಂಡಿತು. ಅಲ್ಲದೆ ಸಂವಿಧಾನ ಸಭೆಯನ್ನು ರಚಿಸಲಾಗುವುದು ಎಂಬುದನ್ನು ಸಹ ತಿಳಿಸಿದರು. ಅಂತಿಮವಾಗಿ ಈ ಭರವಸೆ – 1946ರ ಕ್ಯಾಬಿನೆಟ್ ಮಿಷನ್ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಪೂರ್ಣಗೊಂಡಿತು ಮತ್ತು ಸಂವಿಧಾನ ರಚನಾ ಸಭೆಯನ್ನು ಅದರಂತೆ ರಚಿಸಲಾಯಿತು.

### 1. ಸಂವಿಧಾನ ರಚನಾ ಸಭೆಯ ರಚನೆ

ಕ್ಯಾಬಿನೆಟ್ ಮಿಷನ್ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಸಂವಿಧಾನ ಸಭೆಯ ರಚನೆಯನ್ನು ಮಾಡಲಾಯಿತು. ಅದು ಈ ಕೆಳಕಂಡಂತಿದೆ.

1. ಪ್ರತಿಯೊಂದು ಪ್ರಾಂತ್ಯ ಮತ್ತು ಪ್ರತಿಯೊಂದು ದೇಶೀಯ ಸಂಸ್ಥಾನಗಳಿಂದ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ನಿರ್ಧರಿಸಲಾಯಿತು. ಇದಕ್ಕೆ ಆಧಾರ ಆಯಾ ಪ್ರಾಂತ್ಯ ಮತ್ತು ಸಂಸ್ಥಾನಗಳ ಜನಸಂಖ್ಯೆ. ಅದಕ್ಕನುಗುಣವಾಗಿ ಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಧರಿಸಲಾಯಿತು. ಸುಮಾರು ಒಂದು ಲಕ್ಷ ಜನಸಂಖ್ಯೆಗೆ ಒಬ್ಬ ಪ್ರತಿನಿಧಿ ಎಂಬುದು ಹೆಚ್ಚು ಕಡಿಮೆ ನಿರ್ಧಾರವಾಯಿತು. ಹಾಗಾಗಿ ಪ್ರಾಂತ್ಯಗಳು ಅಂದರೆ ಬ್ರಿಟಿಷ್-ಇಂಡಿಯಾದಿಂದ 296 ಸದಸ್ಯರನ್ನು ಆಯ್ಕೆ ಮಾಡಲು ಮತ್ತು ದೇಶೀಯ ಸಂಸ್ಥಾನಗಳಿಂದ 93 ಸದಸ್ಯರನ್ನು ನಾಮಕರಣ ಮಾಡುವಂತೆ ನಿರ್ಧರಿಸಲಾಯಿತು.
2. ಪ್ರತಿಯೊಂದು ಪ್ರಾಂತ್ಯಗಳಲ್ಲಿ – ಮುಸ್ಲಿಂ, ಸಿಖ್ ಮತ್ತು ಉಳಿದವರ ಜನ ಸಂಖ್ಯೆಗನುಗುಣವಾಗಿ, ಪ್ರತಿನಿಧಿಗಳ ಸಂಖ್ಯೆಯನ್ನು ಹಂಚಲಾಯಿತು.
3. ಏಕ ಮತವನ್ನು ವರ್ಗಾಯಿಸುವ ತತ್ವಕ್ಕನುಗುಣವಾಗಿ, ಪ್ರತಿಯೊಂದು ಜನಾಂಗದವರು, ಪ್ರಾಂತ್ಯಗಳ ಶಾಸನ ಸಭೆಗಳಿಂದ ಅವರ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾಗಿತ್ತು.
4. ದೇಶೀಯ ಸಂಸ್ಥಾನಗಳಿಂದ ಪ್ರತಿನಿಧಿಸುವ ಪ್ರತಿನಿಧಿಗಳನ್ನು ಹೇಗೆ ಚುನಾಯಿಸಬೇಕು ಎಂಬುದನ್ನು ಸಲಹೆ ತೆಗೆದುಕೊಂಡು, ನಿರ್ಧರಿಸುವುದು, ಎಂಬವು ಈ ಆಯೋಗದ ಶಿಫಾರಸ್ಸುಗಳು.

### 2. ಸಂವಿಧಾನ ರಚನಾ ಸಭೆಯ ಚುನಾವಣೆ

1946ರ ಜುಲೈನಲ್ಲಿ ಸಂವಿಧಾನ ರಚನಾ ಸಭೆಗೆ ಚುನಾವಣೆ ನಡೆಯಿತು. ಪ್ರಾಂತೀಯ ಶಾಸಕಾಂಶಗಳು ಈ ಚುನಾವಣೆಯಲ್ಲಿ ಪಾತ್ರ ವಹಿಸಿದವು. ಕ್ಯಾಬಿನೆಟ್ ಆಯೋಗದ ಶಿಫಾರಸ್ಸಿನಂತೆ ಪರೋಕ್ಷ ಚುನಾವಣಾ ಪದ್ಧತಿಯನ್ನು ಕಾಂಗ್ರೆಸ್ ಒಪ್ಪಿಕೊಂಡಿತು. ಏನೆಂದರೆ ಆಗಿನ ಪರಿಸ್ಥಿತಿಯಲ್ಲಿ ವಯಸ್ಕ ಮತದಾನ ಪದ್ಧತಿಯನ್ನು ಅನುಸರಿಸಿ ನೇರ ಚುನಾವಣೆ ನಡೆಸುವುದು ಕಷ್ಟ ಮತ್ತು ನಿಧಾನವಾಗುತ್ತದೆ ಎಂಬುದನ್ನು ಮನಗಂಡು ಈ ಪರೋಕ್ಷ ವಿಧಾನಕ್ಕೆ ಒಪ್ಪಿಕೊಂಡರು. ಎಲ್ಲಾ ಪ್ರಾಂತ್ಯಗಳಿಂದ ಕಾಂಗ್ರೆಸ್ 1585 ಸ್ಥಾನಗಳನ್ನು ಹೊಂದಿದ್ದು ಶೇಕಡ 51% ರಷ್ಟು ಸ್ಥಾನಗಳನ್ನು 1945ರ ಚುನಾವಣೆಯಲ್ಲಿ ಪಡೆದಿತ್ತು. ಆದುದರಿಂದ ಸಂವಿಧಾನ ರಚನಾ ಸಭೆಗೆ ನಡೆದ ಚುನಾವಣೆಯಲ್ಲಿ ಪಡೆದಿತ್ತು. ಆದುದರಿಂದ ಸಂವಿಧಾನ ರಚನಾ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುತೇಕ ಸ್ಥಾನಗಳನ್ನು ಆರಿಸಲು ಅವಕಾಶ ಸಿಕ್ಕಿತು. ಸಾಮಾನ್ಯ ವರ್ಗಕ್ಕೆ ಸೇರಿದ 202 ಸ್ಥಾನಗಳಿಗೂ ಕಾಂಗ್ರೆಸ್ ತನ್ನ ಪ್ರತಿನಿಧಿಗಳನ್ನು ಆಯ್ಕೆ ಮಾಡಿತು. ಆದರೆ ಇದರಲ್ಲಿ ಮುಸ್ಲಿಂ ಮತ್ತು ಸಿಖ್ ಜನಾಂಗದ ಪ್ರತಿನಿಧಿಗಳಿರಲಿಲ್ಲ. ಆದುದರಿಂದ ಈ ಸಂಖ್ಯೆಯ ಜೊತೆಗೆ 4 ಮುಸ್ಲಿಂ ಮತ್ತು ಒಬ್ಬ ಸಿಖ್ ಅಭ್ಯರ್ಥಿಯನ್ನು ಸಹ ಆಯ್ಕೆ ಮಾಡಲಾಯಿತು. ಹೀಗಾಗಿ 292 ಸ್ಥಾನಗಳ 208 ಸ್ಥಾನಗಳನ್ನು ಕಾಂಗ್ರೆಸ್ ಪಡೆಯಿತು. ಮುಸ್ಲಿಂ ಲೀಗ್ 7 ಸ್ಥಾನಗಳನ್ನು ಪಡೆದು, ಎಲ್ಲಾ ಸ್ಥಾನಗಳಿಗೂ ಮುಸ್ಲಿಂ ಪ್ರತಿನಿಧಿಗಳನ್ನು ಆಯ್ಕೆ ಮಾಡಿದರು. ಉಳಿದ 16 ಸ್ಥಾನಗಳಿಗೆ 3 ಸಿಖ್, ಪಂಜಾಬ್ ಯೂನಿಯನಿಟ್ಸ್-3, ಕಮ್ಯುನಿಸ್ಟ್-1, ಪರಿಶಿಷ್ಟಜಾತಿ-1, ಮತ್ತು 8 ಜನ ಸ್ವತಂತ್ರ್ಯವಾಗಿ ಆಯ್ಕೆಯಾದರು.

ಆದರೆ ದೇಶದ ವಿಭಜನೆಯಾದ ಮೇಲೆ ಮುಸ್ಲಿಂ ಲೀಗ್ ಪ್ರತಿನಿಧಿಗಳ ಸ್ಥಾನ ಖಾಲಿಯಾದ ನಂತರ ಕಾಂಗ್ರೆಸ್ಸ ಸಂಖ್ಯೆ ಶೇಕಡ 82 ರಷ್ಟು ಏರಿತು. ದೇಶೀಯ ಸಂಸ್ಥಾನಗಳು 93 ಸದಸ್ಯರನ್ನು ನಾಮಕರಣ ಮಾಡಿದವು. ಅಂದರೆ ಪ್ರಜಾಪ್ರಭುತ್ವ ತತ್ವಕ್ಕನುಸಾರವಾಗಿ ರಚಿಸಿದ ಸಂವಿಧಾನ ಸಭೆಯಲ್ಲಿ ಆಯ್ಕೆಯಾದ ಅಂದರೆ ನಾಮಕರಣಗಂಡ ಸದಸ್ಯರೂ ಇದ್ದರು.

ದೇಶ ವಿಭಜನೆಯಾದ ಮೇಲೆ ಸಂವಿಧಾನ ರಚನಾ ಸಭೆಯ ಸದಸ್ಯರ ಸಂಖ್ಯೆಯಲ್ಲಿ ಬದಲಾವಣೆಯಾಯಿತು. ಡಿಸೆಂಬರ್ 31, 1947 ರಲ್ಲಿ ಪ್ರಾಂತ್ಯಗಳು ಮತ್ತು ದೇಶೀಯ ಸಂಸ್ಥಾನಗಳಿಂದ ಕ್ರಮವಾಗಿ 229 ಮತ್ತು 70 ಸದಸ್ಯರನ್ನು ಸಭೆ ಒಳಗೊಂಡಿತ್ತು. ಇದೇ ರೀತಿ ಹಲವಾರು ಸಮಿತಿಗಳ ಸದಸ್ಯತ್ವವೂ ಸಹ ಬದಲಾಯಿತು.

ಬದಲಾದ ನಂತರ, ಸಂವಿಧಾನ ಸಭೆಯ ಸದಸ್ಯರ ಸಂಖ್ಯೆಯ ಬಗ್ಗೆ ಗಮನಹರಿಸಿದರೆ ತಿಳಿಯುವುದೇನೆಂದರೆ, ಅದರಲ್ಲಿ ಹಿಂದೂ ಸದಸ್ಯರು ಬಹು ಸಂಖ್ಯಾತರಾಗಿದ್ದರು ಎನ್ನುವುದು. ಇದಕ್ಕೆ ಮುಖ್ಯ ಕಾರಣ ದೇಶದ ವಿಭಜನೆ ಆದರೂ ಸಹ ಸಂಖ್ಯಾತರಾಗಿದ್ದರು ಎನ್ನುವುದು. ಇದಕ್ಕೆ ಮುಖ್ಯ ಕಾರಣ ದೇಶದ ವಿಭಜನೆ ಆದರೂ ಸಹ ಹಿಂದುಗಳಲ್ಲದೆ ಬೇರೆಯವರಿಗೂ ಸಹ ಈ ಸಭೆಯಲ್ಲಿ ಪ್ರಾತಿನಿಧ್ಯ ಸಾಕಷ್ಟು ಪಡೆದಿದ್ದರು.

ಕಾಂಗ್ರೆಸ್ ಸದಸ್ಯರೇ ಹೆಚ್ಚು ಇದ್ದ ಸಂವಿಧಾನ ರಚನಾ ಸಭೆಯಲ್ಲಿ ಕಾಂಗ್ರೆಸ್‌ನ ಪಾತ್ರವೂ ವಿಶೇಷವಾಗಿತ್ತು. ಕಾಂಗ್ರೆಸ್ಸಿನ ಪ್ರಮುಖ ವ್ಯಕ್ತಿಗಳು ಹಾಗೂ ಸ್ವಾತಂತ್ರ್ಯ ಹೋರಾಟದ ಮಹಾ ಪುರುಷರೆಂದು ಪ್ರಸಿದ್ಧಿಯಾಗಿದ್ದ ಜವಹರ್ ಲಾಲ್ ನೆಹರು, ವಲ್ಲಭಬಾಯ್ ಪಟೇಲ್, ಡಾ. ರಾಜೇಂದ್ರ ಪ್ರಸಾದ್ ಮತ್ತು ಮೌಲಾನ ಅಬ್ದುಲ್ ಕಲಮ್ ಆಜಾದ್ ನಿರ್ವಹಿಸಿದ ಪಾತ್ರ ಅಮೂಲ್ಯ ಮತ್ತು ರಚನಾತ್ಮಕವಾಗಿತ್ತು. ಇವರೆಲ್ಲರೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೂ, ಮಂತ್ರಿಗಳೂ ಆಗಿದ್ದರಿಂದ ಸಂವಿಧಾನ ಸಭೆಯಲ್ಲಿ ಇವರ ಸಲಹೆಗಳಿಗೆ ಹೆಚ್ಚು ಪ್ರಾಶಸ್ತ್ಯ ದೊರೆಯುತ್ತಿತ್ತು. ಇವರೆಲ್ಲರೂ ಸಂವಿಧಾನದ ರಚನೆಯಲ್ಲಿ ವಿಶೇಷ ಪ್ರಭಾವವನ್ನು ಬೀರಿರುವರು. ಇವರಲ್ಲದೆ ಇನ್ನೂ ಅನೇಕ ಮಂದಿ ತಮ್ಮ ಕೊಡುಗೆಯನ್ನು ನೀಡಿ ಸಂವಿಧಾನ ರಚನೆಗೆ ಸಹಾಯ ಮಾಡಿದ್ದಾರೆ. ಹೆಚ್.ವಿ.ಕಾಮತ್, ಕೆ. ಸಂತಾನಮ್, ಟಿ.ಟಿ. ಕೃಷ್ಣಮಚಾರಿ, ಕೆ.ಎಂ. ಮುನ್ಸಿ, ಡಾ.ಎಸ್. ರಾಧಕೃಷ್ಣನ್ ಮುಂತಾದ ಸದಸ್ಯರ ಪಾತ್ರವನ್ನು ಮರೆಯುವಂತಿಲ್ಲ. ಹೊರಗಿನಿಂದ ಗಾಂಧಿಜಿಯವರ ಪ್ರಭಾವವೂ ವಿಶೇಷವಾಗಿತ್ತು ದೇಶೀಯ ಸಂಸ್ಥಾನಗಳಿಂದ ಎ. ರಾಮಸ್ವಾಮಿ ಮೊದಲಿಯಾರ್, ಸಿಪಿ. ರಾಮಸ್ವಾಮಿ ಅಯ್ಯರ್, ಕೆ. ಹನುಮಂತಯ್ಯ, ಎಸ್. ನಿಜಲಿಂಗಪ್ಪ, ಮುಂತಾದ ಗಣ್ಯರು ಸಹ ಪ್ರತಿನಿಧಿಗಳಾಗಿ ಮುಖ್ಯ ಪಾತ್ರ ವಹಿಸಿರುವರು. ಅಲ್ಲದೆ, ಸಂವಿಧಾನ ರಚನಾ ಸಭೆಯಲ್ಲಿ ಮಹಿಳಾ ಸದಸ್ಯರೂ ಸಹ ತಮ್ಮ ಕೊಡುಗೆಯನ್ನು ನೀಡಿರುವರು. ಮುಖ್ಯವಾಗಿ, ಶ್ರೀಮತಿ ಸುಚೇತ ಕೃಪಲಾನಿ, ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ಶ್ರೀಮತಿ ಸರೋಜಿನಿ ನಾಯ್ಡು ಮತ್ತು ಶ್ರೀಮತಿ ರಾಜಕುಮಾರಿ ಅಮೃತಕೌರ್.

**3. ಸಂವಿಧಾನ ರಚನಾ ಸಭೆಯ ಸ್ಥಾನ**

ಈ ಪ್ರಶ್ನೆಯನ್ನು ಸಂವಿಧಾನ ರಚನಾ ಸಭೆಗೆ ಸಂಬಂಧ ಪಟ್ಟಂತೆ ಹಲವಾರು ಮಂದಿ ಮುಂದಿಟ್ಟಿದ್ದರು. ಈ ಸಭೆ ಮೊದಲಿಗೆ ಸೇರಿದಾಗ ಅಂದರೆ 1946 ಡಿಸೆಂಬರ್ 6 ರಂದು ಅದು ನ್ಯಾಯ ಸಮ್ಮತವಾದ ಸಭೆಯಾಗಿರಲಿಲ್ಲ. ಏಕೆಂದರೆ, ಕ್ಯಾಬಿನೆಟ್ ಮಿಷನ್ ಯೋಜನೆಯ ಆಧಾರದ ಮೇಲೆ – ಸಂವಿಧಾನ ರಚನಾ ಸಭೆಯನ್ನು ರಚಿಸಲಾಗಿತ್ತು. ಇದನ್ನು ಬಿಟ್ಟರೆ ಬ್ರಿಟಿಷ್ ಶಾಸಕಾಂಗ ಶಾಸನದ ಮೂಲಕ ಸಭೆಗೆ ಅಸ್ತಿತ್ವವನ್ನು ಕೊಟ್ಟಿರಲಿಲ್ಲ ಅಲ್ಲದೆ ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದು 1947 ರ ಆಗಸ್ಟ್ 15 ರಂದು ಅಲ್ಲಿಯವರೆಗೆ ಅದು ನ್ಯಾಯ ಸಮ್ಮತವಾದ ಸಭೆಯಾಗಿರಲಿಲ್ಲ.

ಸ್ವಾತಂತ್ರ್ಯ ಬರುವವರೆಗೂ ರಚನಾ ಸಭೆ ಪರಮಾಧಿಕಾರವುಳ್ಳ ಸಭೆಯಾಗಿರಲಿಲ್ಲ. ತನ್ನದೇ ಆದ ಇತಿ ಮಿತಿಗಳನ್ನು ಪಡೆದಿತ್ತು. ಆದರೆ 1947ರಲ್ಲಿ ಭಾರತದ ಸ್ವಾತಂತ್ರ್ಯ ಕಾಯ್ದೆಯನ್ನು ಅಂಗೀಕರಿಸಿದ ಏಮೇಲೆ, ಸಂವಿಧಾನ ರಚನಾ ಸಭೆಯ ಅಸ್ತಿತ್ವ ನ್ಯಾಯಯುತವಾಯಿತು. ಸಭೆಯ ಬಗ್ಗೆ ವ್ಯಕ್ತವಾಗಿದ್ದ ಅನುಮಾನಗಳು ಮತ್ತು ದೋಷಗಳೆಲ್ಲವನ್ನು ದೂರಮಾಡಲಾಯಿತು. ಹಾಗಾಗಿ, ಭಾರತದ ಪ್ರಜೆಗಳಿಗೆ ಸಂವಿಧಾನ ರಚಿಸಲು ಅಗತ್ಯವಾಗಿ ಬೇಕಾದ ಅವಶ್ಯಕವಾದ ಗುಣಗಳನ್ನು ಹೊಂದಿ ತನ್ನ ಕೆಲಸವನ್ನು ಸ್ವತಂತ್ರವಾಗಿ ಮಾಡಲು ರಚನಾ ಸಭೆ ಸಿದ್ಧವಾಯಿತು.

4. ಸಂವಿಧಾನ ರಚನಾ ಸಭೆಯ ಸಮಿತಿಗಳು

ಸಮವಿಧಾನಕ್ಕೆ ಸಂಬಂಧ ಪಟ್ಟ ವಿಷಯಗಳನ್ನು ವಿವರವಾಗಿ ಪರಿಶೀಲಿಸಲು ಸಂವಿಧಾನ ರಚನಾ ಸಭೆಯಲ್ಲಿ ಅನೇಕ ಸಮಿತಿಗಳು ರಚನೆಯಾದವು, ಅವುಗಳೆಂದರೆ,

1. ರೂಲ್ಸ್ ಆಫ್ ಪ್ರೊಸೀಜರ್ ಕಮಿಟಿ.
2. ಆರ್ಥಿಕ ಮತ್ತು ಸಿಬ್ಬಂದಿ ಸಮಿತಿ.
3. ಕ್ರೆಡ್ಗೆನ್ನಿಯಲ್ಸ್ ಸಮಿತಿ.
4. ಸದನ ಸಮಿತಿ.
5. ಪ್ರೆಸ್ಸ್ ಗ್ಯಾಲರಿ ಸಮಿತಿ.
6. ಸ್ಟೀರಿಂಗ್ ಸಮಿತಿ.
7. ಆರ್ಡರ್ ಆಫ್ ಬಿಜಿನೆಸ್ ಕಮಿಟಿ.
8. ಹಿಂದಿ ಭಾಷಾಂತರದ ಸಮಿತಿ.
9. ಉರ್ದು ಭಾಷಾಂತರ ಸಮಿತಿ.
10. ಭಾರತದ ಸ್ವಾತಂತ್ರ್ಯ ಕಾಯ್ದೆಯ ಪರಿಣಾಮವನ್ನು ಪರಿಶಿಲಿಸುವ ಸಮಿತಿ.
11. ರಾಜ್ಯಗಳ ಸಮಿತಿ.
12. ಅಧಿಕಾರಗಳ ಸಮಿತಿ. (Union Powers Committee)
13. ಕೇಂದ್ರ ಸಂವಿಧಾನ ಸಮಿತಿ.
14. ಪ್ರಾಂತ್ಯಗಳ ಸಂವಿಧಾನ ಸಮಿತಿ.
15. ಹಣಕಾಸು ವಿಷಯಗಳ ತಜ್ಞರ ಸಮಿತಿ
16. ಕರಡು ರಚನಾ ಸಮಿತಿ.
17. ಚೀಫ್ ಕಮೀಷನರ್ ಪ್ರಾಂತ್ಯಗಳ ಸಮಿತಿ.
18. ಕರಡು ಸಂವಿಧಾನದ ಪರಿಶೀಲನಾ ವಿಶೇಷ ಸಮಿತಿ.
19. ಅಡ್ ಹಾಕ್ ಕಮಿಟಿ ಆನ್ ನ್ಯಾಷನಲ್ ಫ್ಲ್ಯಾಗ್.
20. ಆಡ್ ಹಾಕ್ ಕಮಿಟಿ ಆನ್ ಸುಪ್ರೀಂಕೋರ್ಟ್.
21. ಭಾಷಾವಾರು ಪ್ರಾಂತ್ಯಗಳ ಸಮಿತಿ.
22. ಸಲಹಾ ಸಮಿತಿ.

ಈ ಸಲಹಾ ಸಮಿತಿ ಐದು ಉಪಸಿತಿಗಳನ್ನು ನೇಮಿಸಿಕೊಂಡಿತ್ತು ಅಔಇಗಳು

ಅ) ಮೂಲಭೂತ ಸಮಿತಿ

ಆ) ಅಲ್ಪ ಸಂಖ್ಯಾತರ ಸಮಿತಿ

ಇ) ಉತ್ತರ – ಪೂರ್ವ ಗಡಿ ಸಮಿತಿ

ಈ) ಉತ್ತರ ಪಶ್ಚಿಮ ಗಡಿ ಸಮಿತಿ

ಉ)ಕಮಿಟಿ ಆನ್ ಎಕ್ಸ್ ಕ್ಲೂಡೆಡ್ ಮತ್ತು ಪಾರ್ಷಿಯಲ್ಲಿ ಎಕ್ಸ್ ಕ್ಲೂಡೆಡ್ ಪ್ರದೇಶಗಳು

ಈ ಮೇಲಿನ ಎಲ್ಲಾ ಸಮಿತಿಗಳಲ್ಲಿ ಕರಡು ರಚನಾ ಸಮಿತಿ ಡಾ. ಅಂಬೇಡ್ಕರ್ ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದು ಪ್ರಮುಖವಾದದ್ದು ಮತ್ತು ಉತ್ತಮ ಕೆಲಸವನ್ನು ಮಾಡಿತು.

**ನಿಮ್ಮ ಪ್ರಗತಿ ಪರಿಶೀಲನೆ – 2**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶಿಲಿಸಿ.

**1. ಸಂವಿಧಾನ ರಚನಾ ಸಭೆಯ ಪಾತ್ರವನ್ನು ಚರ್ಚಿಸಿ.**

........................................................................................................................................

........................................................................................................................................

........................................................................................................................................

........................................................................................................................................

........................................................................................................................................

**ಸಂವಿಧಾನ ರಚನೆ**

ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿ ಡಾ. ರಾಜೇಂದ್ರ ಪ್ರಸಾದರವರನ್ನು ಆಯ್ಕೆ ಮಾಡಲಾಯಿತು. ಈ ಮುಂಚೆ ತಿಳಿಸಿದ ಹಲವಾರು ಸಮಿತಿಗಳ ವರದಿಗಳ ಆಧಾರದ ಮೇಲೆ, ಸಂವಿಧಾನದ ಕರಡನ್ನು ಸಿದ್ದಪಡಿಸಲಾಯಿತು ಈ ಕರಡನ್ನು "ಕರಡು ರಚನಾ ಸಮಿತಿ" ಸಿದ್ದಪಡಿಸಿತು.

ಈ ರೀತಿ ಸಿದ್ದಪಡಿಸಿದ ಸಂವಿಧಾನದ ಕರಡನ್ನು 1948 ರ ಜನವರಿ 21 ರಂದು ಸಂವಿಧಾನದ ರಚನಾ ಸಭೆಯ ಅಧ್ಯಕ್ಷರಿಗೆ ಒಪ್ಪಿಸಲಾಯಿತು. ಫೆಬ್ರವರಿ 26ರಂದು ಜನಾಭಿಪ್ರಾಯಕ್ಕೆ ಕರಡನ್ನು ಇಡಲಾಯಿತು. ಸಂವಿಧಾನದ ಕರಡನ್ನು 1948ರ ನವೆಂಬರ್ 5 ರಂದು ಸಂವಿಧಾನದ ರಚನಾ ಸಭೆಯ ಮುಂದೆ ಮಂಡಿಸಲಾಯಿತು. ಸಭೆಯಲ್ಲಿ ಧೀರ್ಘ ಚರ್ಚೆಯಾದ ನಂತರ, ಅಂಗೀಕಾರ ನೀಡಿ ಕರಡನ್ನು ಅನುಮೋದಿಸಲಾಯಿತು. ಇದಕ್ಕೆ ಬೇಕಾದಷ್ಟು ಬದಲಾವಣೆಗಳನ್ನು ಸಭೆ ಮಾಡಿತು. 1949ರ ನವೆಂಬರ್ 26 ರಂದು ಅಂತಿಮವಾಗಿ ಅಂಗೀಕರತವಾಯಿತು. ಹೀಗೆ, ಸಂವಿಧಾನ ರಚನಾ ಸಭೆ, 2 ವರ್ಷ, 11 ತಿಂಗಳು, 8 ದಿನಗಳನ್ನು ತೆಗೆದುಕೊಂಡು ಸ್ವಾತಂತ್ರ್ಯ ಭಾರತಕ್ಕೆ ಹೊಸದಾದ ಮತ್ತು ತನ್ನದೇ ಆದ ಸಂವಿಧಾನವನ್ನು ಸಿದ್ದಪಡಿಸಿತು. ಒಟ್ಟಾರೆ ಸಂವಿಧಾನ ರಚನಾ ಸಭೆ ಹನ್ನೊಂದು ಅಧಿವೇಶನಗಳನ್ನು 165, ದಿನಗಳಲ್ಲಿ ನಡೆಸಿ, ಅದರಲ್ಲಿ 114 ದಿನಗಳು ಕರಡು ಸಂವಿಧಾನವನ್ನು ಚರ್ಚಿಸಿ ಅಂತಿಮವಾಗಿ ಸಂವಿಧನದಲ್ಲಿ 395 ವಿಧಿಗಳು ಮತ್ತು 8 ಅನುಚ್ಛೇದಗಳನ್ನು ಹೊಂದಿತ್ತು. ಈ ಸಂವಿಧಾನ 1950ರ ಜನವರಿ 26ರಂದು ಜಾರಿಗೆ ಬಂದಿತು.

ಸಂವಿಧಾನ ರಚನಾ ಸಭೆಯಲ್ಲಿ ಕಾಂಗ್ರೆಸ್ ಅಗ್ರಸ್ಥಾನವನ್ನು ಪಡೆದಿತ್ತು ಅದರ ನೇತಾರರು ತಮ್ಮ ಪ್ರಭಾವವನ್ನು ವಿಶೇಷವಾಗಿ ಬೀರಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಕೈಗೊಂಡ ತೀರ್ಮಾನಗಳನ್ನು ಕಾಂಗ್ರೆಸ್ ಸದಸ್ಯರು ಸಂವಿಧಾನಕ್ಕೆ ಅಳವಡಿಸುವುದರಲ್ಲಿ ಯಶಸ್ವಿಯಾದ್ದರಿಂದ ಪರೋಕ್ಷವಾಗಿ ಕಾಂಗ್ರೆಸ್ ಸಂವಿಧಾನವನ್ನು ರಚ[illegible]ತೆಂದು ಟೀಕೆ ಮಾಡಲಾಗಿದೆ ಜೊತೆಗೆ ಭಾರತದ ಸಂವಿಧಾನ ಒಂದು "ಕಾಂಗ್ರೆಸ್ ಡಾಕ್ಯುಮೆಂಟ್" ನಂತೆ ಇದೆ. ಈ ಸಭೆ[illegible] ಸುಮಾರು ಶೇಕಡ 82 ರಷ್ಟು ಕಾಂಗ್ರಸ್, ಸರ್ಕಾರ ಎಂದರೆ ಕಾಂಗ್ರೆಸ್ ಆಗಿತ್ತು ಎಂದು ಟೀಕಿಸಲಾಗಿದೆ. ಆದರೂ [illegible] ವಾಸ್ತವ ಪಾತ್ರವನ್ನು ತಿಳಿಯಬೇಕು.

ಈ ಮೇಲಿನ ಟೀಕೆಗಳಲ್ಲಿ ಸತ್ಯಾಂಶಗಳಿದ್ದರೂ ಸಂವಿಧಾನ ರಚನಾ ಸಭೆಯ ವಿವಿಧ ವರ್ಗಗಳ ಪ್ರತಿನಿಧಿಗಳು ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೆಲಸ ಮಾಡಿ, ದೇಶದ ಪ್ರಗತಿಯನ್ನು ಗಮನದಲ್ಲಿಟ್ಟು ಸಂವಿಧಾನವನ್ನು ರಚಿಸಿದರು. ಭಾರತದ ಸಂವಿಧಾನ ಭಾರತೀಯರಿಂದಲೇ ರಚಿತವಾದ್ದರಿಂದ ಇನ್ನು ಜಾರಿಯಲ್ಲಿದೆಯೆಂದು ಗ್ರಾನವಿಲ್ಲೆ ಆಸ್ಟಿನ್ ಹೇಳಿರುವುದು ಸತ್ಯವಾಗಿದೆ. ಸಂವಿಧಾನ ರಚನಾ ಸಭೆಯಲ್ಲೂ ಕಾಂಗ್ರಸ್ ಪ್ರಭಾವ ವಿಶೇಷವಾಗಿದ್ದರೂ, ಅದು ಇಡೀ ರಾಷ್ಟ್ರವನ್ನು ಪ್ರತಿನಿಧಿಸಿತ್ತು. ಕಅಂಗ್ರೆಸ್ ಸದಸ್ಯರಲ್ಲಿ ಎಲ್ಲಾ ವರ್ಗಗಳಿಗೂ ಸೇರಿದ ಪ್ರತಿನಿಧಿಗಳಿದ್ದರು. ಇದನ್ನು ಯಾರು ಅಲ್ಲಗಳೆಯಲಾಗುವುದಿಲ್ಲ.

ಸಂವಿಧಾನ ರಚನಾ ಸಭೆ ಅಂದರೆ ಸ್ವತಂತ್ರ ಭಾರತದ ತಾತ್ಕಾಲಿಕ ಸಂಸತ್ತಾಗಿಯೂ ಕೆಲಸ ಮಾಡಿತು. ಕಅಂಗ್ರೆಸ್ ತಾತ್ಕಾಲಿಕ ಸರ್ಕಾರವನ್ನು ರಚಿಸಿತ್ತು. ಒಟ್ಟಿನಲ್ಲಿ ಕಾಂಗ್ರೆಸ್ ತಾತ್ಕಾಲಿಕ ಸರ್ಕಾರವನ್ನು ರಚಿಸಿತ್ತು. ಒಟ್ಟಿನಲ್ಲಿ ಕಾಂಗ್ರೆಸ್ ಪಕ್ಷದವರೇ ಮಹತ್ವ ಪೂರ್ಣವಾದ ಪಾತ್ರವನ್ನು ವಹಿಸಿ, ಸ್ವತಂತ್ರ ಭಾರತದ ಮೂಲಭೂತ ಕಾನುನುಗಳನ್ನು ಒಳಗೊಂಡ ಸಂವಿಧಾನವನ್ನು ರಚಿಸಲು ಕಅರಣ ಕರ್ತೃನಾದ ವ್ಯವಸ್ಥೆಯಾಗಿತ್ತು ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ.'

**ನಿಮ್ಮ ಪ್ರಗತಿ ಪರಿಶೀಲನೆ – 3**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶಿಲಿಸಿ.

**1. ಸಂವಿಧಾನ ರಚನೆಯ ಬಗ್ಗೆ ಒಂದು ಟಿಪ್ಪಣಿ ಬರೆಯರಿ.**

..................................................................................................................................

..................................................................................................................................

..................................................................................................................................

..................................................................................................................................

..................................................................................................................................

## 1.4 ಸಾರಾಂಶ

ನಮ್ಮ ಸಂವಿಧಾನವು ರಚನಾ ಸಭೆಯಿಂದ ರಚಿತಗೊಂಡಿದ್ದರು ಸಹ ಅದಕ್ಕೆ ಐತಿಹಾಸಿಕ ಹಿನ್ನೆಲೆ ಇರುವುದನ್ನು ಗುರುತಿಸಬಹುದು ಅಂದರೆ ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ಭಾರತೀಯರ ಒತ್ತಾಯದಿಂದ ಹಾಗೂ ಬ್ರಿಟೀಷರು ತಮ್ಮ ಆಡಳಿತದ ಅನುಕೂಲತೆಗಾಗಿ ಮಾಡಿಕೊಂಡಿದ್ದ ಕಾಯಿದೆಗಳು ಮುಂದೆ ಸಂವಿಧಾನ ಬೆಳವಣಿಗೆಗೆ ಸಹಾಯಕವಾದವು.

ಈ ಘಟಕದಲ್ಲಿ ಸಂವಿಧಾನ ರಚನಾ ಸಭೆಯ ಅಗತ್ಯ, ಅದಕ್ಕೆ ಉಂಟಾದ ಸನ್ನಿವೇಶಗಳು, ಸಂವಿಧಾನ ರಚನಾ ಸಭೆಯ ರಚನೆ ಹೇಗಾಯಿತು. ಇದರಲ್ಲಿ ಯಾರು ಯಾರು ಮುಖ್ಯ ಪಾತ್ರವನ್ನು ವಹಿಸಿದ್ದರು. ಇದರ ರಚನೆ, ಕಾರ್ಯದ ಬಗ್ಗೆ ಟೀಕೆಗಳು ಮತ್ತು ಸಂವಿಧಾನ ರಚನಾ ಸಭೆಯ ಬಗ್ಗೆ ಮೆಚ್ಚುಗೆಯನ್ನು ತಿಳಿದಿದ್ದೇವೆ.

## 1.5 ಕಠಿಣ ಪದಗಳು

ಪ್ರಾಂತ್ಯ : ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳನ್ನು ಪ್ರಾಂತ್ಯ ಎಂದು ಕರೆಯಲಾಗಿತ್ತು. ಅವುಗಳು 9 ಇದ್ದವು.

ದೇಶೀಯ ಸಂಸ್ಥಾನಗಳು : ಇಂಡಿಯಾ ದೇಶದ ರಾಜರುಗಳಿಂದ ಆಳಲ್ಪಟ್ಟ ಪ್ರದೇಶಗಳನ್ನು ದೇಶೀಯ ಸಂಸ್ಥಾನಗಳು ಎಂದು ಕರೆಯಲಾಗಿತ್ತು ಇಂತಹವು ಸುಮಾರು 600 ಇದ್ದವು.

## 1.6 ಕೆಲವು ಉಪಯುಕ್ತ ಗ್ರಂಥಗಳು

ಡಾ. ಎಹ್.ಎಮ್. ರಾಜಶೇಖರ – ಭಾರತ ಸರ್ಕಾರ ಮತ್ತು ಗಾಜಕೀಯ

ಡಾ. ಕೆ.ಜೆ. ಸುರೇಶ್ – ಭಾರತ ಸರ್ಕಾರ ಮತ್ತು ರಾಜಕೀಯ

ಡಾ. ಟಿ.ಡಿ. ದೇವೇಗೌಡ – ಭಾರತ ಸಂವಿಧಾನ ಮತ್ತು ಸರ್ಕಾರ

ಡಾ. ಟಿ.ಡಿ. ದೇವೇಗೌಡ – ಭಾರತ ಸಂವಿಧಾನ

ಡಾ. ಗುರುಮೂರ್ತಿ – ಭಾರತ ಸರ್ಕಾರ ಮತ್ತು ರಾಜಕೀಯ

ಎಂ. ನಂಜುಂಡಸ್ವಾಮಿ – ಭಾರತದ ಸಂವಿಧಾಸ ಮತ್ತು ಸರ್ಕಾರ

## 1.7 ನಿಮ್ಮ ಪ್ರಗತಿ ಪರಿಶೀಲನೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ –1**

1. ನೋಡಿ ವಿಭಾಗ 1.2

**ನಿಮ್ಮ ಪ್ರಗತಿ ಪರಿಶೀಲನೆ –2**

1. ನೋಡಿ ವಿಭಾಗ 1.3

**ನಿಮ್ಮ ಪ್ರಗತಿ ಪರಿಶೀಲನೆ –3**

1. ನೋಡಿ ವಿಭಾಗ 1.3

# ಘಟಕ – 2 : ರಾಜ್ಯಗಳ ಪುನರ್ ರಚನೆ

ರಚನೆ

2.0 ಉದ್ದೇಶಗಳು

2.1 ಪೀಠಿಕೆ

2.2 ರಾಜ್ಯಗಳ ಪುನರ್ ರಚನೆಗೆ ಬೇಡಿಕೆ

2.3 ರಾಜ್ಯಗಳ ಪುನರ್ ವಿಂಗಡಣಾ ಆಯೋಗ

2.4 ರಾಜ್ಯಗಳ ಪುನರ್ ರಚನೆ ಕಾಯಿದೆ, 1956

2.5 ಭಾರತದ ಇತರ ಕಡೆಗಳಲ್ಲಿ ಬೇಡಿಕೆಗಳನ್ನು ಪುನರ್ ರಚಿಸುವ

2.6 ಭಾಷಾವಾರು ಪ್ರಾಂತ್ಯಗಳ ಪರವಾಗಿ ವಾದ

2.7 ಭಾಷಾವಾರು ಪ್ರಾಂತ್ಯಗಳ ವಿರುದ್ಧ ವಾದ

2.8 ಸಾರಾಂಶ

2.9 ಕಠಿಣ ಪದಗಳು

2.10 ಕೆಲವು ಉಪಯುಕ್ತ ಗ್ರಂಥಗಳು

2.11 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 2.0 ಉದ್ದೇಶಗಳು

ಈ ಘಟಕವನ್ನು ಅಭ್ಯಸಿಸಿದ ನಂತರ ನಿಮಗೆ

- ರಾಜ್ಯಗಳ ಪುನರ್ ರಚನೆಗೆ ಏಕೆ ಬೇಡಿಕೆ ಇತ್ತು
- ರಾಜ್ಯಗಳ ಪುನರ್ ರಚನೆಯ ಆಧಾರವನ್ನು ಮತ್ತು
- ರಾಜ್ಯಗಳ ಪುನರ್ ರಚನೆಯ ಬಗ್ಗೆ ಇದ್ದ ವಾದ ವಿವಾದಗಳನ್ನು ತಿಳಿಯಲು ಅನುಕೂಲವಾಗುತ್ತದೆ.

## 2.1 ಪೀಠಿಕೆ

ಕಾಲಕಾಲಕ್ಕೆ ಆದಂತು ಬೆಳವಣಿಗೆ ಮತ್ತು ಬದಲಾವಣೆಯ ಫಲವಾಗಿ ಭಾರತ ಇಂದು 28 ರಾಜ್ಯಗಳನ್ನು ಮತ್ತು 7 ಕೇಂದ್ರಾಡಳಿತ ಪ್ರದೇಶಗಳನ್ನೊಳಗೊಂಡ ಒಂದು ಒಕ್ಕೂಟ ರಾಷ್ಟ್ರವಾಗಿದೆ. ಬ್ರಿಟಿಷ್ ಕಾಲದಿಂದ ಪ್ರಾಂತ್ಯಗಳು ಅಸ್ತಿತ್ವದಲ್ಲಿದ್ದು 1773 ಕ್ಕಿಂತ ಮೊದಲು ಬಂಗಾಲದ ಪೋರ್ಟ್ ವಿಲಿಯಂ ಪ್ರಿಸಿಡಿನ್ಸಿ ಮದ್ರಾಸಿ ಪೋರ್ಟ್ ಸೈಂಟ್ ಜಾರ್ಜ್ ಪ್ರೆಸಿಡೆನ್ಸಿ ಮತ್ತು ಬಾಂಬೆ ಪ್ರೆಸಿಡೆನ್ಸಿ ಎನ್ನುವ ಮೂರು ಪ್ರಾಂತ್ಯಗಳಿದ್ದವು. ಪೋರ್ಟ್ ವಿಲಿಯಂ ಪ್ರಿಸಿಡೆನ್ಸಿ ಅತೀ ದೊಡ್ಡದಾಗಿದ್ದ ಕಾರಣ ಅದನ್ನು 1836 ರಲ್ಲಿ ಬಂಗಾಲದ ಪೋರ್ಟ್ ವಿಲಿಯಂ ಪ್ರೆಸಿಡಿನ್ಸಿ ಮತ್ತು ನಾರ್ತ್ ವೆಸ್ಟ್ ಪ್ರಾಂತ್ಯ ಎಂದು ವಿಂಗಡಿಸಿ ಅದಕ್ಕೆ ಪ್ರತ್ಯೇಕ ಪ್ರಾಂತ್ಯಾಧಿಕಾರಿಯನ್ನು ನೇಮಿಸಲಾಯಿತು.

ಹಾಗೆಯೇ ಬ್ರಿಟಿಷ್ ಬಲೂಚಿಸ್ಥಾನ, ಡೆಲ್ಲಿ, ಮಾರವಾರ, ಕೊಡಗು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಮತ್ತು ಪಂಚ ಪಿಪ್ ಲೋಡಾ ಎನ್ನುವ ಆರು ಮುಖ್ಯ ಕಮೀಸನರ್ ಪ್ರಾಂತ್ಯಗಳಿದ್ದವು. 1947ರ ದೇಶ ವಿಭಜನೆಯ ನಂತರ ಉತ್ತರ ಪಶ್ಚಿಮ ಗಡಿ ಪ್ರಾಂತ್ಯ ಮತ್ತು ಸಿಂಧ್ ಪ್ರಾಂತ್ಯಗಳು ಪಾಕಿಸ್ತಾನ ಭಾಗವಾದರೆ, ಪಂಜಾಬ್ ಮತ್ತಯು ಬಂಗಾಲವನ್ನು ಎರಡೂ ದೇಶಗಳಿಗೆ ಹಂಚಲಾಯಿತು. ಬಲೂಚಿಸ್ಥಾನವನ್ನು ಕೂಡಾ ಪಾಕಿಸ್ತಾನಕ್ಕೆ ನೀಡಲಾಯಿತು.

ಸ್ವತಂತ್ರ ಭಾರತವು, ಚೆನ್ನೈ, ಮುಂಬೈ, ಪಶ್ಚಿಮ ಬಂಗಾಲ, ಯುನೈಟಡ್ ಪ್ರಾಂತ್ಯ, ಬಿಹಾರ್, ಪೂರ್ವ ಪಂಜಾಬ್, ಕೇಂದ್ರೀಯ ಪ್ರಾಂತ್ಯಗಳು, ಅಸ್ಸಾಂ ಮತ್ತು ಒರಿಸ್ಸಾ ಎನ್ನುವ 9 ಗವರ್ನರ್ ಪ್ರಾಂತ್ಯಗಳು ಮತ್ತು ಡೆಲ್ಲಿ, ಅಜ್ಮೀರ್, ಮಾರ್ ವಾರ್, ಪಂತ್, ಪಿಪ್ ಲೋಡಾ, ಕೊಡಗು ಮತ್ತು ಅಂಡಮಾನ್ ನಿಕೋಬಾರ್ ದ್ವೀಪ ಎನ್ನುವ 5 ಕಮೀಶನರ್ ಪ್ರಾಂತ್ಯಗಳನ್ನೊಳಗೊಂಡಿತ್ತು.

ವಿಭಜನೆಯ ನಂತರ ದೇಶವನ್ನು ಒಗ್ಗೂಡಿಸುವ ದೇಶೀಯ ರಾಜ್ಯಗಳನ್ನು ಸೇರಿಸುವ ಮತ್ತು ಸಂವಿಧಾನ ರಚಿಸುವ ಸಮಸ್ಯೆಗಳು ದೇಶವನ್ನು ಕಾಡಿತು. ರಾಜರುಗಳು ಈ ದೇಶದಲ್ಲಿ ಐಕ್ಯವಾದ ಮೇಲೆ ದೇಶವನ್ನು ಒಗ್ಗೂಡಿಸುವ ಕಾರ್ಯ ಪ್ರಾರಂಭವಾಯಿತು. ಸಣ್ಣ ಪುಟ್ಟ ರಾಜ್ಯಗಳನ್ನು ಪ್ರಾಂತ್ಯಗಳಿಗೆ ಸೇರಿಸಲಾಯಿತು. ದೊಡ್ಡ ರಾಜ್ಯಗಳ ಪ್ರತ್ಯೇಕ ಪ್ರಾಂತ್ಯಗಳನ್ನು ಒಕ್ಕೂಟದ ಅಂಗಗಳಾಗಿ ಸೇರಿಸಲಾಯಿತು. ರಾಜಸ್ಥಾನ, ಸೌರಾಷ್ಟ್ರ, ಟ್ರಾವಂಕೂರ್– ಕೊಚ್ಚಿನ್, ಮೈಸೂರು, ಹೈದರಾಬಾದ್‌ಗಳನ್ನು ವಿಶೇಷ ಅಂಗಗಳಾಗಿ ಸೇರಿಸಿಕೊಳ್ಳಲಾಯಿತು. ಜಮ್ಮು ಮತ್ತು ಕಾಶ್ಮೀರಗಳನ್ನು ಕೂಡ ಒಕ್ಕೂಟದ ವಿಶೇಷ ಅಂಗಗಳಾಗಿ ಸೇರಿಸಿಕೊಳ್ಳಲಾಯಿತು.

1950 ರಲ್ಲಿ ಹೊಸ ಸಂವಿಧಾನ ಅಸ್ಥಿತ್ವಕ್ಕೆ ಬಂದ ನಂತರ ಒಕ್ಕೂಟದ ರಾಜ್ಯಗಳನ್ನು ಎ. ವಿಭಾಗ, ಬಿ. ವಿಭಾಗ, ಸಿ. ವಿಭಾಗ ಮತ್ತು ಡಿ. ವಿಭಾಗ ಎಂದು ವಿಂಗಡಿಸಲಾಯಿತು.

ಸಂವಿಧಾನ ಜಾರಿಗೆ ಬಂದಾಗ ಸ್ಥಾಪಿಸಲ್ಪಟ್ಟಂತಹ ರಾಜ್ಯಗಳು

| ಎ ವಿಭಾಗ | ಬಿ ವಿಭಾಗ | ಸಿ ವಿಭಾಗ | ಡಿ ವಿಭಾಗ |
|---|---|---|---|
| 1. ಅಸ್ಸಾಂ | 10. ಹೈದರಾಬಾದ್ | 19. ಅಜ್ಮೀರ್ | 29. ಅಂಡಮಾನ್ ಮತ್ತು ನಿಕೊಬಾರ್ |
| 2. ಬಿಹಾರ್ | 11. ಜಮ್ಮು ಮತ್ತು ಕಾಶ್ಮೀರ | 20. ಭೂಪಾಲ್ | |
| 3. ಮುಂಬೈ | 12. ಮಧ್ಯಪ್ರದೇಶ | 21. ಬಿಲಾಸಾಪುರ | |
| 4. ಮಧ್ಯಪ್ರದೇಶ | 13. ಮೈಸೂರು | 22. ಕೂಚ್-ಬಿಹಾರ್ | |
| 5. ಚೆನ್ನೈ | 14. ಪಟಿಯಾಲ ಮತ್ತು ಪೂರ್ವ ಪಂಜಾಬ್ | 23. ಕೊಡಗು | |
| 6. ಒರಿಸ್ಸಾ | 15. ರಾಜಸ್ಥಾನ | 24 ಡೆಲ್ಲಿ | |
| 7. ಪಂಜಾಬ್ | 16. ಸೌರಾಷ್ಟ್ರ | 25. ಹಿಮಾಚಲ ಪ್ರದೇಶ | |
| 8. ಯುನೈಟಡ್ ಪ್ರಾಂತ್ಯಗಳು | 17. ಟ್ರಾವಂಕೂರ್-ಕೊಚ್ಚಿನ್ | 26, ಕಚ್ | |
| 9. ಪಶ್ಚಿಮ ಬಂಗಾಲ | 18. ವಿಂದ್ಯಾ ಪ್ರದೇಶ | 27. ಮಣಿಪುರ | |
| | | 28. ತ್ರಿಪುರ | |

## 2.2 ರಾಜ್ಯಗಳ ಪುನರ್ ರಚನೆಗೆ ಬೇಡಿಕೆ

ರಾಜ್ಯ ಗಡಿಗಳ ಪುನರ್ ರಚನೆಯ ಬೇಡಿಕೆಯು, 1930 ರಲ್ಲಿ ಕೇಂದ್ರ ಸರ್ಕಾರದ ಗೃಹ ಕಾರ್ಯದರ್ಶಿ ಸರ್ ಹರ್ಬರ್ಟ್ ರಸಲೀಯವರು ಬಂಗಾಳ ಸರ್ಕಾರಕ್ಕೆ ಅದರ ವಿಭಜನೆಗೆ ಸಂಬಂಧಿಸಿದಂತೆ ಬರೆಯುವುದರ ಮೂಲಕ ಪ್ರಾರಂಭವಾಯಿತು. ಸಂವಿಧಾನ ರಚನಾಕಾರರು ಪ್ರಾಂತ್ಯಗಳ ಪುನರ್ ವಿಂಗಡಣೆಯಲ್ಲಿ ಮೂರು ಮುಖ್ಯ ತತ್ವಗಳನ್ನು ಅಳವಡಿಸಿಕೊಂಡಿದ್ದರು, ಅವುಗಳೆಂದರೆ– ಮೊದಲನೆಯದಾಗಿ ಈಗಿರುವ ಕೃತ್ರಿಮ (artificial) ಗುಣದ ಪ್ರಾಂತ್ಯಗಳು, ಸಾಮಾನ್ಯ ಲಕ್ಷಣಗಳಿಂದಾಗಿ ಚಿಕ್ಕದಾಗಿಸಿರುವ ಪ್ರಾಂತ್ಯಗಳ ಮತ್ತು ಸ್ಥಳೀಯ ಭಾಷೆಯನ್ನಾಧಾರಿತ ಭಾಷಾವಾರು ಪ್ರಾಂತ್ಯಗಳು, ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಪ್ರಾಂತೀಯ ಈಟಕಗಳ ರಚನೆಯನ್ನು ಭಾಷೆಯನ್ನಾಧರಿಸಿ ಮಾಡಬೇಕೆನ್ನುವುದು ಗಾಂಧಿಯವರ ಆಶಯವಾಗಿತ್ತು. 1921 ರಲ್ಲಿ ಭಾಷಾವಾರು ಸಿದ್ದಾಂತಕ್ಕೆ ಕಾಂಗ್ರೆಸ್ ಒಪ್ಪಿಗೆ ನೀಡಿತು. 1928 ರ ನೆಹರೂ ಆಯೋಗದ ವರದಿ ಕೂಡ ಭಾಷಾವಾರು ಪ್ರಾಂತ್ಯಗಳ ರಚನೆಗೆ ಸಮ್ಮತಿಸಿತು. ಈ ವರದಿ ಪರಕಾರ, ಭೌಗೋಳಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ ಜನರ ಅಭಿಪ್ರಾಯ ಮತ್ತು ಭಾಷೆಗಳ ಆಧಾರದ ಮೇಲೆ ಪ್ರಾಂತ್ಯಗಳನ್ನು ರಚಿಸಬೇಕೆನ್ನುವುದು. ಅವರ ಬೇಡಿಕೆಯಾಗಿತ್ತು.

1930 ರ ಸೈಮನ್ ಆಯೋಗದ ವರದಿ ಕೂಡ ಭಾಷಾವಾರು ಪ್ರಾಂತ್ಯಕ್ಕೆ ಬೆಂಬಲ ನೀಡಿತ್ತು. 1927, 1937 ಮತ್ತು 1938 ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗೆ ಕಾಂಗ್ರೆಸ್ ನಿರ್ಣಯ ಅಂಗೀಕಾರ ನೀಡಿತ್ತು. 1945 ರ ಚುನಾವಣಾ ಪ್ರಣಾಳಿಕೆಯಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆ ಕೂಡ ಒಂದಾಗಿತ್ತು. ಸಂವಿಧಾನ ರಚನಾ ಸಮಿತಿಯ ಮುಂದೆ ಭಾಷಾವಾರು ಪ್ರಾಂತ್ಯಗಳ ರಚನೆಗೆ ಬೇಡಿಕೆ ಇತ್ತು. ಹಾಗಾಗಿ 1948 ರಲ್ಲಿ ಸಮಿತಿಯು ಎಸ್. ಕೆ. ಧಾರ್ರವರ ನೇತೃತ್ವದಲ್ಲಿ ಭಾಷಾವೆರು ಪ್ರಾಂತ್ಯ ರಚನಾ ಸಮಿತಿ ರಚಿಸಲಾಯಿತು.

ಆದರೆ ಭಾಷಾವಾರು ಪ್ರಾಂತ್ಯ ರಚಿಸಿದರೆ ಅಲ್ಲಿರುವ ಅಲ್ಪಮತೀಯರ ಶೋಷಣೆ ನಡೆಯಬಹುದು ಮತ್ತು ರಾಷ್ಟ್ರದ ಏಕತೆಗೆ ಧಕ್ಕೆ ಬರುವ ಸಾಧ್ಯತೆ ಬಗ್ಗೆ ಧಾರ್ ಸಮಿತಿ ಎಚ್ಚರಿಸಿತು. ಆದರೆ ಈ ವಾದವನ್ನು ಕಾಂಗ್ರೆಸ್ ಒಪ್ಪಲಿಲ್ಲ. ಜವಹರ್‌ಲಾಲ್ ನೆಹರು, ವಲ್ಲಭಬಾಯಿ ಪಟೇಲ್ ಮತ್ತು ಪಟ್ಟಭೀ ಸೀತಾರಾಮಯ್ಯರವರನ್ನು ಒಳಗೊಂಡ ಜೆ.ವಿ.ಪಿ (J.V.P) ಸಮಿತಿ ಕೂಡ ಧಾರ್ ಸಮಿತಿಯ ಅಭಿಪ್ರಾಯವನ್ನು ಸಮ್ಮತಿಸಿತು. ಆದರೆ ಆಂಧ್ರ ರಾಜ್ಯದ ರಚನೆಯ ಬೇಡಿಕೆ ಬಹಳ ತೀವ್ರವಾಗಿತ್ತು. ಹಾಗಾಗಿ 1953 ರಿಂದ 1956 ರ ತನಕ ದೇಶದ ರಾಜಕೀಯದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆ ಮುಖ್ಯ ವಿಷಯವಾಗಿತ್ತು.

ಪ್ರತ್ಯೇಕ ಆಂಧ್ರ ರಾಜ್ಯದ ರಚನೆ ತೆಲಗು ಜನರ ಬೇಡಿಕೆಯಾಗಿತ್ತು. ಆದರೆ ಆಂಧ್ರ ಕೇಸರಿ ಎಂದು ಪ್ರಖ್ಯಾತರಾಗಿರುವ ಟಿ. ಪ್ರಕಾಶಂ ಮತ್ತು ಆಗಿನ ಮದ್ರಾಸಿನ ಮುಖ್ಯಮಂತ್ರಿ ಸಿ. ರಾಜಗೋಪಾಲಾಚಾರಿಯವರ ನಡುವೆ ಭಿನ್ನಾಭಿಪ್ರಾಯಗಳಿದ್ದವು. ಆಂಧ್ರ ರಾಜ್ಯದ ರಚನೆಗೆ ಒತ್ತಾಯಿಸಿ ಪಟ್ಟಿ ಶ್ರೀರಾಮಲು ಉಪವಾಸ ಪ್ರಾರಂಭಿಸಿದರು. ಅವರ ಮರಣದ ನಂತರ ಪರಿಸ್ಥಿತಿಯನ್ನು ಅರಿತ ನೆಹರು ಸರ್ಕಾರ ಭಾಷಾವಾರು ಪ್ರಾಂತ್ಯಗಳ ರಚನೆಗೆ, ಪಜಲ್ ಆಲಿ ನೇತೃತ್ವದಲ್ಲಿ ಕೆ.ಎಮ್. ಪಣಿಕ್ಕರ್ ಮತ್ತು ಎಚ್. ಕುಂದ್ರುನ್ರವರನ್ನೊಳಗೊಂಡ ಆಯೋಗವನ್ನು ರಚಿಸಿದರು.

## 2.3 ರಾಜ್ಯಗಳ ಪುನರ್ ರಚನಾ ಆಯೋಗ

ಆಂಧ್ರ ಪ್ರದೇಶದ ರಚನೆಯ ನಂತರ ಮೈಸೂರು ಮತ್ತು ಮುಂಬೈನಲ್ಲಿ ಭಾಷಾವಾರು ರಾಜ್ಯ ರಚನಾ ಬೇಡಿಕೆ ತೀವ್ರಗೊಂಡಿತು. ಆದರೆ ನೆಹರು ನೇತೃತ್ವದ ಸರ್ಕಾರ ರಾಷ್ಟ್ರವನ್ನು ಮತ್ತಷ್ಟು ವಿಭಾಗಿಸಲು ಸಮ್ಮತಿ ನೀಡಲಿಲ್ಲ. ಅದಾಗ್ಯೂ ಬೇಡಿಕೆಯ ತೀವ್ರತೆಯ ಹಿಚ್ಚಳವನ್ನು ಗಮನಿಸಿ ಕೇಂದ್ರ ಸರ್ಕಾರ ಫಜಲ್ ಆಲಿ ನೇತೃತ್ವದಲ್ಲಿ ರಾಜ್ಯಗಳ ಪುನರ್ ರಚನೆಗೆ ಆಯೋಗವನ್ನು ನೇಮಕ ಮಾಡಿತು. ಆಯೋಗದ ಸದಸ್ಯರಾಗಿ ಕೆ.ಎಂ. ಪಣಕರ್ ಹಾಗೂ ಹೆಚ್. ಕುಂರ್ರುವರನ್ನು ನೇಮಿಸಿತು.

ರಾಜ್ಯಗಳ ಪುನರ್ ರಚನಾ ಆಯೋಗವು ರಾಷ್ಟ್ರೀಯ ಹಿತಾಸಕ್ತಿ ಮತ್ತು ಪ್ರಾಂತೀಯ ಭಾವನೆಗಳನ್ನು ಸರಿತೂಗಿಸಿ ತನ್ನ ವರದಿಯನ್ನು ನೀಡಿತು. ದೇಶದ ಏಕತೆಯನ್ನು ಮುಖ್ಯವಾಗಿ ಪರಿಗಣಿಸಿದ ಈ ಆಯೋಗವು ಒಂದು ಭಾಷೆ ಒಂದು ರಾಜ್ಯ ಸಿದ್ಧಾಂತವನ್ನು ತಿರಸ್ಕರಿಸಿತು. ಆದರೆ ರಾಜ್ಯಗಳ ಪುನರ್ ವಿಂಗಡಣೆಯಲ್ಲಿ ಭಾಷೆಯನ್ನು ಮುಖ್ಯ ಮಾಪನವಾಗಿ ಅಳವಡಿಸಿಕೊಂಡಿತು. ಈ ಆಯೋಗದ ಪ್ರಕಾರ ಇಡೀ ದೇಶವನ್ನು 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶವನ್ನಾಗಿ ವಿಂಗಡಿಸಿತು. 1. ಚೆನ್ನೈ, 2. ಕೇರಳ, 3. ಮೈಸೂರು, 4.ಹೈದರಾಬಾದ್, 5.ಆಂಧ್ರಪ್ರದೇಶ, 6. ಮುಂಬೈ, 7.ವಿದರ್ಭ, 8. ಮಧ್ಯಪ್ರದೇಶ, 9.ರಾಜಸ್ಥಾನ, 10. ಪಂಜಾಬ್, 11.ಉತ್ತರಪ್ರದೇಶ, 12. ಬಿಹಾರ್, 13.ಪಶ್ಚಿಮಬಂಗಾಲ, 14.ಅಸ್ಸಾಂ, 15.ಒರಿಸ್ಸಾ, 16.ಜಮ್ಮು, 17.ಡೆಲ್ಲಿ, 18.ಮಣಿಪುರ, 19. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು. ಆಯೋಗದ ಶಿಫಾರಸ್ಸಿನಂತೆ ಎಲ್ಲಾ ರಾಜ್ಯಗಳನ್ನು ಎ, ಬಿ, ಸಿ, ಡಿ, ಎನ್ನುವ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಯಿತು. ಪಂಜಾಬಿ ಸುಭ, ಹಿಯಾಣ, ಮರುಪ್ರದೇಶ್ ರಚನೆಯನ್ನು ಆಯೋಗ ತಿರಸ್ಕರಿಸಿತು. ಮುಂಬೈಯನ್ನು ದ್ವಿಭಾಷಾ ರಾಜ್ಯವನ್ನಾಗಿ ಮುಂದುವರಿಸಲಾಯಿತು. ಜಾರ್ಕಂಡ್ ಮತ್ತು ನಾಗಾಲ್ಯಾಂಡ್ ಬುಡಕಟ್ಟು ರಾಜ್ಯಗಳ ರಚನೆಯನ್ನು ಕೂಡ ಆಯೋಗ ತಿರಸ್ಕರಿಸಿತು.

ಎಸ್.ಆರ್.ಸಿ. ವರದಿ ಬಗ್ಗೆ ಟೀಕೆ ಟಿಪ್ಪಣಿ

ನ್ಯೂಯಾರ್ಕ್ ಟೈಂ, ಮತ್ತು ಹಿಂದುಸ್ಥಾನ ಟೈಂ ಪತ್ರಿಕೆಗಳು, ಸಿ. ರಾಜಗೋಪಾಲಚಾರಿ ಮತ್ತು ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳು ಹಾಗೂ ಇತರರು ಭಾಷಾವಾರು ಪ್ರಾಂತ್ಯಗಳ ರಚನೆಯನ್ನು "ಭಾಷಾವಾರು ಹುಚ್ಚುತನ" ಎಂದು ಟೀಕಿಸಿ, ಇಡೀ ದೇಶವನ್ನು 5–6 ವಿಭಾಗಗಳಾಗಿ ವಿಂಗಡಿಸಲು ಸಲಹೆ ನೀಡಿದರು.

## 2.4 1956ರ ರಾಜ್ಯಗಳ ಪುನರ್ ರಚನಾ ಶಾಸನ

ಜನವರಿ 16, 1956 ರಂದು ಸರ್ಕಾರ ಈ ವರದಿಯ ಆಧಾರದ ಮೇಲೆ ತನ್ನ ನಿರ್ಣಯಗಳನ್ನು ಪ್ರಕಟಿಸಿತು. ಅವು ಈ ಕೆಳಗೆ ವಿವರಿಸಲಾಗಿದೆ. ಕಮೀಶನ್ ಸೂಚಿಸಿದ ಆಧಾರದ ಮೇಲೆ ಸರ್ಕಾರ ಕಮೀಶನ್‌ನ ಶಿಫಾರಸ್ಸುಗಳನ್ನು ಸ್ವೀಕರಿಸಿತು. ಅವು ಕೆಳಗೆ ವಿವರಿಸಲಾಗಿದೆ. ಕಮೀಶನ್ ಸೂಚಿಸಿದ ಆಧಾರದ ಮೇಲೆ ಸರ್ಕಾರ ಕಮೀಶನ್ನ ಶಿಫಾರಸ್ಸುಗಳನ್ನು ಸ್ವೀಕರಿಸಿತು. ಅವು ಯಾವುವೆಂದರೆ ಹೊಸ ರಾಜ್ಯಗಳಾದ ಕೇರಳ, ಕರ್ನಾಟಕ (ಇದನ್ನು ಮೈಸೂರು ಅಂತ ಕರೆಯಲಾಗಿತ್ತು) ಮತ್ತು ಮಧ್ಯ ಪ್ರದೇಶಗಳ ಸ್ಥಾಪನೆ ಮತ್ತು ಚೆನ್ನೈ, ರಾಜಸ್ಥಾನ, ಉತ್ತರಪ್ರದೇಶ, ಬಿಹಾರ್, ಪಶ್ಚಿಮಬಂಗಾಲ, ಅಸ್ಸಾಂ ಮತ್ತು ಒರಿಸ್ಸಾ ರಾಜ್ಯಗಳ ಮುಂದುವರಿಕೆ. ಬೇರೆ ಮಾತುಗಳಲ್ಲಿ ಎ) ಉತ್ತರ ಪ್ರದೇಶ ತನ್ನ ಸ್ಥಾಪಿತ ಈತಿಯಲ್ಲಿ ಮುಂದುವರಿಯುವುದು. ಬಿ) ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ಒರಿಸ್ಸಾ ಕಮೀಶನ್ ಸೂಚಿಸುತ್ತಿರುತ್ತದೆ. ಸಿ) ಚೆನ್ನೈ, ಕೇರಳ, ಕರ್ನಾಟಕ (ಮೈಸೂರು), ಬಿಹಾರ ಮತ್ತು ಪಶ್ಚಿಮ ಬಂಗಾಲ ಕೆಲವು ಕ್ಷುಲ್ಲಕ ಬದಲಾವಣೆಯೊಂದಿಗೆ ಕಮೀಶನ್ ಆಶಯ ಮೇರೆಗೆ ಮುಂದುವರಿಯುವುದು. ಡಿ) ಅಸ್ಸಾಂ ಕಮೀಶನ್ ಆಯದಾಗೆ ಇದ್ದರೂ, ತ್ರಿಪುರ ಆದರ ಸಂಸ್ಥಾನದಲ್ಲಿ ಸೇರಿಸಲಾಗಿಲ್ಲ. ಇ) ಮಹಾರಾಷ್ಟ್ರಕ್ಕೆ ಮರಾಠಿ ಮಾತನಾಡುವ ಮುಂಬೈ ಪ್ರದೇಶಗಳು ಸೇರಿವೆ. ಎಫ್) ರಾಜ್ಯಗಳ ಬೇರೆ ಬೇರೆ ವರ್ಗಗಳ ಮಧ್ಯೆ ಇರುವ ಸ್ಥಾಪಿತ ತಾರತಮ್ಯ ಹೋಯಿತು. ಇದರ ಅರ್ಥ, 371 ನೇ ವಿಧಿಯನ್ನು ರದ್ದುಪಡಿಸಿ ಭಾಗ ಸಿಬಿ ರಾಜ್ಯಗಳನ್ನು ಭಾಗ ಎ ರಾಜ್ಯಗಳಿಗೆ ಸಮತೋಲನ ಮಾಡುವುದು ಮತ್ತು ರಾಜ ಪ್ರಮುಖ ಸಂಸ್ಥೆಯನ್ನು ರದ್ದು ಪಡಿಸುವುದು ಮತ್ತು ಭಾಗ ಸಿ ರಾಜ್ಯಗಳು ಭಿನ್ನ ರಾಜ್ಯಗಳು ಗುಂಪಾಗಿ ಒಟ್ಟಾಗಿ ಹೊರಬೀಳುವುದು ಮತ್ತು ಈ ಸ್ಥಾಪಿತ ಭಾಗ ಸಿ ರಾಜ್ಯಗಳು, ಕೇಂದ್ರ ಸರ್ಕಾರದಿಂದ ನೇರವಾಗಿ ಆಡಳಿತಕ್ಕೊಳಪಡುವ ರಾಜ್ಯಗಳೊಂದಿಗೆ ಸೇರಿಸಿಕೊಳ್ಳುವ ಹಾಗಿಲ್ಲ ಜಿ) ತ್ರಿಪುರ ಕೇಂದ್ರ ಆಡಳಿತ ಪ್ರದೇಶವಾಗಿ ಮುಂದುವರಿಯುವುದು, ಎಚ್) ಕೇಂದ್ರ ಸರ್ಕಾರ ಕಮಿಶನ್ ಶಿಫಾರಸ್ಸು ಮೇರೆಗೆ (1)ಪಂಜಾಬ್‌ನ ಸ್ಥಾಪಿತ ರಾಜ್ಯಗಳು, ಪೆಪ್ಸು ಮತ್ತು ಹಿಮಾಚಲ ಪ್ರದೇಶಗಳನ್ನು ಸೇರಿಕೊಂಡು ಪಂಜಾಬ್ ರಾಜ್ಯ ಸ್ಥಾಪನೆ (2) ಉಳಿದದ್ದು ಹೈದರಾಬಾದ್ ರಾಜ್ಯ ಅಥವಾ ಪರೋಕ್ಷವಾಗಿ ಬೃಹತ್ತಾದ ಆಂಧ್ರ ರಾಜ್ಯ.

ಏಪ್ರಿಲ್ 1956 ರಂದು ರಾಜ್ಯಗಳ ಪುನರ್ ಸಂಘಟನೆ ಮಸೂದೆ ಜಾರಿಗೆ ಬಂದಿತು. ಜುಲಾಯಿ 1956ರಂದು ಅದು ಕೊನೆಯದಾಗಿ ಪಾಸಾಯಿತು ಮತ್ತು ನವೆಂಬರ್, 1956 ರಂದು ಕಾರ್ಯಗತವಾಯಿತು. ಕಾಯಿದೆ ಮೂಲ ಸಂವಿಧಾನ ಕೊಟ್ಟಂತಹ 4 ವರ್ಗಗಳ ರಾಜ್ಯಗಳನ್ನು ಕೈಬಿಟ್ಟು ಅವುಗಳನ್ನು ಎರಡು ವರ್ಗಗಳಾಗಿ ವಿಂಗಡಿಸಿತು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ರಾಜ್ಯಗಳ ಪುನರ್ ಸಂಘಟನಾ ಆಯೋಗ 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳು ಸ್ಥಾಪನೆಯನ್ನು ಶಿಫಾರಸ್ಸು ಮಾಡಿದರೂ, ಈ ಕಾಯಿದೆ ಈ ಕೆಳಗಿನ ಹಾಗೆ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳನ್ನಾಗಿ ರೂಪಿಸಿತು. ರಾಜ್ಯಗಳು 1.ಆಂಧ್ರಪ್ರದೇಶ, 2.ಅಸ್ಸಾಂ, 3.ಬಿಹಾರ್, 4.ಮುಂಬೈ, 5.ಜಮ್ಮು 6.ಕೇರಳ, 7.ಮಧ್ಯಪ್ರದೇಶ, 8.ಚೆನ್ನೈ, 9.ಮೈಶೂರು, 10.ಒರಿಸ್ಸಾ, 11.ಪಂಜಾಬ್, 12.ರಾಜಸ್ಥಾನ್, 13.ಉತ್ತರಪ್ರದೇಶ, 14.ವೆಸ್ಟ್ ಬೆಂಗಾಲ, ಕೇಂದ್ರಾಡಳಿತ. 1.ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳು, 2. ಡೆಲ್ಲಿ, 3. ಹಿಮಾಚಲ ಪ್ರದೇಶ, 4. ಲಕ್ಷಾದ್ವೀಪ ಮಿನೋಕೋಯ್ಮ ಮತ್ತು ಅಮಿನ್‌ದೀವಿ ದ್ವೀಪಗಳು 5. ಮಣಿಪುರ, 6. ತ್ರಿಪುರ.

### ಮಹರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ಸ್ಥಾಪನೆ

ಮುಂಬೈ ಪಟ್ಟಣದ ಸಂಧಿಗ್ದ ಪರಿಸ್ಥಿತಿಯಿಂದಾಗಿ ಮುಂಬೈಯನ್ನು ಮರಾಠಿ ಮತ್ತಯು ಗುಜರಾತಿ ರಾಜ್ಯಗಳಾಗಿ ವಿಂಗಡಿಸಲಿಕ್ಕೆ ಬಹಳಷ್ಟು ಎಸ್. ಅರ್.ಸಿ. ಯ ಪ್ರತಿರೋಧವಿತ್ತು. ಮರಾಠಿ ಭಾಷೆ ಮಾತನಾಡುವವರು ದೊಡ್ಡ ಭಾಷ ಗುಂಪನ್ನು ಹೊಂದಿ. ಆದರೆ ಪಟ್ಟಣ ಗುಜರಾತಿ ಹಣವಂತರ ಸಾರ್ವಭೌಮತ್ವದಲ್ಲಿತ್ತು. ಮುಂಬೈ ಪ್ರಾಂತ್ಯದ ಮರಾಠಿ ಮಾತನಾಡುವ ಜಿಲ್ಲೆಗಳಲ್ಲಿ ತುಂಬಾ ದಂಗೆ ಎದ್ದಿದ್ದರಿಂದ 80 ಜನರು ಪೋಲಿಸ್ ಪೈಯರಿಂಗನಿಂದ ಕೊಲ್ಲಲ್ಪಟ್ಟಿದ್ದರು. ಒತ್ತಡದಿಂದಾಗಿ ಕೇಂದ್ರ ರಾಜ್ಯ ವಿಭಜನೆಯ ಸೂಚನೆಯನ್ನು ಕೊಟ್ಟು ನಂತರ ಹಿಂತೆಗೆದುಕೊಂಡಿತ್ತು. ಆದರೆ ಮುಂಬೈ ಪಟ್ಟಣ ಭಿನ್ನ ರಜ್ಯವಾಗಿ ಆಳಲ್ಪಡುತ್ತಿತ್ತು. ಮುಂಬೈ ರಾಜಕೀಯ ಭಾಷಾವರಾಗಿ ಪರಿಣಮಿಸಿತು. ಎರಡು ದೊಡ್ಡ ಭಾಷಾವಾರು ಸಂಘಟನೆಗಳು, ಸಂಯುಕ್ತ ಮಹಾರಾಷ್ಟ್ರ ಸಮಿತಿ ಮತ್ತು ಮಹಾ ಗುಜರಾತ್ ಜನತಾ ಪರಿಷತ್ ಸ್ಥಾಪನೆಗೊಂಡವು ಮುಂಬೈಯಲ್ಲಿ 1957ರ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆಯಲು ತೀವ್ರವಾಗಿ ಕಷ್ಟ ಪಡಬೇಕಾಯಿತು. ಚಳುವಳಿ ಮುಂದುವರಿದು 1960ರಲ್ಲಿ ಕಾಂಗ್ರೆಸ್ ಪುನರ್ ಸಂಘಟನೆಗೆ ದಾರಿ ಮಾಡಿಕೊಟ್ಟಿತ್ತು. ಮಹಾರಾಷ್ಟ್ರದ ಭಾಗವಾಗಿ ಸೇರ್ಪಡೆಗೊಂಡ ಮುಂಬೈ ಪಟ್ಟಣ, ಮಹಾರಾಷ್ಟ್ರ ಮತ್ತು ಗುಜರಾತ್‌ಗಳಿಗಾಗಿ ಭಿನ್ನವಾದ ಭಾಷಾವಾರು ರಾಜ್ಯಗಳಾಗಿ ರಚನೆಗೊಂಡವು.

### ನಾಗಾಲ್ಯಾಂಡ್ ರಾಜ್ಯದ ಉದಯ

ನಾಗಾಲ್ಯಾಂಡ್ 1961ರಲ್ಲಿ ಹೊಸ ರಾಜ್ಯವನ್ನು ಸ್ಥಾಪಿಸಿದರು. ನಾಗಾಲ್ಯಾಂಡ್ ಹೆಸರಿನಲ್ಲಿ ನಾಗಾ ಹಿಲ್ಸ್ ಮತ್ತು ಟುಯೆನ್‌ಸಾಂಗ್ ಪ್ರದೇಶಗಳು ಸೇರಿಕೊಂಡವು ಮತ್ತು ಭಾರತದ 16ನೇರಾಜ್ಯವಾಗಿ ಸ್ಥಾನ ಕೊಡಲಾಯಿತು. ಅಸ್ಸಾಂನ ಆಡಳಿತದಿಂದ ನಾಗಾ ಜನರನ್ನು ಕೊನೆಯಲ್ಲಿ ಬಿಡುಗಡೆ ಮಾಡಿದರು ಮತ್ತು 1963 ರಲ್ಲಿ ನಾಗಾಲ್ಯಾಂಡ್ ರಾಜ್ಯ ಉದಯವಾಯಿತು.

### ಪಂಜಾಬಿನ ವಿಭಜನೆ

ಅಖಾಲಿದಳದ ಮುಂದಾಳತ್ವದಲ್ಲಿ ಪಂಜಾಬಿ ಮಾತನಾಡುವ ಜನರು ಪಂಜಾಬ್ ರಾಜ್ಯದಲ್ಲಿ ಮುಖ್ಯವಾಗಿ ಸಿಖ್ಖರು ಬೇರೇನೆ ಪಂಜಾಬಿ ಮಾತನ್ನಾಡುವ ರಾಜ್ಯವನ್ನು ಒತ್ತಾಯಿಸಿದರು, ಇನ್ನೊಂದು ಬದಿಯಲ್ಲಿ, ಹಿಂದುಗಳು ಜನಸಂಘ, ಹಿಂದು ಮಹಾಸಭಾ ಮತ್ತು ಆರ್ಯ ಸಮಾಜದ ಮುಂದಾಳತ್ವದಲ್ಲಿ ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಪಾಟಿಯಾಲ ಮತ್ತು ಪೂರ್ವ ಪಂಜಾಬ್ ರಾಜ್ಯಗಳು ಒಕ್ಕೂಟ ಇವುಗಳು ಹಿಂದೂ ಬಹುಮತದ ಅತ್ಯುನ್ನತ ಪಂಜಾಬ್ ನಿರ್ಮಾಣವನ್ನು ಒತ್ತಾಯಿಸಿದರು. ಎರಡೂ ಬದಿಗಳಿಂದ ಚಳುವಳಿ, ಹಿಂಸೆ, ಸತ್ಯಾಗ್ರಹ, ಪ್ರದರ್ಶನ ಮತ್ತು ಅನ್ನ ಸತ್ಯಾಗ್ರಹ, ಕೆಲವು ಸಲ ಉಪವಾಸ ಸತ್ಯಾಗ್ರಹಗಳೂ ನಡೆದವು. ಕೇಂದ್ರ ಅವರ. ಬೇಡಿಕೆಗಳನ್ನು ತಿರಸ್ಕರಿಸಿತು. ಅಖಾಲಿದಳದ ಎರಡು ಗುಂಪುಗಳಲ್ಲಿ ಒಂದು ಗುಂಪಿನ ಮುಂದಾಳು ಸಂತ ಪತೇಸಿಂಗ್ ಸೆಪ್ಟೆಂಬರ್ 25, 1966ರ ಒಳಗೆ ಪಂಜಾಬ್ ಮಾತನಾಡುವ ಸುಭಾರ ಬೇಡಿಕೆಯನ್ನು ಈಡೇರಿಸದಿದ್ದಲ್ಲಿ ತಾನು ಅಗ್ನಿಗಾಹುತಿ ಆಗುತ್ತೇನೆ ಅಂತ ಬೆದರಿಸಿದರು. ಪಂಜಾಬ್ ಪರಿಸ್ಥಿತಿ ಬಹಳ ಚಿಂತಾಜನಕವಾಗಿತ್ತು. ರಾಷ್ಟ್ರದ ಭಾವೈಕ್ಯತೆ ಮತ್ತು ರಕ್ಷಣೆಗೋಸ್ಕರ, ಕೇಂದ್ರ ನವೆಂಬರ್ 1, 1966 ರಂದು ಭಾಷೆ ಆಧಾರದಲ್ಲಿ ಪಂಜಾಬ್‌ನ್ನು ವಿಭಜಿಸುವ ನಿರ್ಧಾರ ಕೈಗೊಂಡಿತು. ಪಂಜಾಬಿ ಮಾತನಾಡುವ ಜಿಲ್ಲೆಗಳು ಪಂಜಾಬ್ ರಾಜ್ಯ ಸ್ಥಾಪಿಸಿತು. ಹಿಂದಿ ಮಾತನಾಡುವ ಜಿಲ್ಲೆಗಳು ಹೊಸ ಹರಿಯಾಣ ರಾಜ್ಯವನ್ನು ಸ್ಥಾಪಿಸಿದವು. ಹಿಮಾಚಲ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಹಿಂದಿ ಮಾತನಾಡುವ ಪಂಜಾಬ್ ಪರ್ವತ ಪ್ರದೇಶಗಳು ಹಿಮಾಚಲ ಪ್ರದೇಶಕ್ಕೆ ವರ್ಗಾವಣೆಗೊಂಡವು. ಚಂಡೀಗಡ ಕೇಂದ್ರಾಡಳಿತ ಪ್ರದೇಶವಾಗಿ ನಿರ್ಧರಿಸಿತು. ರಾಜ್ಯಗಳ ಸಂಖ್ಯೆ ಈಗ 17ಕ್ಕೆ ಏರಿತು.

ಜನವರಿ 1971ರಲ್ಲಿ ಹರಿಯಾಣ, ಹಿಮಾಚಲ ಪ್ರದೇಶ, ಕೇಂದ್ರಾಡಳಿತ ಪ್ರದೇಶವನ್ನು ರಾಜ್ಯದ ಸ್ಥಾನಮಾನಕ್ಕೆ ಏರಿಸಿತು.

**ಅಸ್ಸಾಂನ ಪುನರ್ ರಚನೆ**

ಏಪ್ರಿಲ್ 1970 ರಲ್ಲಿ ಅಸ್ಸಾಂನಲ್ಲಿ ಮೇಘಾಲಯ ಎಂಬ ವಿಭಿನ್ನ ಸ್ವಾಯತ್ತ ರಾಜ್ಯವನ್ನು ರಚಿಸಿದರು. ಇದೊಂದು ಅಸ್ಸಾಂನಲ್ಲೇ ಒಂದು ಸ್ವಾಯತ್ತ ರಾಜ್ಯವಾಗಿದ್ದು, ಇದಕ್ಕೆ ಅದರದ್ದೆ ಶಾಸಕಾಂಗ ಮತ್ತು ಮಂತ್ರಿಮಂಡಲವನ್ನು ಒದಗಿಸಲಾಯಿತು. ಆದರೆ ಇದು ಜನರಿಗೆ ತೃಪ್ತಿ ತರಲಿಲ್ಲ ಮತ್ತು ಸೆಪ್ಟೆಂಬರ್ 30, 1970 ರಂದು ಮೇಘಾಲಯ ಶಾಸನ ಸಭೆ ಇದನ್ನು ಸ್ವಾಯತ್ತ ರಾಜ್ಯದಿಂದ ಪೂರ್ಣ ರಾಜ್ಯದ ಸ್ಥಾನಕ್ಕೆ ಬದಲಾಯಿಸುವಂತೆ ಕೇಂದ್ರಕ್ಕೆ ಮನವಿ ಮಾಡಲು ನಿರ್ಣಯಿಸಲಾಯಿತು. ಈ ಬೇಡಿಕೆ ಕ್ರಮೇಣ ಪನವರಿ 1972ರಂದು ಒಪ್ಪಲಾಯಿತು ಮತ್ತು ಇದರಿಂದ ರಾಜ್ಯಗಳ ಸಂಖ್ಯೆ 19ಕ್ಕೆ ಏರಿತು. ಸಂಸತ್ತು ಉತ್ತರ ಪೂರ್ವ ಪ್ರದೇಶಗಳು (ಪುನರ್ ಸಂಘಟನೆ) ಕಾಯಿದೆ, 1971ನ್ನು ಪಾಸು ಮಾಡಿ, ಜನವರಿ 1972 ರಂದು ಜಾರಿಗೊಳಿಸಲಾಯಿತು. ಈ ಕಾಯಿದೆ ಮೇರೆಗೆ, ಮೇಘಾಲಯ, ಮಣಿಪುರ ಮತ್ತು ತ್ರಿಪುರ ಮೂರು ವಿಭಿನ್ನ ರಾಜ್ಯಗಳಾಗಿ ಉದಯವಾದುದು ಮತ್ತು ಅರುಣಾಚಲ ಪ್ರದೇಶ ಮತ್ತು ಮಿಜೋರಾಮ್ ಕೇಂದ್ರಾಡಳಿತ ಪ್ರದೇಶಗಳಾಗಿ ರೂಪುಗೊಂಡವು.

**ಸಿಕ್ಕಿಂ 22 ನೇ ರಾಜ್ಯವಾಗಿ ಉದಯ**

ಸೆಪ್ಟೆಂಬರ್ 7, 1974 ರಂದು ಸಂಸತ್ತು ಒಂದು ಕಾಯಿದೆಯನ್ನು ಪಾಸು ಮಾಡಿ ಸಿಕ್ಕಿಂಗೆ ಕೂಡಿರುವ ಎಂಬ ಸ್ಥಾನವನ್ನು ಕೊಡಲಾಯಿತು. ಕೂಡಿಕೊಂಡಿರುವ ರಾಜ್ಯದ ಸ್ಥಾನಮಾನ ಒಂದು ವರ್ಷದೊಳಗೆ ಕೊನೆಗೊಂಡು ಏಪ್ರಿಲ್ 26, 1975ರಂದು ಸಿಕ್ಕಿಂ ಸಂಯುಕ್ತ ಭಾರತದ 22 ನೆ ರಾಜ್ಯವಾಗಿ ರೂಪುಗೊಂಡಿತು.

**23ನೇ ರಾಜ್ಯವಾಗಿ ಮಿಜೋರಮ್**

ಬ್ರಿಟಿಷ್ ಆಡಳಿತದಲ್ಲಿ ಮಿಜೋರಮ್‌ನ್ನು ಉಸಾಯಿ ಪರ್ವತ ಜಿಲ್ಲೆ ಎಂದು ಕರೆಯುತ್ತಿದ್ದು, 1954 ರಲ್ಲಿ ಸಂಸತ್ತು ಕಾಯಿದೆ ಹೆಸರನ್ನು ಬದಲಾಯಿಸಿ ಮಿಜೋ ಪರ್ವತ ಜಿಲ್ಲೆ ಎಂದು ಕರೆಯಲಾಯಿತು. 1972ರಲ್ಲಿ ಅದನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡುವಾಗ ಅದನ್ನು ಮಿಜೋರಮ್ ಎಂದು ಕರೆದರು.

ಸ್ವಾತಂತ್ರ್ಯದೊಂದಿಗೆ, ಮಿಜೋರಮ್ ಅಸ್ಸಾಂನ ಜಿಲ್ಲೆಯಾಗಿ ರೂಪುಗೊಂಡಿತು. ಅಧಿಕಾರಿ ವೃಂದದವರ ಕಡಿಗಣಿಸಿದ್ದರಿಂದ ಭಾರತದ ಭಾಗವಾಗಿ ಮುಂದುವರಿಯುವುದು ಕೆಟ್ಟ ಕರಾರು ಎಂದು ಮಿಜೋಗಳು ಎನಿಸಿದ್ದರಿಂದ 1966 ರಲ್ಲಿ ಅವರು ಚಳುವಳಿಗಳನ್ನು ಪ್ರಾರಂಭಿಸಿದರು. ಇದು ವಿಕ್ಷೋಭೆ ಪ್ರದೇಶವಾಗಿ ಪ್ರಕಟಿಸಿದರು. ಸೈನ್ಯದ ಪಡೆ (ವಿಶೇಷಾಧಿಕಾರಿಗಳಯ) ಕಾಯಿದೆ ಕೂಡಾ ಜಾರಿಗೊಳಿಸಲಾಯಿತು. ಜೂನ್ 30, 1986ರಲ್ಲಿ ಐತಿಹಾಸಿಕ ಎರಡು ದಶಕಗಳ ಹಿಂದೆ ಬಂಡಾಯ ಕೊನೆಗೊಂಡಿತು. ಪರಿಣಾಮವಾಗಿ, ಸಂವಿಧಾನ (53ನೇ ತಿದ್ದುಪಡಿ( ಕಾಯಿದೆ, 1986 ಹೊಸ 371 – ಜಿ ವಿಧಿಯನ್ನು ಸೇರಿಸಿ ಮಿಜೋರಮ್ ಪೂರ್ಣ ಪ್ರಮಾಣದ ರಾಜ್ಯ ಸ್ಥಾನಮಾನ ಕೊಡಲಾಯಿತು.

**24 ನೇ ರಾಜ್ಯವಾಗಿ ಅರುಣಾಚಲ**

ಅರುಣಾಚಲ, ಪ್ರಾರಂಭದಲ್ಲಿ ಉತ್ತರ ಪೂರ್ವ ಗಡಿನಾಡು ಪ್ರತಿನಿಧಿತ್ವ ( )ಎಂದು ಕರೆಯಲ್ಪಟ್ಟಿತ್ತು. ಇದು ಭಾರತ ಸರ್ಕಾರದ ಆಡಳಿತದಲ್ಲಿ 1972, ಜನವರಿ 20 ರಂದು ಅರುಣಾಚಲ ಪ್ರದೇಶ ಎಂದು ಕರೆಯಲಾಯಿತು. 1986 ರಂದು ಇದು ಪೂರ್ಣ ಪ್ರಮಾಣದ ರಾಜ್ಯವಾಗಿ ಉದಯವಾಯಿತು.

**25 ನೇ ರಾಜ್ಯವಾಗಿ ಗೋವಾ**

1987, ಆಗಸ್ಟ್ 12 ರ ತನಕ ಗೋವಾ ಕೇಂದ್ರಾಡಳಿತ ಪ್ರದೇಶ. ಗೋವಾ, ದಾಮನ್ ಮತ್ತು ಡ್ಯೂ ಇದರ ಭಾಗವಾಗಿತ್ತು. ಆಗಸ್ಟ್ 12, 1987 ರ ಪಾರ್ಲಿಮೆಂಟ್ ಕಾಯಿದೆಯಿಂದ ಗೋವಾ 25ನೇ ರಾಜ್ಯವಾಗಿ ಉದಯವಾಯಿತು. ಡಾಮನ್ ಮತ್ತು ಡ್ಯೂ ಕೇಂದ್ರಾಡಳಿತ ಪ್ರದೇಶವಾಗಿಟ್ಟು, ಗೋವಾದ ರಾಜ್ಯಪಾಲರು ಆಡಳಿತ ನಡೆಸುವರು. ಇವರು ಸರಿಸಮಾನವಾಗಿ ಡಾಮನ್ ಮತ್ತು ಡ್ಯೂನ ಲೆಫ್ಟಿನೆಂಟ್ ರಾಜ್ಯಪಾಲ ಸ್ಥಾನಮಾನ ಹೊಂದಿರುವರು.

**26 ನೇ ರಾಜ್ಯವಾಗಿ ಛತ್ತೀಸ್ ಗಡ್**

ನವೆಂಬರ್ 1, 2000 ರಂದು ಛತ್ತೀಸ್‌ಗಡ್ ಎಂಬ ಹೊಸ ರಾಜ್ಯ ಸ್ಥಾಪನೆಗೊಂಡಿತು. ಇಲ್ಲಿ ಜನರ ಚಳುವಳಿಯನ್ನು ಕಾಣಲಿಲ್ಲ. ಬಿ.ಜೆ.ಪಿ. ಬೇಡಿಕೆ ಇಟ್ಟಿತು. ಏಕೆಂದರೆ 1998 ರ ಅಸೆಂಬ್ಲಿ ಚುನಾವಣೆಯ ನಂತರ ಛತ್ತೀಸ್‌ಗಡ್ ಪ್ರದೇಶದಲ್ಲಿ ಬಹುಮತ ಬರಬಹುದು ಅಂತ ಆಲೋಚಿಸಿತ್ತು. ಕ್ರಾಂಗ್ರೆಸ್ ಕೂಡಾ ಈ ಪ್ರದೇಶದಲ್ಲಿ ತನ್ನ ಪ್ರಭುತ್ವ ಕಳೆದುಕೊಳ್ಳಬಹುದೆಂಬ ಹೆದರಿಕೆಯಲ್ಲಿ ತನ್ನ ಒಪ್ಪಿಗೆ ನೀಡಿತು.

**ಉತ್ತರಾಂಚಲ 27 ನೇ ರಾಜ್ಯ**

ನವೆಂಬರ್ 9, 2000 ರಂದು ಉತ್ತರಾಚಲ ಎಂಬ ಹೊಸ ರಾಜ್ಯ ಸ್ಥಾಪನೆಗೊಂಡಿತು.

**28 ನೇ ರಾಜ್ಯವಾಗಿ ಜಾರ್ಖಂಡ್**

ನವೆಂಬರ್ 15, 2000 ರಂದು ಜಾರ್ಖಂಡ್ ಎಂಬ ಹೊಸ ರಾಜ್ಯ ಅಸ್ತಿತ್ವಕ್ಕೆ ಬಂತು.

## 2.5 ಭಾರತದ ಇನ್ನಿತರ ಭಾಗಗಳಲ್ಲಿ ಬೇರೆ ರಾಜ್ಯಗಳ ಬೇಡಿಕೆ

ಭಾರತದ ಇನ್ನಿತರ ಭಾಗಗಳಲ್ಲಿ ಬೇರೆ ರಾಜ್ಯ ಸ್ಥಾನಮಾನದ ಬೇಡಿಕೆಗಳಿದ್ದವು. ದಕ್ಷಿಣ ಬಿಹಾರದ ಛೋಟಾನಾಹಪುರ ಪ್ರದೇಶ ಮತ್ತು ಒರಿಸ್ಸಾದ ಹತ್ತಿರವಿರುವ ಬುಡಕಟ್ಟು ಜಿಲ್ಲೆಗಳಿಂದ ಜಾರ್ಖಂಡ್ ರಚನೆಯ ಬೇಡಿಕೆ ಆ ಪ್ರದೇಶದ 6 ಮಿಲಿಂಯ ಪರಿಶಿಷ್ಟ ಬುಡಕಟ್ಟು ಸದಸ್ಯರ ಏರುವ ಸ್ವಪ್ರಜ್ಞತೆಯ ಫಲವಾಗಿದೆ. ತೆಲಂಗಾನ ಜನರು ತೆಲಂಗಾನ ರಚಿಸಬೇಕಂತ ಉದ್ದಕ್ಕೂ ದನಿ ಏರಿಸಿದರು. ಹಿಂದಿನ ರಾಜತನ ಮೈಸೂರು ರಾಜ್ಯದ ಜನರು ಕರ್ನಾಟಕ ಜಿಲ್ಲೆಗಳಿಂದ ಬೇರೆಯಾಗಬೇಕೆಂಬ ಬೇಡಿಕೆ ಇತ್ತು. ಉತ್ತರ ಪ್ರದೇಶದ ಗುಡ್ಡ ಪ್ರದೇಶವಾದ ಕುಮಾ ಹೂಸ್ ಮತ್ತು ತೆರ್ರಿ ಗವ್ರಾಲ್ ತಮ್ಮದೇ ಸ್ವಂತ ರಾಜ್ಯದ ಬೇಡಿಕೆ ಇಟ್ಟಿದ್ದರು. ಪಶ್ಚಿಮ ಬಂಗಾಲದಲ್ಲಿ ಗೂರ್ಖಲ್ಯಾಂಡ್ ರಾಷ್ಟ್ರೀಯ ಲಿಬರೇಶನ್ ಫ್ರಂಟ್ (GNLF) ಕೆಲವೊಮ್ಮೆ ಹಿಂಸೆಯ ಮುಖಾಂತರ ದಾರ್ಜಿಲಿಂಗ್ ಜಿಲ್ಲೆಯ ಗೊರ್ಖಾಲ್ಯಾಂಡ್ ಬೇರೆ ರಾಜ್ಯವಾಗಬೇಕೆಂದು ಬೇಡಿಕೆ ಇಟ್ಟಿದ್ದರೂ ಇಲ್ಲಿ ಬೇರೆ ಛತ್ತೀಸ್‌ಗಡ್ ರಾಜ್ಯವಾಗಬೇಕೆಂದು ಕೂಗಾಟ ಇತ್ತು.

ಅಸ್ಸಾಂ ಬೊಡೊ ವಿದ್ಯಾರ್ಥಿಗಳ ಸಂಘಟನೆ (ABSU) ಬೇರೆ ರಾಜ್ಯವಾಗಬೇಕೆಂದು ಬೊಡೋ ಚಳವಳಿ ಮುಖಾಂತರ ಬೇಡಿಕೆ ಇಟ್ಟಿದ್ದರು ಮತ್ತು ಅವರ ಬೇಟಿಕೆಯ ಈಡೇರಿಕೆಗಾಗಿ ಬಹಳ ಹಿಂಸೆ ಮತ್ತು ಬಂದ್‌ಗಳು ನಡೆದವು.

ಬುದ್ದಿಸ್ಟರ ಲಡಕ್ ರಚನೆಗೆ ಜಮ್ಮು ಮತ್ತು ಕಾಶ್ಮೀರದಲ್ಲಿ ಯಾವುದೇ ನ್ಯಾಯೋಚಿತ ಮತ್ತು ಸಮಂಜಸ ಆತಿಥ್ಯ ಕೊಡದಿದ್ದರಿಂದ ಲಡಕ್‌ನ ಕೇಂದ್ರಾಡಳಿತ ಪ್ರದೇಶದ ಸ್ಥಾನಮಾನ ಕೊಡಬೇಕೆಂಬ ಬೇಡಿಕೆ ಇಟ್ಟು ಲಂಡನ್‌ನ ಬುದ್ದಿಸ್ಟರು ಚಳುವಳಿ ಪ್ರಾರಂಭಿಸಿದರು. ಕೆಲವೊಮ್ಮೆ ಇದು ಹಿಂಸೆಗೆ ತಿರುಗುತ್ತು.

ಡೆಲ್ಲಿ ಪುನರ್ ಸಂಘಟನಾ ಸಮಿತಿಯ ಶಿಫಾರಸ್ಸುಗಳು ಮೇಲೆ, ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿಗೆ ವಿಧಾನ ಸಭೆ ಮತ್ತು ಮಂತ್ರಿಮಂಡಲ ಸಂವಿಧಾನ (69 ನೇ) ತಿದ್ದುಪಡಿ ಕಾಯಿದೆ, 1991 ತರಲಾಯಿತು.

## 2.6 ಭಾಷಾವಾರು ರಾಜ್ಯಗಳ ಪರವಾಗಿ ವಾದ

ಭಾಷೆಗಳ ಆಧಾರ ಮೂಲವಾಗಿ ರಾಜ್ಯಗಳು ವಿಭಜನೆಯಾದರೂ ಭಾರತ ಒಂದೇ ರಾಷ್ಟ್ರವಾಗಿದೆ ಮತ್ತು ಹಲವು ಸಂದರ್ಭಗಳಲ್ಲಿ ರಾಜ್ಯ ಮತ್ತು ಭಾಷಾವಾರು ಸರಹದ್ದುಗಳು ಒಂದೇ ಕಾಲದಲ್ಲಿ ಸಂಭವಿಸಿದವು. ಸರ್ಕಾರದ ಮುಂದಾಳುಗಳು ಇಂತಹ ಪುನರ್ ಸಂಘಟನೆಗೆ ಪರವಾಗಿಲ್ಲವಾದರೂ, ಭಾಷೆಗಳ ಆಧಾರದ ಮೇಲೆ ಈ ಕೆಳಗಿನ ಕಾರಣಗಳಿಂದಾಗಿ ಅವರನ್ನು ಬಲಾತ್ಕಾರವಾಗಿ ರಾಷ್ಟ್ರ ವಿಭಜನೆ ಮಾಡುವ ಹಾಗಾಯಿತು.

1. ಬ್ರಿಟಿಷರು ಪ್ರಾರಂಭದಲ್ಲಿ ಯಾವುದೇ ಜ್ಞಾನವುಳ್ಳ, ವೈಜ್ಞಾನಿಕ ಅಥವಾ ಭಾಷಾವಾರು ವಿಷಯಗಳನ್ನು ಪರಿಗಣಿಸದೆ ಪ್ರಾಂತ್ಯಗಳನ್ನು ಕೂಡಿಸಿದರು.
2. ಒಂದೇ ರಾಜ್ಯದಲ್ಲಿ ಎರಡು ಅಥವಾ ಹೆಚ್ಚಿನ ಭಾಷೆ ಗುಂಪುಗಳು ಇದ್ದರೆ, ಅಶಿಸ್ತಿಗೆ, ಅಪ್ರಾವಿಣ್ಯತೆ, ಗಲಾಟೆ ಮತ್ತು ಅಲ್ಪಸಂಖ್ಯಾತ ಗುಂಪಿನ ರಾಜಕೀಯ, ಆರ್ಥಿಕ ದಂಡನೆಗೆ ಒಳಗಾಗುತ್ತದೆ.
3. ಭಾಷವಾರು ರಾಜ್ಯಗಳು ತತ್ವದಲ್ಲಿ ಜನರ ಅಪೀಲು ಇತ್ತು. ಆದುದರಿಂದ ವಿರೋಧ ಪಕ್ಷಗಳು, ಮುಖ್ಯವಾಗಿ ಕಮ್ಯುನಿಸ್ಟ್ ತಮ್ಮ ಶಾಸನಾತ್ಮಕ ಕಾರ್ಯಕ್ರಮಗಳ ಮೇಲೆ ಹತೋಟಿ ತರುವುದಕ್ಕಾಗಿ ಆಳುವ ಕಾಂಗ್ರೆಸ್ ಪಕ್ಷ ವಿರುದ್ಧ ಈ ಬುದ್ಧಿವಂತಿಕೆಯ ತಂತ್ರವನ್ನು ತಂದಿದ್ದವು.
4. ರಾಷ್ಟ್ರೀಯ ಭಾವೈಕ್ಯತೆ ಮಾರ್ಗವನ್ನು ಸುಗಮಗೊಳಿಸಲು ರಾಜ್ಯಗಳ ಪುನರ್ ರಚನೆ ಒಳ್ಳೆಯದು.

## 2.7 ಭಾಷಾವಾರು ರಾಜ್ಯಗಳ ವಿರುದ್ಧವಾದ

ಭಾಷಾವಾರು ರಾಜ್ಯಗಳ ರಚನೆಗೆ ಪರವಾಗಿ ಬಲಿಷ್ಟವದಗಳೂ ಇದ್ದರೂ, ಭಾರತದ ಭಾಷಾವಾರು ಪುನರ್ ವಿಭಜನೆಗೆ ಬಹಳ ವಿರೋಧವಿತ್ತು. ಬೇರೆ ಬಹಳ ಒತ್ತಡದ ಮತ್ತು ಮುಖ್ಯವಾದ ವಿಚಾರಗಳು ಇದ್ದದ್ದರಿಂದ ನೆಹರು ಮತ್ತು ಪಟೇಲ್ ಇಬ್ಬರೂ ಭಾಷಾವಾರು ಪುನರ್ ವಿಭಜನೆ ಮುಂದೂಡುವಂತೆ ಅಭಿಪ್ರಾಯ ಪಟ್ಟಿದ್ದರು. ಭಾಷಾವಾರು ತತ್ವದ ಆಚರಣೆ ವಿರುದ್ಧ ಡಾ.ಬಿ.ಆರ್. ಅಂಬೇಡ್ಕರ್‌ರವರು ಎಚ್ಚರಿಕೆ ನೀಡಿದರು ಮತ್ತು ಭಾಷಾವಾರು ಪ್ರಾಂತ್ಯಗಳ ರಚನೆ ಕೇಂದ್ರ ಮತ್ತು ರಾಜ್ಯಗಳ ಮಧ್ಯೆ ಅಗತ್ಯವಾದ ಆಡಳಿತಾತ್ಮಕ ಸಂಬಂಧದ ಪಾಲನೆಯನ್ನು ನಾಶ ಮಾಡುತ್ತದೆ ಎಂದು ಹೇಳಿದ್ದರು.

ಭಾಷಾವಾರು ರಾಜ್ಯಗಳ ವಿರುದ್ಧ ವಾದಗಳು ಈ ಕೆಳಗಿನಂತಿವೆ.

1. ಭಾಷವಾರು ಆಧಾರದ ಮೇಲಿನ ರಾಜ್ಯಗಳ ಪುನರ್ ರಚನೆ ರಾಜ್ಯಗಳ ಮಧ್ಯೆ ಕಾಲ್ಪನಿಕ ಪರದೆಯನ್ನು ರಚಿಸುತ್ತದೆ ಮತ್ತು ರಾಜ್ಯಗಳೊಳಗೆ ಹಲವು ಗಲಾಟೆಗಳಿಗೆ ಕಾರಣವಾಗುವುದು.
2. ಭಾಷವಾರು ರಾಜ್ಯಗಳು ರಾಷ್ಟ್ರದ ಐಕ್ಯತೆಗೆ ಕೆಡುಕನ್ನು ಉಂಟು ಮಾಡುತ್ತದೆ. ಅದು ಹೇಗೆಂದರೆ, ಪ್ರಾಂತ್ಯವಾದ ಚಿಂತನೆಯ ಬೆಳೆಯುವಿಕೆ, ರಾಜ್ಯಗಳ ಮಧ್ಯೆ ಆರ್ಥಿಕ ಸಹಕಾರಕ್ಕೆ, ತೊಡಕು ಮತ್ತು ರಾಷ್ಟ್ರದ ಶಾಂತ ಪರಿಸರವನ್ನು ಹಾಳು ಮಾಡುವುದು.
3. ಭಾಷವಾರು ರಾಜ್ಯಗಳ ರಚನೆ ಯೋಜನಾತ್ಮಕ ಆರ್ಥಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಏಕೆಂದರೆ, ರಾಜ್ಯಗಳಲ್ಲಿ ಸ್ಥಳೀಯ ಭಾವೈಕ್ಯತೆಯಿಂದಾಗಿ ಆ ರಾಜ್ಯದ ಸಂಪನ್ಮೂಲಗಳನ್ನು ಇತರ ರಾಜ್ಯಗಳ ಒಳ್ಳೆತನಕ್ಕೆ ಉಪಯೋಗಿಸಲಾಗುವುದಿಲ್ಲ.
4. ಭಾಷವಾರು ರಾಜ್ಯಗಳ ರಚನೆ ಪ್ರಾಂತ್ಯವಾದವನ್ನು ಬೆಂಬಲಿಸುವುದು ಮತ್ತು ಜಾಸ್ತಿ ರಾಜ್ಯಗಳ ಸ್ವಾಯತ್ತಗೆ ಬೇಡಿಕೆ ಸಲ್ಲಿಸುವುದು.

5. ಮಹಾರಾಷ್ಟ್ರ ಮತ್ತು ಕರ್ನಾಟಕ ಮಧ್ಯೆ ಬೆಳಗಾಂ ಜಿಲ್ಲೆಯ ಬಗ್ಗೆ ಮುಂದುವರಿಯುವಂತಹ ಕಚ್ಚಾಟದಿಂದಾಗಿ ಹಿಂಸೆ ಉದ್ಭವವಾಗಿರುವುದನ್ನು ಕಾಣುತ್ತಿದ್ದೇವೆ.

6. ಬೇರೆ ಬೇರೆ ರಾಜ್ಯಗಳಿಂದ ಹರಿದು ಹೋಗುವ ನದಿ ನೀರನ್ನು ಪಾಲು ಮಾಡುವ ಬಗ್ಗೆ ಕಚ್ಚಾಟ. ಉದಾಹರಣೆಗೆ ನರ್ಮದಾ ಮತ್ತು ಕಾವೇರಿ ಕಲಹಗಳು.

7. ಪ್ರತಿಯೊಂದು ರಾಜ್ಯ ತನ್ನ ಉಕ್ಕುಗಳ ಮಾನ್ಯತೆಯನ್ನು ಆಶಿಸುತ್ತದೆ. ಪ್ರತಿಯೊಂದು ರಾಜ್ಯ ಸಂಯುಕ್ತ ಮಂತ್ರಮಂಡಲದಲ್ಲಿ ತಮ್ಮ ಜನರಿಗೆ ಸ್ಥಾನ ಸಿಗಲು ಪ್ರಯತ್ನ ಮಾಡುತ್ತದೆ.

8. ಭಾಷವಾರು ಬಹುಮತೀಯರು ರಾಜ್ಯಗಳಲ್ಲಿ ತಾವು ಪ್ರಭಾವಿತರು ಎನಿಸುವರು ಮತ್ತು ಅಲ್ಪಸಂಖ್ಯಾತ ಭಾಷಗಾರರ ಜನ್ಮಸಿದ್ಧಹಕ್ಕುಗಳನ್ನು ತಿರಸ್ಕರಿಸಲಾಗುತ್ತದೆ.

## 2.8 ಸಾರಾಂಶ

ಪುನರ್ ರಚನೆ ರಾಜ್ಯಗಳ ಸಂಸ್ಕೃತಿ ಮತ್ತು ಭಾಷೆಯೊಂದಿಗೆ ರಾಜಕೀಯ ಪರಿಚಯ ಕೊಡುತ್ತದೆ. ಇದು ರಾಜ್ಯ ರಾಜಕೀಯವನ್ನು ಜನರಿಗೆ ಹತ್ತಿರಕ್ಕೆ ತರುತ್ತದೆ. ಸಾಂಪ್ರದಾಯಿಕ ದುರೀಣರಿಗೆ ಮತ್ತು ಪ್ರಭಾವವುಳ್ಳ ಪ್ರಾಂತೀಯ ಗುಂಪುಗಳು ಅಧಿಕಾರ ಉಪಯೋಗದ ಮೇಲೆ ತಮ್ಮ ನಿಯಂತ್ರಣ ಅಥವಾ ತೀರಾ ಪ್ರಭಾವ ಬೀರುವ ಹಾಗೆ ಮಾಡುತ್ತದೆ. ಆದುದರಿಂದ ಪುನರ್ ರಚನೆ ರಾಜ್ಯ ರಾಜಕೀಯವನ್ನು ಬಹಳ ಪ್ರಜಾಸತ್ತಾಲ್ಮಕವಾಗಿ ಮಾಡುತ್ತದೆ, ಇದರರ್ಥ, ರಾಜ್ಯ ರಾಜಕೀಯ ತೀವ್ರವಾಗಿ ಇಂಗ್ಲೀಷ್‌ಕ್ಕಿಂತ ಪ್ರಾಂತೀಯ ಭಾಷೆಯಲ್ಲೆ ನಡೆಸಲ್ಪಡುವುದು. ಆದುದರಿಂದ ಅಧಿಕಾರ ಸ್ವಲ್ಪ ಇಂಗ್ಲಿಷ್ ಮಾತನಾಡುವ ಗುಂಪಿಗಿಂತ ತರರಲ್ಲಿದೆ.

1956ರಲ್ಲಿದ್ದ 14 ರಾಜ್ಯಗಳ ಸಂಖ್ಯೆ 2000 ನೇ ಇಸವಿಯಲ್ಲಿ 28ಕ್ಕೆ ಏರಿತು. ಆದರೆ, ಇದರಲ್ಲಿ ಹಲವು ದೊಡ್ಡ ಗಾತ್ರದವು. ದೊಡ್ಡದು, ಅಂದರೆ ಪ್ರಪಂಚದ ಹಲವು ಸಾರ್ವಭೌಮ ರಾಜ್ಯಗಳಿಗಿಂತ ದೊಡ್ಡವು. ಹೂ, ರಾಜ್ಯಗಳ ರಚನೆಯನ್ನು ಕಡೆಗಣಿಸಲಾಗುವುದಿಲ್ಲ. ಆದರೆ ಚಿಕ್ಕವುಗಳ ಪರವಾದ ಮಾಡುವುದಾದರೆ, ಅವುಗಳಿಗೆ ಸಂಬಂಧವಾಗಿ ಆಡಳಿತಕ್ಕೆ ಬಹಳ ಸೂಕ್ತ ರಾಜ್ಯಗಳು ಬಹಳ ಸುಲಭವಾಗಿ ಸ್ಥಾಪಿತ ಆಸಕ್ತರ ಸಾರ್ವಭೌಮತ್ವಕ್ಕೆ ಒಳಗಾಗುತ್ತದೆ. ರಾಜ್ಯಗಳ ರಚನೆ ಅಂದರೆ ರಾಜ್ಯಪಾಲರು, ಮಲುಖ್ಯಮಂತ್ರಿಗಳು, ಮಂತ್ರಿಗಳು, ಮತ್ತು ಹೆಚ್ಚು ಎಂ.ಎಲ್.ಎ.ಗಳ ಸಂಖ್ಯೆ ಜಾಸ್ತಿ. ಅಂದರೆ ಖರ್ಚು ಹೆಚ್ಚುತ್ತದೆ. ಕೆಲವೊಮ್ಮೆ ಭಾಷಿ ಹೆಸರಿನಲ್ಲಿ ಮತ್ತು ಯಾವಾಗಲೂ ತಮ್ಮ ಪ್ರಾಂತ್ಯ ಅಥವಾ ರಾಜ್ಯದ ಹೆಸರಿನಲ್ಲಿ ವೃತ್ತಿನಿರತ ರಾಜಕಾರಣಿಗಳು ತಮ್ಮ ಸಂಕುಚಿತ ಗುರಿಗಳ ಈಡೇರಿಕೆಗಾಗಿ ಅವಿದ್ಯಾವಂತ ಜನರ ಸಂಕುಚಿತ ಮತ್ತು ಸಂಪ್ರದಾಯದ ವಿಚಾರಗಳನ್ನು ಹುರಿದುಂಬಿಸಬಹುದು.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶಿಲಿಸಿ.

**1. ಭಾರತದಲ್ಲಿ ರಾಜ್ಯಗಳ ಪುನರ್ ರಚನೆಯ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸಿ**

..............................................................................................................................

..............................................................................................................................

..............................................................................................................................

..............................................................................................................................

2. ಭಾರತದಲ್ಲಿ ರಾಜ್ಯಗಳ ಪುನರ್ ರಚನೆಯ ಬೇಡಿಕೆ ಬಗ್ಗೆ ಟಿಪ್ಪಣಿ ಬರೆಯಿರಿ.

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

3. ರಾಜ್ಯಗಳ ಪುನರ್ ರಚನಾ ಆಯೋಗದ ಬಗ್ಗೆ ಪ್ರಬಂಧ ಬರೆಯಿರಿ.

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

4. ರಾಜ್ಯಗಳ ಪುನರ್ ರಚನೆ ಕಾಯಿದೆ, 1956 ಬಗ್ಗೆ ಚರ್ಚಿಸಿರಿ.

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

5. ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯದ ರಚನೆ ಬಗ್ಗೆ ವಿವರಣೆ ಕೊಡಿರಿ.

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

6. 1971ರ ನಂತರ ರಾಜ್ಯಗಳ ಪುನರ್ ರಚನೆ ಬಗ್ಗೆ ವಿವರಿಸಿ.

.................................................................................................................................

.................................................................................................................................

.................................................................................................................................

.................................................................................................................................

.................................................................................................................................

## 2.9 ಕಠಿಣ ಪದಗಳು

ಪ್ರಾಂತ್ಯಗಳು – ಪ್ರಾಂತ್ಯ(ರಾಜ್ಯಗಳು)

ಭಾಷವಾರು – ಭಾಷೆಯ ಆಧಾರದ ಮೇಲೆ

## 2.10 ಕೆಲವು ಉಪಯುಕ್ತ ಗ್ರಂಥಗಳು


ಭಾರತ ಸರ್ಕಾರ (ಪ್ರಕಟಿತ) – ಭಾರತ ಸಂವಿಧಾನ

ಜೆ.ಸಿ ಜೊಹಾರಿ – ಇಂಡಿಯನ್ ಗವರ್ನ್‌ಮೆಂಟ್ ಅಂಡ್ ಪಾಲಿಟಿಕ್ಸ್

ಎಂ.ವಿ. ಪೈಲಿ – ಇಂಡಿಯನ್ ಕಾನ್‌ಸ್ಟಿಟ್ಯೂಷನ್

ಡಿ.ಡಿ. ಬಸು – ಪಾರ್ಲಿಮೆಂಟರಿ ಡೆಮಾಕ್ರಸಿ ಇನ್ ಇಂಡಿಯಾ

ಡಿ.ಸಿ. ಗುಪ್ತಾ – ಇಂಡಿಯನ್ ಗವರ್ನ್‌ಮೆಂಟ್ ಅಂಡ್ ಪಾಲಿಟಿಕ್ಸ್

ಕೆ.ವಿ.ರಾವ್ – ಪಾರ್ಲಿಮೆಂಟರಿ ಡೆಮಾಕ್ರಸಿ ಇನ್ ಇಂಡಿಯಾ

ಡಾ. ಟಿ.ಡಿ.ದೇವೇಗೌಡ – ಭಾರತ ಸರ್ಕಾರ ಮತ್ತು ರಾಜಕೀಯ

ಡಾ. ಟಿ.ಡಿ.ದೇವೇಗೌಡ – ಭಾರತ ಸಂವಿಧಾನ

ಡಾ. ಕೆ.ಜೆ. ಸುರೇಶ್ – ಭಾರತ ಸರ್ಕಾರ ಮತ್ತು ರಾಜಕೀಯ

ಡಾ. ಹೆಚ್.ಎಂ. ರಾಜಶೇಖರ – ಭಾರತ ಸಂವಿಧಾನ ಮತ್ತು ರಾಜಕೀಯ


## 2.11 ನಿಮ್ಮ ಪ್ರಗತಿ ಪರಿಶೀಲನೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ –1**

1. ನೋಡಿ ವಿಭಾಗ 4.1 ಮತ್ತು 4.2 ನೋಡಿ
2. ನೋಡಿ ವಿಭಾಗ 4.1
3. ನೋಡಿ ವಿಭಾಗ 4.3
4. ನೋಡಿ ವಿಭಾಗ 4.4
5. ನೋಡಿ ವಿಭಾಗ 4.5
6. ನೋಡಿ ವಿಭಾಗ 4.8

# ಘಟಕ – 3 : ಸಂವಿಧಾನದ ಪ್ರಮುಖ ಲಕ್ಷಣಗಳು

ರಚನೆ


3.0 ಉದ್ದೇಶಗಳು

3.1 ಪೀಠಿಕೆ

3.2 ಪ್ರಮುಖ ಲಕ್ಷಣಗಳು

3.2.1 ಲಿಖಿತ ಹಾಗೂ ಬೃಹತ್ ಸಂವಿಧಾನ

3.2.2 ಸರಳತೆ ಮತ್ತು ಕಠಿಣತೆಯ ಸಂಯೋಜನೆ

3.2.3 ಸಾರ್ವಭೌಮತ್ವ ಪ್ರಜಾಸತ್ತಾತ್ಮಕ ಗಣರಾಜ್ಯ

3.2.4 ಜಾತ್ಯಾತೀತ ರಾಷ್ಟ್ರ

3.2.5 ಸಾಮಾಜಿಕ ಸಮಾನತೆ

3.2.6 ಸಂಯುಕ್ತ ಮತ್ತು ಕೇಂದ್ರೀಕೃತ ಲಕ್ಷಣಗಳ ಮಿಶ್ರಣ

3.2.7 ಸಂಸದೀಯ ಸರ್ಕಾರ ಜೊತೆಗೆ ಚುನಾಯಿತ ಅಧ್ಯಕ್ಷ ಮುಖ್ಯಸ್ಥನಾಗಿ

3.2.8 ನಾಯಿಕ ವಿಮರ್ಶೆ ಮತ್ತು ಸಂಸದೀಯ ಶ್ರೇಷ್ಠತೆ ಮಧ್ಯೆ ಒಮ್ಮತ

3.2.9 ಮೂಲಭೂತ ಹಕ್ಕುಗಳು ಮತ್ತು ಸಂವಿಧಾನಿಕ ಪರಿಹಾರಗಳು

3.2.10 ಮೂಲಭೂತ ಕರ್ತವ್ಯಗಳು

3.2.11 ರಾಜ್ಯ ನಿರ್ದೇಶಕ ತತ್ವಗಳು

3.2.12 ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ–ಸಮುದಾಯ ಪ್ರತಿನಿಧಿತ್ವ ಇಲ್ಲಿದೆ

3.2.13 ಏಕಪೌರತ್ವ

3.2.14 ನ್ಯಾಯಾಂಗದ ಸ್ವಾತಂತ್ರ್ಯ

3.3 ಭಾರತ ಸಂವಿಧಾನದ ಟೀಕೆಗಳು

3.4 ಸಾರಾಂಶ

3.5 ಕಠಿಣ ಪದಗಳು

3.6 ಕೆಲವು ಉಪಯುಕ್ತ ಗ್ರಂಥಗಳು

3.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 3.0 ಉದ್ದೇಶಗಳು

ಭಾರತ ಸಂವಿಧಾನ ಒಂದು ಆದರ್ಶಾತ್ಮಕ ಸಂವಿಧಾನವೆಂದು ಪರಿಗಣಿಸಲಾಗಿದೆ. ಅದರ ಪ್ರಮುಖ ಲಕ್ಷಣಗಳಿಂದ ಅದು ಇತರರಿಗೆ ಮಾರ್ಗದರ್ಶಿಯಾಗಿದೆ. ಸಂವಿಧಾನ ಸಮಾಜದ ಮೌಲ್ಯಗಳನ್ನು ನಂಬಿಕೆ ಮತ್ತು ಆಸಕ್ತಿಗಳನ್ನು ಮಾತ್ರ ಸ್ಪಂದಿಸದೆ ಇಡೀ ಸಾಮಾಜಿಕ ಬದಲಾವಣೆ ಹಾಗೂ ಅಗತ್ಯವಾದ ಸ್ಥಿರತೆ ತರಲು ಒಂದು ಸಾಧನವಾಗಿದೆ. ಆದುದರಿಂದ ಭಾರತ ಪ್ರಜಾಪ್ರಭುತ್ವ ಯಶಸ್ವಿಗೆ ಕಾರಣರಾದ ಭಾರತದ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ತಿಳಿದುಕೊಳ್ಳುವ ಅಗತ್ಯವಿದೆ. ಈ ಘಟಕವನ್ನು ಅಭ್ಯಸಿಸಿದ ನಂತರ ನಿಮಗೆ,

- ಭಾರತದ ಸಂವಿಧಾನದ ಪ್ರಮುಖ ಲಕ್ಷಣಗಳು
- ನಮ್ಮ ಸಂವಿಧಾನದಲ್ಲಿ ಈ ಎಲ್ಲಾ ಲಕ್ಷಣಗಳನ್ನು ಏಕೆ ಸ್ಪಷ್ಟಪಡಿಸಲಾಯಿತು ಮತ್ತು
- ನಮ್ಮ ಸಂವಿಧಾನದ ಲಕ್ಷಣಗಳ ಬಗ್ಗೆ ಇರುವ ಟೀಕೆಗಳನ್ನು ತಿಳಿಯಲು ಸಹಾಯಕವಾಗಿದೆ.

## 3.1 ಪೀಠಿಕೆ

ಭಾರತ ಸಂವಿಧಾನ, ಸರಳ ರೀತಿಯಲ್ಲಿ ಹೇಳುವುದಾದರೆ, ಕಾನೂನಾತ್ಮಕ ನಿಯಮಾವಳಿಗಳ ಸಂಗ್ರಹಣೆ, ಇವು ಭಾರತ ಸರ್ಕಾರವನ್ನು ರಚಿಸುತ್ತದೆ. ಸಂವಿಧಾನ ರಚಿಸುವಾಗ ಹಾಗೂ ಜಾರಿಗೊಳಿಸುವಾಗ ಸಮಾಜದ ಲಕ್ಷಣಗಳಾಗಿರುವ ಸಾರ್ವಭೌಮತ್ವ ಹೊಂದಿದ ನಂಬಿಕೆಗಳು, ಆಸಕ್ತಿಗಳನ್ನು ಸ್ಪಂದಿಸಿ ಹಾಗೂ ಗೊಂದಲಕ್ಕೀಡು ಮಾಡುವ ನಂಬಿಕೆಗಳು ಮತ್ತು ಆಸಕ್ತಿಗಳು ಮಧ್ಯೆ ಒಪ್ಪಂದ ಏರ್ಪಡಿಸಿದೆ.

ಯಾವುದೇ ಸಂವಿಧಾನ ಪರಿಪೂರ್ಣತೆಯನ್ನು ಪಡೆದಿಲ್ಲ ಮತ್ತು ಭಾರತ ಸಂವಿಧಾನ ಅದಕ್ಕೆ ಹೊರತಾಗಿಲ್ಲ. ನಾವು ರಚಿಸಿದ ಸಂವಿಧಾನ ಸರ್ಕಾರಿ ಯಂತ್ರವನ್ನು ಮಾತ್ರ ರೂಪಿಸುವುದಲ್ಲದೆ, ಶಿಸ್ತುಬದ್ಧವಾಗಿ ಸಾಮಾಜಿಕ ಬದಲಾವಣೆ ತರುವ ಸಾಧನವಾಗಿದೆ. ಭಾರತ ಸಂವಿಧಾನ ಸಾಮರ್ಥ್ಯ ಮತ್ತು ಸ್ಥಿರತೆ ಕಾನೂನಾತ್ಮಕವಾಗಿ ಆರೋಗ್ಯಾತ್ಮಕ ಹಾಗೂ ಶಾಂತಿಯುತ ಸಾಮಾಜಿಕ ವ್ಯವಸ್ಥೆ ರೂಪಿಸುವ ತನ್ನ ಶಕ್ತಿಯ ಮೇಲೆ ಹೊಂದಿಕೊಂಡಿದೆ. ಸಂದರ್ಭ ಒದಗಿದಾಗ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಬದಲಾವಣೆಯನ್ನು ಮಾಡುತ್ತದೆ. ಈ ವಿಷಯದ ಮೇಲೆ ಸಂವಿಧಾನ ಆದರ್ಶವಾಗಿದೆ. ಕೆಲ ಟೀಕಾಕಾರರ ಹೇಳಿಕೆಗಳಿಗೆ ಪ್ರತಿಸ್ಪಂದಿಸುತ್ತದೆ.

## 3.2 ಪ್ರಮುಖ ಲಕ್ಷಣಗಳು

ನಮ್ಮ ಸಂವಿಧಾನದ ಹಲವು ಪ್ರಮುಖ ಲಕ್ಷಣಗಳು ಕೆಳಕಂಡಂತಿವೆ. ಅವುಗಳು

### 3.2.1 ಲಿಖಿತ ಮತ್ತು ಬೃಹತ್ ಸಂವಿಧಾನ

ಭಾರತ ಗಣರಾಜ್ಯವು ಲಿಖಿತ ಮತ್ತು ವಿಶಾಲ ಸಂವಿಧಾನವನ್ನು ಹೊಂದಿದೆ. ಇದು 395 ವೊಧಿಗಳು, 8 ಅನುಸೂಚಿಗಳು ಮತ್ತು 3 ಭಾಗಗಳನ್ನು ಒಳಗೊಂಡಿದೆ. ಅಮೇರಿಕಾ, ಕೆನಡ ಮತ್ತು ಫ್ರಾನ್ಸ್ ಸಂವಿಧಾನಗಳ ಹಾಗೆ ಕೆಲವು ದಾಖಲೆಗಳಲ್ಲಿ ಬದಲಾವಣೆ ಇದ್ದರೂ ಭಾರತ ಲಿಖಿತ ಸಂವ್ಧಾನವನ್ನು ಹೊಂದಿದೆ.

ಭಾರತ ಸಂವಿಧಾನ ವಿಶ್ವದ ಸಂವ್ಧಾನಗಳಲ್ಲೆ ಒಂದು ಬೃಹತ್ ಮತ್ತು ಸವಿವರಣಾತ್ಮಕ ಸಂವಿಧಾನವಾಗಿದೆ. ಮೂಲ ಸಂವಿಧಾನಗಳಲ್ಲಿ 395 ವಿಧಿಗಳು ಮತ್ತು 8 ಅನುಸೂಚಿಗಳು ಒಳಗೊಂಡಿದೆ. ಆದರೆ ಸಂವಿಧಾನಕ್ಕೆ ತಂದ ತಿದ್ದುಪಡಿಗಳಿಂದಾಗಿ ಈಗ 442 ವಿಧಿಗಳು ಮತ್ತು 12 ಅನುಸೂಚಿಗಳು ಇವೆ.

ನಮ್ಮ ಸಂವಿಧಾನ ರಚನಾಕಾರರು ಇಷ್ಟೊಂದು ಬೃಹದಾಕಾರ ಸಂವಿಧಾನವನ್ನು ರಚಿಸಲು ಕಾರಣಗಳೆಂದರೆ;

ಎ) ಸಂವಿಧಾನ ರಚನಾಕಾರರು ಬೇರೆ ರಾಷ್ಟ್ರಗಳ ಸಂವಿಧನಗಳಲ್ಲಿನ ಅಂಶಗಳನ್ನು ಆರಿಸಿ, ಅದರಲ್ಲಿನ ಕೆಲವು ತಪ್ಪುಗಳನ್ನು ಮತ್ತು ತೊಡಕುಗಳನ್ನು ಬಿಟ್ಟು ರೂಪಿಸಿದರು.

ಬಿ) ಭಾರತ ಸರ್ಕಾರ ಕಾಯಿದೆ, 1935 ಇದನ್ನು ಅನುಸರಿಸಿ ಭಾರತ ಸಂವಿಧಾನದ ರಚನಾಕಾರರು ಆಡಳಿತ ಮೂಲ ತತ್ವಗಳನ್ನು ಮಾತ್ರ ವಿವರಿಸಿದೆ, ಕಾಯಿದೆಯ ನಿಯಮಾವಳಿಗಳಿಗೆ ಜನರು ಹೊಂದಿಕೊಂಡಿದ್ದರಿಂದ ಆಡಳಿತಾತ್ಮಕ ರೂಪುರೇಷೆಗಳನ್ನು ಅಳವಡಿಸದಿದ್ದರೆ ಸಂವಿಧಾನ ದುರುಪಯೋಗವಾಗಬಹುದು ಎಂಬ ಭೀತಿ ಸಂವಿಧಾನ ರಚನಾಕಾರರಿಗೆ ಇತ್ತು.

ಸಿ) ರಾಷ್ಟ್ರದ ಬೃಹತ್ ರೂಪ ಮತ್ತು ಹೋಗಲಾಡಿಸಲ್ಪಡುವ ವಿಶಿಷ್ಟ ಸಮಸ್ಯೆಗಳಿಂದ ಸಂವಿಧಾನ ಬೃಹತ್ ರೂಪ ತಾಳಿದೆ. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಜನಾಂಗದವರಿಗೆ ಒಂದು ಇಡೀ ಭಾಗ (ಭಾಗ 16) ಹಾಗೂ ಅಧಿಕೃತ ಭಾಷೆಗಳಿಗೆ ಸಂಬಂಧವಾಗಿ ಒಂದು ಭಾಗ (ಭಾಗ 18) ಇದೆ.

ಡಿ) ಅಮೇರಿಕಾ ಸಂವಿಧಾನ ಸಂಯುಕ್ತ ಸರ್ಕಾರಕ್ಕೆ ಮಾತ್ರ ಹೊಂದಿಕೊಂಡಿದ್ದು, ರಾಜ್ಯಗಳು ತಮ್ಮದೇ ಆದ ಸಂವಿಧಾನವನ್ನು ರೂಪಿಸುತ್ತದೆ. ಆದರೆ ಭಾರತ ಎಲ್ಲಾ ಸವಲತ್ತುಗಳೊಂದಿಗೆ ಸಂಯುಕ್ತ ಮತ್ತು ರಾಜ್ಯಗಳಿಗೆ ಒಂದೇ ಸಂವಿಧಾನವನ್ನು ಕೊಟ್ಟಿದೆ. ಸಂವಿಧಾನವನ್ನು ಕೊಟ್ಟಿದೆ. ಸಂವಿಧಾನ ಅಸ್ಥಿತ್ವಕ್ಕೆ ಬಂದ ನಂತರ ನಾಗಾಲ್ಯಾಂಡ್, ಅಸ್ಸಾಂ, ಮಣಿಪುರ, ಮಹಾರಾಷ್ಟ್ರ, ಗುಜರಾತ್, ಸಿಕ್ಕಿಂ, ಮಜೋರಾಮ್ ಇತ್ಯಾದಿ ರಾಜ್ಯಗಳ ಹಾಗೂ ಇತರ ಪ್ರಾಂತೀಯ ಸಮಸ್ಯೆಗಳನ್ನು ಹೋಗಲಾಡಿಸುವಲ್ಲಿ ಕೆಲವು ನಿಯಮಾವಳಿಗಳನ್ನು ಕೊಟ್ಟಿದೆ.

ಇ) ರಾಜ್ಯಗಳ ಸಂಬಂಧವಾಗಿ ವಿವರಣಾತ್ಮಕ ವಿಷಯಗಳನ್ನು ಮಾತ್ರ ಕೊಡದೆ, ಸಂಯುಕ್ತ ಮತ್ತು ರಾಜ್ಯಗಳ ಸಂಬಂಧ ಮತ್ತು ರಾಜ್ಯಗಳೊಳಗಿನ ಸಂಬಂಧ, ಶಾಸಕಾಂಗ ಅಥವಾ ಆಡಳಿತಾತ್ಮಕ ಅಂಗಗಳನ್ನು ವಿವರವಾಗಿ ತಿಳಿಸಿ, ಆವರ ಮಧ್ಯೆ ಗೊಂದಲವನ್ನು ನಿವಾರಿಸಿದೆ.

ಭಾರತ ಸಂವಿಧಾನ ಬಹಳ ಪ್ರಮುಖ ಲಕ್ಷಣಗಳನ್ನು ಒಳಗೊಂಡು ಖ್ಯಾತಿ ಪಡೆದಿದೆ ಜಗತ್ತಿನ ಪರಿಚಿತ ಸಂವಿಧಾನಗಳನ್ನು ಅಧ್ಯಯನ ಮಾಡಿ, ರಚಿಸಿದ ಭಾರತ ಸಂವಿಧಾನ ಇತರ ಸಂವಿಧಾನಗಳಿಗಿಂತ ಭಿನ್ನವಾಗಿದೆ. ಇದರ ಹೆಚ್ಚಿನ ನಿಯಮಾವಳಿಗಳು ಇತರರಿಂದ ಆರಿಸಿದಂತವುಗಳು.

ನಮ್ಮ ಸಂವಿಧಾನ ಆರಿಸಲ್ಪಟ್ಟ ಸಂವಿಧಾನ ಎಂದು ಹೇಳಲಾಗಿದ್ದರೂ, ಸಂವಿಧಾನ ರಚನಾಕಾರರ ಕೆಲಸದ ಫಲ ಅವರು ರೂಪಿಸಿದಂತಹ ಇತರ ಸಂವಿಧಾನಗಳಿಂದ ಒಳ್ಳೆಯ ಲಕ್ಷಣಗಳನ್ನು ಒಟ್ಟು ಮಾಡಿ, ಕಾರ್ಯದಲ್ಲಿ ಕಂಡು ಬಂದಂತಹ ತೊಡಕುಗಳನ್ನು ತಪ್ಪಿಸಿ, ರಾಷ್ಟ್ರದ ವ್ಯವಸ್ಥೆ ಹೊಂದಿಕೊಂಡು ಜಾರಿಗೆ ತರಲಾಯಿತು. ಆದುದರಿಂದ ಇದೊಂದು ರಿಪೇರಿ ಕೆಲಸ, ಇದೊಂದು ಚೆಂದದ ರಿಪೇರಿ ಕೆಲಸ.

### 3.2.2 ನಮ್ಯ ಮತ್ತು ಅನಮ್ಯ ಲಕ್ಷಣ

ಭಾರತ ಸಂವಿಧಾನ ಇನ್ನೊಂದು ಪ್ರಮುಖ ಲಕ್ಷಣ ಯಾವುವೆಂದರೆ ಲಿಖಿತ ಸಂಯುಕ್ತ ಸಂವಿಧಾನಕ್ಕೆ ಸರಳತೆ ಕೊಟ್ಟಿರುತ್ತದೆ. ತಿದ್ದುಪಡಿ ಮಾಡುವ ವಿಧಾನ, ಅದು ಸಂವಿಧಾನದ ಮೂಲ ತಳಹದಿಗೆ ಯಾವುದೇ ತೊಂದರೆ ಆಗದೆ, ಸಂವಿಧಾನದ ಕೆಲವು ಕ್ಷೇತ್ರಗಳಲ್ಲಿ ಅಗತ್ಯವಾದ ಬದಲಾವಣೆಗಳನ್ನು ತರಲಾಗಿದೆ. ಸಂವಿಧಾನದಲ್ಲಿ ತಿದ್ದುಪಡಿ ವಿಧಾನವನ್ನು ರಚಿಸಲಾಗಿದೆ. (ಭಾರತ ಸಂವಿಧಾನ ಭಾಗಶಃ ನಮ್ಯವೂ ಹೌದು ಮತ್ತು ಭಾಗಶಃ ಅನಮ್ಯವೂ ಹೌದು. ಭಾರತದ ಸಂವಿಧಾನ ತಿದ್ದುಪಡಿ ವಿಧಾನ ಇತ್ತ ಬ್ರಿಟನ್ನಿನ ಸಂವಿಧಾನದಂತೆ ನಮ್ಯವೂ ಅಲ್ಲ ಅಥವಾ ಅಮೇರಿಕಾ ಸಂವಿಧಾನದಂತೆ

ಅನಮ್ಯವು ಅಲ್ಲ. ಭಾರತ ಸಂವಿಧಾನ ಚಿನ್ನದಂತಹುದು. ಯಾಕೆಂದರೆ ಇದು ಇಂಗ್ಲೆಂಡಿನ ಸಂವಿಧಾನದ ತೀವ್ರ ಸರಳತೆಯನ್ನು ಹಾಗೂ ಅಮೆರಿಕಾ ಸಂವಿಧಾನದ ಅತಿಯಾದ ಕಠಿಣತೆಯನ್ನು ತಪ್ಪಿಸಿದೆ).

ಸಂವಿಧಾನದ ಕೆಲವು ನಿಯಮಗಳನ್ನು ರಾಜ್ಯಗಳ ಶಾಸಕಾಂಗಗಳ ಬಹುಮತದೊಂದಿಗೆ ತಿದ್ದುಪಡಿ ಮಾಡಬಹುದು. ಇಲ್ಲಿ ಅರ್ಧದಷ್ಟು ರಾಜ್ಯಗಳ ಒಪ್ಪಿಗೆ ಸಾಕಾಗುತ್ತದೆ. ಉಳಿದ ಸಂವಿಧಾನದ ನಿಯಮಗಳನ್ನು ಪಾರ್ಲಿಮೆಂಟು ವಿಶೇಷ ಬಹುಮತದ ಮೂಲಕ ತಿದ್ದುಪಡಿ ಮಾಡಬಹುದು. ಅಂದರೆ ಪಾರ್ಲಿಮೆಂಟ್ ಉಭಯ ಸದನಗಳಲ್ಲಿ ಒಟ್ಟು ಸದಸ್ಯರುಗಳಲ್ಲಿ 2/3 ಸದಸ್ಯರು ಮತ ಚಲಾಯಿಸಿ, ಶೇ 50ಕ್ಕಿಂತ ಹೆಚ್ಚು ಸದಸ್ಯರು ತಿದ್ದುಪಡಿಗೆ ಅನುಮೋದಿಸುವಾಗ ತಿದ್ದುಪಡಿ ಸಿಂಧುವಾಗುತ್ತದೆ.

ಇನ್ನೊಂದು ಬದಿಯಲ್ಲಿ ಪಾರ್ಲಿಮೆಂಟಿಗೆ ಸಾಮಾನ್ಯ ಶಾಮನಾಕ್ರಿಯೆಯಲ್ಲಿ ಸರಳ ಬಹುಮತದಲ್ಲಿ ಸಂವಿಧಾನದ ಕೆಲವು ವಿಧಾನಗಳನ್ನು ಬದಲಾಯಿಸಬಹುದು ಅಥವಾ ನವೀಕರಿಸಬಹುದು. ಇಂತಹ ಬದಲಾವಣೆಗಳು ಸಂವಿಧಾನದ ತಿದ್ದುಪಡಿಗಳಾಗಿ ಇರಕೂಡದು ಅಂತ ಸಂವಿಧಾನ ಹೇಳುತ್ತದೆ.

ಈ ಸರಳತೆಗೆ ಇನ್ನೊಂದು ನಿದರ್ಶನ ಏನೆಂದರೆ ಸಂವಿಧಾನದ ವಿಧಾನಗಳನ್ನು ನಡೆಸುವಲ್ಲಿ ಶಾಸಕಾಂಗಕ್ಕೆ ಅಧಿಕಾರ ಕೊಟ್ಟಿದ್ದು. ಈ ಸ್ಕೀಮ್‌ನ ಮುಖ್ಯ ಗುಣ ಏನೆಂದರೆ ಪಾರ್ಲಿಮೆಂಟ್ ಮಾಡಿದ ಕಾನೂನು. ಅಗತ್ಯವಾದ ಸಂದರ್ಭಗಳಲ್ಲಿ ಸಂವಿಧಾನದ ತಿದ್ದುಪಡಿಯಾಗಿರದೆ ಬದಲಾವಣೆ ತರಬಹುದು. ಆದುದರಿಂದ ಭಾರತ ಸಂವಿಧಾನ ಕಠಿಣತೆಗಿಂತ ಹೆಚ್ಚು ಸರಳವಾಗಿದೆ.

### 3.2.3 ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯ

ಸಂವಿಧಾನ ತನ್ನ ಪ್ರಾರಂಭದಲ್ಲಿಯ ಮಾತುಗಳಲ್ಲಿ ಜನರ ಪರಮಾಧಿಕಾರತ್ವದ ಬಗ್ಗೆ ಹೇಳಿದೆ. ಭಾರತ ಸಂವಿಧಾನದ ಪ್ರಸ್ತಾಪನೆಯು ಹೀಗೆ ಆರಂಭವಾಗುತ್ತದೆ. ಭಾರತದ ಪ್ರಜೆಗಳಾದ ನಾವು ಭಾರತವನ್ನು ಸಾರ್ವಭೌಮ, ಪ್ರಜಾಸತ್ತಾತ್ಮಕ, ಗಣರಾಜ್ಯವನ್ನಾಗಿ ಪರಿವರ್ತಿಸಲು ಬದ್ಧರು. ಈ ಪ್ರಸ್ತಾಪ ಸಂವಿಧಾನದ ವಿವಿದೆಡೆಗಳಲ್ಲಿ ಧೃಡೀಕರಿಸಿದೆ, ಮುಖ್ಯವಾಗಿ ಚುನಾವಣೆ ಬಗ್ಗೆ ಹೇಳುವಂತ ಅಧ್ಯಾಯದಲ್ಲಿ ಬಂದಿದೆ. 326 ವಿಧಿ ಹೇಳುವ ಪ್ರಕಾರ ಜನ ಪ್ರತಿನಿಧಿಗಳ ಸಭೆ, ಮತ್ತು ರಾಜ್ಯಗಳ ವಿಧಾನಸಭೆಗಳ ಚುನಾವಣೆಗಳು ವಯಸ್ಕ ಮತದಾನ ಪದ್ಧತಿಯಲ್ಲಿ ನಡೆಯುತ್ತವೆ. ಆದುದರಿಂದ ಕೇಂದ್ರ ಸರ್ಕಾರಗಳು ಮತ್ತು ರಾಜ್ಯ ಸರ್ಕಾರಗಳು ಜನರಿಂದ ಅಧಿಕಾರವನ್ನು ಪಡೆಯುತ್ತಾರೆ. ಯಾವಾಗಲೂ ಇವರು ಸಂಸತ್ತಿಗೆ ಮತ್ತು ರಾಜ್ಯ ವಿಧಾನಸಭೆಗೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಹೀಗೆ, ಕೊನೆಯದಾಗಿ, ಇದೊಂದು ಜನರ ಪರಮಾಧಿಕಾರತ್ವದ ಲಕ್ಷಣವಾಗಿದೆ.

ಭಾರತ ಸ್ವಾತಂತ್ರ್ಯ ಕಾಯಿದೆ, 1947 ಪ್ರಕಾರ ವಸಾಹತು ರಾಜ್ಯಗಳನ್ನು ರದ್ದುಪಡಿಸಿ, ಭಾರತವನ್ನು ಒಂದು ಸರ್ವ ತಂತ್ರ ಸ್ವತಂತ್ರವುಳ್ಳ ಸಾರ್ವಭೌಮ ರಾಷ್ಟ್ರವಾಗಿ ರೂಪಿಸಿದೆ. ಪ್ರಜಾಸತ್ತಾತ್ಮಕ ಶಬ್ದದರ್ಥ ಜನರ ನಿಜವಾದ ಅಧಿಕಾರ. ಸಂಯುಕ್ತ ಸಂಸತ್ತಿಗೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಲಿಕ್ಕೆ ಸಾರ್ವತ್ರಿಕ ಹಕ್ಕನ್ನು ಸಂವಿಧಾನ ಕೊಟ್ಟಿದೆ. ಗಣರಾಜ್ಯ ಎಂಬ ಶಬ್ದ ರಾಜ್ಯದ ಮುಖ್ಯಸ್ಥ ಬ್ರಿಟನ್ ರಾಣಿಯಾಗಿ ಶಾಶ್ವತ ಮುಖ್ಯಸ್ಥೆಯಾಗಿರದೆ, ಜನರಿಂದ ಪರೋಕ್ಷವಾಗಿ ಚುನಾಯಿಸಲ್ಪಟ್ಟ ಅಧ್ಯಕ್ಷನಾಗಿರುತ್ತಾರೆ.

### 3.2.4 ಧರ್ಮ ನಿರಪೇಕ್ಷಣಾ ರಾಜ್ಯ

ಪ್ರೊ. ಅಲೆಕ್ಸಾಂಡಾವೆಜ್ ಹೇಳುವ ಪ್ರಕಾರ ಭಾರತ ಬಹು ಧರ್ಮ ಮತ್ತು ಜನಾಂಗಗಳನ್ನು ಒಳಗೊಂಡಿರುವ ರಾಷ್ಟ್ರ. ಭಾರತ ರಾಷ್ಟ್ರ ಧರ್ಮವಾಫಿ ಯಾವುದೇ ಧರ್ಮವನ್ನು ಅಧಿಕೃತವಾಗಿ ಘೋಷಿಸಿಲ್ಲ. ಸರ್ವಧರ್ಮಗಳನ್ನು ಸಮಾನ ದೃಷ್ಟಿಕೋನದಿಂದ ನೋಡುವ ಭಾರತ ಸರ್ಕಾರವು ಧರ್ಮದ ವಿಷಯದಲ್ಲಿ ತಟಸ್ಥನೀತಿಯನ್ನು ಅನುಸರಿಸುವ

ಮೂಲಕ ಧರ್ಮ ನಿರಪೇಕ್ಷತೆಯ ತತ್ವವನ್ನು ಒಳಗೊಂಡಿದೆ. ಭಾರತ ಸಂವಿಧಾನದಲ್ಲಿ ಧಾರ್ಮಿಕ ಹಕ್ಕನ್ನು ಮೂಲಭೂತ ಹಕ್ಕೆಂದು ಘೋಷಿಸಲಾಗಿದೆ. ಧರ್ಮ ನಿಪೇಕ್ಷತೆಯ ತತ್ವವನ್ನು ಒಳಗೊಂಡಿದೆ. ಭಾರತ ಸಂವಿಧಾನದಲ್ಲಿ ಧಾರ್ಮಿಕ ಹಕ್ಕನ್ನು ಮೂಲಭೂತ ಹಕ್ಕೆಂದು ಘೋಷಿಸಲಾಗಿದೆ. ಧರ್ಮ ನಿರಪೇಕ್ಷತೆ ಎಂಬ ಪದಕ್ಕೆ ವಿವಿಧ ಅರ್ಥಗಳಿವೆ. ಅವುಗಳೆಂದರೆ, ಧರ್ಮಾತೀತತೆ, ಜಾತ್ಯಾತೀತತೆ, ಧಾರ್ಮಿಕ ತಟಸ್ಥತೆ. ಅಂದರೆ ರಾಷ್ಟ್ರವು ಯಾವುದೇ ರಾಷ್ಟ್ರ ಧರ್ಮವನ್ನಾಗಿ ಸ್ವೀಕರಿಸಿಲ್ಲ ಹಾಗೆಯೇ ವ್ಯಕ್ತಿಗಳು ತಮ್ಮ ಆತ್ಮಸಾಕ್ಷಿ, ಇಚ್ಛೆಗೆ ಅನುಸಾರವಾಗಿ ಯಾವುದೇ ಧರ್ಮವನ್ನು ಸ್ವೀಕರಿಸುವ ಪ್ರಚಾರ ಮಾಡುವ, ಅಥವಾ ನಾಸ್ತಿಕರಾಗಿ ಜೀವನ ಸಾಗಿಸುವ ಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ಭಾರತ ಧರ್ಮ ನಿರಪೇಕ್ಷತಾ ರಾಜ್ಯವಾಗಿದ್ದು, ಎಲ್ಲಾ ಧರ್ಮಗಳನ್ನು ಸಮಾನತೆಯಿಂದ ನೋಡಿಕೊಳ್ಳುವುದೇ ಆಗಿದೆ.

### 3.2.5 ಸಾಮಾಜಿಕ ಸಮಾನತೆ

ಭಾರತ ಸಂವಿಧಾನದ ಮೂಲಭೂತ ಹಕ್ಕುಗಳ ಅಧ್ಯಾಯ ಸರ್ವರಿಗೆ ರಾಜಕೀಯ ಮತ್ತು ಕಾನೂನಾತ್ಮಕ ಸಮಾನತೆ ಸಾಧಿಸುವುದು, ಮಾತ್ರವಲ್ಲದೆ, ಸಾಮಾಜಿಕ ಸಮಾನತೆಯನ್ನು ಕೊಡುತ್ತದೆ. ಆದುದರಿಂದ ಅಸ್ಪೃಶ್ಯತಾ ನಿವಾರಣೆಯನ್ನು ಸಂವಿಧಾನದಲ್ಲಿ ಒಳಗೊಂಡಿದೆ. ಯಾವುದೇ ವಿಧದಲ್ಲಿ ಜತಿ, ಮತ, ಪಂಥ, ಲಿಂಗ ಅಥವಾ ಜನ್ಮ ಸ್ಥಳದ ಆಧಾರದ ಮೇಲೆ ಯಾವನೇ ಭಾರತೀಯ ಪ್ರಜೆಯನ್ನು ಸಾರ್ವಜನಿಕ ಸವಲತ್ತು ಅಥವಾ ಸೌಕರ್ಯದ ಅನುಭೋಗವನ್ನು ನಿಬಂಧಿಸುವ ಹಾಗೆ ಇಲ್ಲ. (ಈ ದೃಷ್ಟಿಯಲ್ಲಿ ನೋಡುವುದಾದರೆ ಅಮೇರಿಕಾ ಸಂವಿಧಾನದಲ್ಲಿ ಮತೀಯ ತಾರತಮ್ಯ ಈಗಲೂ ಇದೆ, ಇತ್ತೀಚೆಗಿನ ನ್ಯಾಯಾಲಯದ ಪ್ರಕಟಣೆಗೂ ಹೊಂದಿಕೊಂಡಿಲ್ಲ).

### 3.2.6 ಸಂಯುಕ್ತ ಮತ್ತು ಕೇಂದ್ರೀಕೃತ ಲಕ್ಷಣಗಳ ಮಿಶ್ರಣ

ಭಾರತ ಸಂವಿಧಾನವು ಸಂಯುಕ್ತ ವ್ಯವಸ್ಥೆ ಹಾಗೂ ಕೇಂದ್ರೀಕೃತ ಆದ್ಯತೆ ಕೊಟ್ಟಿದ್ದು ಬಹಳ ಮಹತ್ವದ ಸಾಧನೆಯಾಗಿದೆ. ಸಾಮಾನ್ಯವಾಗಿ ಸರ್ಕಾರ ವ್ಯವಸ್ಥೆ ಸಂಯುಕ್ತವಾಗಿದ್ದರೂ, ಸಂಯುಕ್ತ ಒಕ್ಕೂಟವನ್ನು ಬಲಿಷ್ಟ ಕೇಂದ್ರ ರಾಜ್ಯವಾಗುವ ಹಾಗೆ ಸಂವಿಧಾನ ಹೊಂದಿದೆ. ಇಂತಹ ಸಂಯುಕ್ತ ಮತ್ತು ಕೇಂದ್ರೀಕೃತ ಲಕ್ಷಣಗಳ ಮಿಶ್ರಣ ಇಡೀ ಪ್ರಪಂಚದಲ್ಲೇ ಶ್ರೇಷ್ಟವಾದುದು. ಉದಾಹರಣೆಗೆ ಮೂರು ಪಟ್ಟಿಗಳಲ್ಲಿ ಶಾಸನಾತ್ಮಕ ಅಧಿಕಾರವನ್ನು ವಿಭಜಿಸಿದ ನಂತರ, ಉಳಿದ ವಿಚಾರಗಳು ಸಂಯುಕ್ತಪಟ್ಟಿಗೆ ಒಳಪಡುತ್ತದೆ. ಸಮವರ್ತಿ ಪಟ್ಟಿಯ ವಿಚಾರಗಳಲ್ಲಿಯೂ, ಕೇಂದ್ರ ಸರ್ಕಾರದ ನಿರ್ಧಾರ ಕೊನೆಯದು. ರಾಜ್ಯಗಳ ಮುಖ್ಯಸ್ಥರು ಎಂದರೆ ರಾಜ್ಯಪಾಲರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ ಮತ್ತು ಅವರು ರಾಜ್ಯಗಳಲ್ಲಿ ಅಧ್ಯಕ್ಷರ ಪ್ರತಿನಿಧಿಗಳಾಗಿರುತ್ತಾರೆ.

### 3.2.7 ಚುನಾಯಿತ ಮುಖ್ಯಸ್ಥ ರಾಷ್ಟ್ರಾಧ್ಯಕ್ಷರೊಂದಿಗೆ ಸಂಸದೀಯ ಪದ್ಧತಿಯ ಸರ್ಕಾರ

ಭಾರತ ಸಂವಿಧಾನ ಬ್ರಿಟನ್ ವ್ಯವಸ್ಥೆಯ ಹಾಗೆ ಸಂಯುಕ್ತ ಒಕ್ಕೂಟಕ್ಕೆ ಮತ್ತು ರಾಜ್ಯಗಳಿಗೆ ಸಂಸದೀಯ ಪದ್ಧತಿಯ ಸರ್ಕಾರವನ್ನು ಜಾರಿ ಮಾಡಿದೆ. ಇದಕ್ಕೆ ಮುಖ್ಯ ಕಾರಣ, ಬ್ರಿಟೀಷರ ಕಾಲದಲ್ಲಿ ಭಾರತ ಸರ್ಕಾರ ಕಾಯಿದೆಗಳ ಮುಖಾಂತರ ಜನರಿಗೆ ಬಹಳಷ್ಟು ಈ ವ್ಯವಸ್ಥೆಯ ಬಗ್ಗೆ ಅನುಭವವಾಗಿದೆ. ಆದರೆ ಬ್ರಿಟಿಷ್ ಸಂಸದೀಯ ಪದ್ಧತಿ ಅಥವಾ ಕ್ಯಾಬಿನೆಟ್ ಸರ್ಕಾರ ಪದ್ಧತಿ ನೆಲೆಯಲ್ಲಿ ಇದನ್ನು ರೂಪಿಸಿದ್ದು, ವಾಡಿಕೆ ರಾಜತನ ಅಥವಾ ದೊರೆ ಮುಖ್ಯಸ್ಥನಾಗಿರುವುದನ್ನು ಇಲ್ಲಿ ಜಾರಿಗೊಳಿಸಲಾಗಲಿಲ್ಲ. ಯಾಕೆಂದರೆ ಭಾರತ ತಾನು ಗಣರಾಜ್ಯ ಅಂತ ಸಮರ್ಥಿಸಿಕೊಂಡಿದೆ. ರಾಜನ ಬದಲಿಗೆ ಇಲ್ಲಿ ಸಂಸದೀಯ ಸರ್ಕಾರ ಪದ್ಧತಿಯ ಮುಖ್ಯಸ್ಥನಾಗಿ ಚುನಾಯಿತ ಅಧ್ಯಕ್ಷನಿರುತ್ತಾನೆ.

ಐರ್ಲ್ಯಾಂಡಿನ ಸಂವಿಧಾನದ ಹಾಗೆ, ಭಾರತ ಸಂವಿಧಾನ ಸಂಸದೀಯ ಪದ್ಧತಿಯ ಜವಾಬ್ದಾರಿಯುತ ಸರ್ಕಾರದಲ್ಲಿ ಚುನಾಯಿತ ಅಧ್ಯಕ್ಷನನ್ನು ಕೂಡ ಮಾಡಿದೆ. ರಾಷ್ಟ್ರಾಧ್ಯಕ್ಷರು ಸಂಯುಕ್ತ ಸರ್ಕಾರದ ಕಾರ್ಯಾಂಗದ ಮುಖ್ಯಸ್ಥರಾದರೂ ಮಂತ್ರಮಂಡಲದ ಆಶಯ ಪ್ರಕಾರ ಕೆಲಸ ನಿರ್ವಹಿಸಬೇಕು. ಇದನ್ನು ಕೋರ್ಟಗಳಲ್ಲಿ ಪ್ರಶ್ನಿಸುವ ಹಾಗಿಲ್ಲ. ಮತ್ತು

ಸಂವಿಧಾನಕ್ಕೆ ವಿರುದ್ಧವಾಗಿ ನಡೆದಿಲ್ಲ ಅವರನ್ನು ಹುದ್ದೆಯಿಂದ ತೆಗೆಯಲು ಇಲ್ಲ ನಿರ್ಧರಿತ ಮಾರ್ಗ ಇಲ್ಲ. ಆದರೆ ನಮ್ಮ ಸಂವಿಧಾನ ಐರಿಸ್ ಸಂವಿಧಾನದ ಪೂರ್ಣ ಪಾತ ಇಲ್ಲ. ಐರಿಸ್ ಸಂವಿಧಾನದ ಪೂರ್ಣ ಪಾತ ಇಲ್ಲ. ಐರಿಸ್ ಸಂವಿಧಾನದ ಪ್ರಕಾರ, ಸಂವಿಧಾನ ಕೂಡ ಮಾಡಿದ ತನ್ನ ಸ್ವಂತ ಇಚ್ಛೆಗೆ ಅಧಿಕಾರವನ್ನು ಬಿಟ್ಟು ಅಧ್ಯಕ್ಷರು ಮಂತ್ರಿಮಂಡಲದ ಆಶಯದ ಮೇರೆಗೆ ಸಂವಿಧಾನಾತ್ಮಕ ಅಧಿಕಾರವನ್ನು ಚಲಾಯಿಸುತ್ತಾರೆ. ಆದರೆ ಭಾರತ ಸಂವಿಧಾನದಲ್ಲಿ ರಾಷ್ಟ್ರಾಧ್ಯಕ್ಷರಿಗೆ ಅವರ ಸ್ವಂತ ಇಚ್ಛೆಗೆ ಅನುಗುಣವಾಗಿ ಚಲಾಯಿಸಲು ಅಧಿಕಾರ ಕೊಡಲಾಗಿಲ್ಲ. ಇನ್ನೊಂದು ಬದಿಯಲ್ಲಿ 74(1) ವಿಧಿ ತಿದ್ದುಪಡಿ ಮಾಡಿ 42ನೇ ತಿದ್ದುಪಡಿ ಮಸೂದೆಗೆ ಸುಪ್ರೀಂಕೋರ್ಟ ಕೊಟ್ಟಂತಹ ಕೆಲವು ನಿರ್ಣಯಗಳನ್ನು ಪಟ್ಟಿ ಮಾಡುತ್ತಾ ರಾಷ್ಟ್ರಾಧ್ಯಕ್ಷರು ಮಂತ್ರಿಮಂಡಲದ ಸಲಹೆ ಮೇಲೆ ತಮ್ಮ ಕಾರ್ಯಗಳನ್ನು ನೆರವೇರಿಸಬೇಕು. ಅಂತ ಹೇಳಿದೆ.

ಒಗ್ಗಟ್ಟು ಮತ್ತು ಒಕ್ಕೂಟ ಹೊಣೆಗಾರಿಕೆ ಪ್ರಧಾನಮಂತ್ರಿ ಮೂಲಕ ಕ್ಯಾಬಿನಟ್ ಸಾಧಿಸುತ್ತದೆ. ಇವರು ಕ್ಯಾಬಿನೆಟ್ ಶಿಲ್ಪಕಲೆಯ ಮೈಲಿಗಲ್ಲು. ಇದರ ನಿಜವಾದ ಗುಣಲಕ್ಷಣಗಳನ್ನು ಪರೀಕ್ಷಿಸಲಾಗುತ್ತದೆ. ಪಾರ್ಲಿಮೆಂಟ್ ಸರ್ಕಾರವನ್ನು ಅವಿಶ್ವಾಸ ನಿರ್ಣಯವನ್ನು ಅಂಗೀಕರಿಸುವ ಮೂಲಕ ವಜಾ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

### 3.2.8 ನ್ಯಾಯಿಕ ವಿಮರ್ಶೆ ಮತ್ತು ಸಂಸತ್ತಿನ ಶ್ರೇಷ್ಠತೆ ಮಧ್ಯೆ ಒಪ್ಪಂದ

ಸಂಸತ್ತಿನ ಶ್ರೇಷ್ಠತೆ ಮತ್ತು ನ್ಯಾಯಿಕ ವಿಮರ್ಶೆ ಜೊತಿಗೂಡಿ ಲಿಖಿತ ಸಂವಿಧಾನ ಮಧ್ಯೆ ಏಕಮತ ಹೊಂದಾಣಿಕೆ ನಮ್ಮ ಭಾರತ ಸಂವಿಧಾನ ರಚನಾಕಾರರ ವಿಶಿಷ್ಟ ಸಾಧನೆಯಾಗಿದೆ. ಭಾರತ ಸಂವಿಧಾನ ಆಶ್ಚರ್ಯಕಾರವಾಗಿ ನ್ಯಾಯಾಂಗದ ಶ್ರೇಷ್ಟತೆಯನ್ನು ಅಮೇರಿಕಾ ವ್ಯವಸ್ಥೆಯಿಂದ ಮತ್ತು ಸಂಸತ್ತಿನ ಶ್ರೇಷ್ಟತೆಯನ್ನು ಇಂಗ್ಲೆಂಡ್ ಮೂಲದಿಂದ ಅಳವಡಿಸಲಾಗಿದೆ. ಸಂಸತ್ತು ಮತ್ತು ಕಾರ್ಯಾಂಗದ ಮುಖ್ಯಸ್ಥರು ಹೊರಡಿಸಿದ ಆಜ್ಞೆಗಳು ಸಂವಿಧಾನ ಬದ್ಧವಾಗಿವೆಯೋ ಅಥವಾ ಅಲ್ಲವೋ ಎಂದು ಪರಿಶಿಲಿಸಿ, ಸಂವಿಧಾನದ ಬದ್ಧವಾಗಿಲ್ಲದಿದ್ದಾಗ ಅಂತಹವುಗಳನ್ನು ಸಂವಿಧಾನ ಬಾಹಿರ ಎಂದು ಘೋಷಿಸುವ ಸರ್ವೋಚ್ಚ ನ್ಯಾಯಾಲಯಕ್ಕಿರುವ ಅಧಿಕಾರಕ್ಕೆ ನ್ಯಾಯಿಕ ವಿಮರ್ಶೆ ಎಂದರ್ಥ. ಯಾವುದೇ ವಿಷಯದಲ್ಲಿ ನ್ಯಾಯಾಂಗದ ಪರಿಮಿತಿಯನ್ನು ನಿರ್ಣಯಿಸಲ್ಪಟ್ಟರೆ ಅಂತಹವುಗಳನ್ನು ವಿಶೇಷ ಬಹುಮತದಿಂದ ಸಂಸತ್ತು ತಿದ್ದುಪಡಿ ಮಾಡಬಹುದು. ಈ ವಿಷಯದಲ್ಲಿ ಸಂವಿಧಾನದೊಳಗಿನ ತತ್ವವನ್ನು ಪಂಡಿತ್ ನೆಹರೂರವರು ಚೆನ್ನಾಗಿ ವಿವರಿಸಿದ್ದಾರೆ. ಇಡೀ ಭಾರತ ಸಮುದಾಯದ ಆಶಗಳನ್ನಿ ಪ್ರತಿನಿಧೀಕರಿಸುವ ಸಂಸತ್ತಿನ ಶ್ರೇಷ್ಟ ಆಶಯಗಳನ್ನು ಮೀರಿ ನಿರ್ಣಯ ಕೊಡುವ ಅಧಿಕಾರ ಸರ್ವೊಚ್ಚ ನ್ಯಾಯಾಲಯಕ್ಕಿಲ್ಲ., ನ್ಯಾಯಾಂಗಕ್ಕೂ ಇಲ್ಲ. ಶ್ರೇಷ್ಠ ಆಶಯ ತಪ್ಪಿ ನಡೆದರೆ ಅದನ್ನು ಎಚ್ಚರಿಸಬಹುದು. ಆದರೆ ಕೊನೆಯ ದಾರಿ, ಸಮುದಾಯದ ಭವಿಷ್ಯದ ದೃಷ್ಟಿಯಲ್ಲಿ ನ್ಯಾಯಾಂಗ ಮಧ್ಯೆ ಬರುವುದಿಲ್ಲ. ನಿಜಾಂಶವೇನೆಂದರೆ, ಕೊನೆಯಲ್ಲಿ ಶಾಸಕಾಂಗ ಸಾರ್ವಭೌಮವಾಗಿರುತ್ತದೆ ಮತ್ತು ಇದರ ಸಾಮಾಜಿಕ ಸುಧಾರಣಾ ವಿಚಾರಗಳಲ್ಲಿ ನ್ಯಾಯಾಲಯಗಳ ಕಾನೂನು ಮಧ್ಯೆ ಪ್ರವೇಶಿಸುವುದಿಲ್ಲ.

### 3.2.9 ಮೂಲಭೂತ ಹಕ್ಕುಗಳು

ಸಂವಿಧಾನದ ಶ್ರೇಷ್ಟತೆ ಮತ್ತು ಶಾಸಕಾಂಗದ ಶ್ರೇಷ್ಟತೆಯ ಸಮಮಟ್ಟದಲ್ಲಿ ಮೂಲಭೂತ ಹಕ್ಕುಗಳನ್ನು ಪ್ರಕಟಿಸಲಾಗಿದೆ. ಸಂವಿಧಾನದಲ್ಲಿ ಹಕ್ಕುಗಳನ್ನು ಸೇರ್ಪಡೆ ಮಾಡುವುದಕ್ಕಾಗಿ ಅಮೇರಿಕಾದ ಸಂವಿಧಾನದ ಹಕ್ಕುಗಳ ಪಟ್ಟಿಯನ್ನು ತೆಗೆದುಕೊಳ್ಳಲಾಗಿದೆ. ಈ ಹಕ್ಕುಗಳು ನ್ಯಾಯೋಜಿತವಾದುದು ಮತ್ತು ತಪ್ಪಿಸಲಸಾಧ್ಯವಾದುದು. ಈ ಹಕ್ಕುಗಳು ನ್ಯಾಯಯುತವಾದವುಗಳಾಗಿವೆ. ಈ ಹಕ್ಕುಗಳನ್ನು ಶಾಸಕಾಂಗ ಅಥವಾ ಕಾರ್ಯಾಂಗಗಳು ಉಲ್ಲಂಘಿಸಿದರೆ ಅಥವಾ ಜಾರಿಗೆ ತರದಿದ್ದರೆ ಪ್ರಜೆಯು ನ್ಯಾಯಾಲಯದ ಮೊರೆ ಹೋಗಬಹುದು. ಸಂವಿಧಾನದ ಪರಿಹಾರಗಳು ಹಕ್ಕುಗಳ ಮೇಲೆ ಹೇರಿವೆ. ಅವು ಯಾವುವೆಂದರೆ ಸಂವಿಧಾನ ಕೂಡ ಮಾಡಿದ 5 ಅಜ್ಞೆಗಳಲ್ಲಿ, ಬಂಧಿ ಪ್ರತ್ಯಕ್ಷೀಕರಣ, ಶ್ರೇಷ್ಟಾದೇಶ, ಸರ್ಷಿಯರೇರೈ ನಿಷೇಧಾಜ್ಞೆ , ಕೋವಾರೆಂಟೊ, ಯಾವುದೇ ಕಾನೂನು ಅಥವಾ ಕಾರ್ಯಾಂಗದ ಆಜ್ಞೆ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದರೆ ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್ ಅದನ್ನು ನಿಷ್ಕ್ರೀಯಗೊಳಿಸುವುದು.

ಭಾರತ ಸಂವಿಧಾನ ಭಾರತದ ಎಲ್ಲಾ ಪ್ರಜೆಗಳಿಗೆ ಮೂಲಭೂತ ಉಕ್ಕುಗಳನ್ನು ಕೊಟ್ಟಿದೆ. ಆದರೆ ಕೂಡ ಮಾಡಿದ ಮಾನವ ಹಕ್ಕುಗಳು ರಾಜ್ಯದ ಭದ್ರತೆಯ ಅಗತ್ಯ ಸರಿಯಾಗಿ ಹೊಂದಿಕೊಂಡು ಹೋಗುವಂತೆ ಕೊಡಲಾಗಿದೆ. ಸಮಾಜದಲ್ಲಿನ ಓಟೊಮಿಸ್ಟಿಕ್ ಧ್ಯೇಯವನ್ನು ಎತ್ತಿ ಹಿಡಿದ ಮೂಲಭೂತ ಹಕ್ಕುಗಳನ್ನು ಲಿಖಿತ ರೂಪದಲ್ಲಿ ಅಮೇರಿಕಾ ಸಂವಿಧಾನ ಕೊಟ್ಟಿದೆ. ಸರ್ವತೋಮುಖ ಅಭಿವೃದ್ಧಿಗೆ ಕೆಲ ಸಮಯ ತೊಡಕಾಗಬಹುದು. ನ್ಯಾಯಾಂಗದ ಏಕಮತ ಪೋಲಿಸ್ ಶಕ್ತಿ ಸಿದ್ಧಾಂತದಿಂದ ಅಮೇರಿಕಾ ಇಂತಹ ಸಂದರ್ಭಗಳಲ್ಲಿ ತೊಂದರೆಗಳಿಂದ ರಕ್ಷಿಸಲ್ಪಟ್ಟಿದೆ. ಕೆಲವು ನಿಗದಿತ ವಿಷಯಗಳನ್ನು ನ್ಯಾಯಾಂಗದ ರಕ್ಷಣೆಗೊಳಪಡಿಸಿ ಕೊಡುವುದರ ಬದಲು ಭಾರತದ ಸಂವಿಧಾನ ಪ್ರತಿಯೊಂದು ಮೂಲಭೂತ ಹಕ್ಕನ್ನು ಕೆಲವು ನಿಯಮಾವಳಿಗಳಿಗೆ ಒಳಪಟ್ಟು ಶಾಸಕಾಂಗಕ್ಕೆ ಹೊಣೆದಾರರಾಗಿ ಮಾಡಿದೆ. ಹಾಗೂ ಕೆಲವು ವಿಚಾರಗಳಲ್ಲಿ ರಾಷ್ಟ್ರದ ಒಗಟ್ಟು ಅನ್ಯೋನ್ಯತೆ ಅಥವಾ ಅಭಿವೃದ್ಧಿಗೋಸ್ಕರ ಎಲ್ಲಾ ಮೂಲಭೂತ ಹಕ್ಕುಗಳನ್ನು ಹೊರತು ಪಡಿಸಿದ್ದಾರೆ.

### 3.2.10 ಮೂಲಭೂತ ಕರ್ತವ್ಯಗಳು

ಮೂಲಭೂತ ಕರ್ತವ್ಯಗಳು ಭಾರತ ಸಂವಿಧಾನದ ಮತ್ತೊಂದು ಪ್ರಮುಖವಾದ ಲಕ್ಷಣಗಳಲ್ಲೊಂದಾಗಿದೆ. ಮೂಲ ಸಂವಿಧಾನವು ಮೂಲಭೂತ ಕರ್ತವ್ಯಗಳನ್ನೊಳಗೊಂಡಿರಲಿಲ್ಲ. ಸಂವಿಧಾನಕ್ಕೆ 1976ರಲ್ಲಿ 42ನೆಯ ತಿದ್ದುಪಡಿ ತರುವ ಮೂಲಕ ಇವುಗಳನ್ನು ಅಳವಡಿಸಲಾಯಿತು. ಸಂವಿಧಾನದ 51 ಎ ವಿಧಿಯಲ್ಲಿ 10 ಕರ್ತವ್ಯಗಳನ್ನು ಸೇರಿಸಲಾಗಿದೆ.

### 3.2.11 ರಾಜ್ಯ ನಿರ್ದೇಶಕ ತತ್ವಗಳು

ರಾಜ್ಯ ನಿರ್ದೇಶಕ ತತ್ವಗಳು ಹಕ್ಕುಗಳ ಪಟ್ಟಿಯಾಗಿ ಭಾಗ 4ರಲ್ಲಿ ಕೊಡಲಾಗಿದೆ. ರಾಜ್ಯ ನಿರ್ದೇರ್ಶಕ ತತ್ವ ಕಲ್ಪನೆಯು ಐರಿಷ್ ಸ್ವತಂತ್ರ ರಾಜ್ಯದ ಸಂವಿಧಾನದಿಂದ ಪಡೆಯಲಾಗಿದೆ, ತನ್ನ ನೀತಿಗಳನ್ನು ರಚಿಸುವಾಗ ಜನತೆಯ ಯೋಗಕ್ಷೇಮವನ್ನು ಗಮನದಲ್ಲಿಟ್ಟುಕೊಳ್ಳುವಂತೆ ಸರ್ಕಾರಕ್ಕೆ ಇವುಗಳು ಒಂದು ರೀತಿಯ ನಿರ್ದೇಶನಗಳಾಗಿವೆ. ಭಾರತ ಸಂವಿಧಾನದ ರಚನಾಕಾರರು ಇವುಗಳನ್ನು ಪರಿಗಣಿಸಿ, ಕಾನೂನಾತ್ಮಕವಾಗಿ ಹೊರಿಸಲಾಗದ ಸ್ಥಿತಿಯಲ್ಲಿ ಸಂವಿಧಾನದಲ್ಲಿ ಅಳವಡಿಸಲಾಗಿದೆ. ಕೆಲವು ಮೂಲ ನ್ಯಾಯೋಚಿತ ಮಾಡಲಾಗದ ಹಕ್ಕುಗಳು ನೈತಿಕ ಹೊರೆಯಾಗಿ ಮುಂದಿನ ಸರ್ಕಾರಗಳ ಮೇಲಿವೆ. ಕಾನೂನು ರೂಪಿಸುವ ರಚನಾಕಾರರ ವಿಚಾರಗಳಿಂದ ನುಸುಳಿ ಹೋಗುವುದನ್ನು ತಡೆದಿದೆ. ಒಟ್ಟಿಗೆ ತೆಗೆದುಕೊಳ್ಳುವುದಾದರೆ, ಇವು ಇಂದಿನ ಅಭಿವೃದ್ಧಿ ರಾಜ್ಯದ ಉದ್ದೇಶಗಳನ್ನು ಹೇಳುತ್ತದೆ, ಮತ್ತು ಹಿಂದಿನ ರಾಜ್ಯಗಳಿಗಿಂತ ಭಿನ್ನವಾಗಿದೆ. ಇವುಗಳು ಪ್ರಜಾಪ್ರಭುತ್ವಕ್ಕೆ ಸಾಮಾಜಿಕ ಮತ್ತು ಅರ್ಥಿಕ ನೆಲೆಯನ್ನು ನೀಡುವ ಉದ್ದೇಶವನ್ನು ಹೊಂದಿವೆ. ಸ್ವತಂತ್ರ ಭಾರತ ಸಂವಿಧಾನ ನೂತನ ಪ್ರಜಾಪ್ರಭುತ್ವ ರಾಜ್ಯಕ್ಕಾಗಿ ವಿಶಾಲವಾದ ಸಾಮಾಜಿಕ ಮತ್ತು ಆರ್ಥಿಕ ಕಾರ್ಯ ಯೋಜನೆಗಳನ್ನು ರೂಪಿಸಿದೆ. ಮೂಲಭೂತ ಹಕ್ಕುಗಳು ಭಾರತದಲ್ಲಿ ರಾಜಕೀಯ ಪ್ರಜಾಪ್ರಭುತ್ವಕ್ಕೆ ಬುನಾದಿ ಹಾಕುವುದಾದರೆ ರಾಜ್ಯ ನಿರ್ದೇಶಕ ತತ್ವಗಳು ರಾಷ್ಟ್ರದಲ್ಲಿ ಸಾಮಾಜಿಕ ಮತ್ತು ಅರ್ಥಿಕ ಪ್ರಜಾಪ್ರಭುತ್ವವನ್ನು ಕೊಡುತ್ತದೆ. ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳ ಮಧ್ಯೆ ಇರುವ ವ್ಯತ್ಯಾಸ ಏನೆಂದರೆ ಮೊದಲನೆಯದು ಕಾನೂನಿನ ಮುಖಾಂತರ ಜಾರಿಗೊಳಿಸುವುದು. ಆದರೆ ರಾಜ್ಯ ನಿರ್ದೇಶಕ ತತ್ವಗಳನ್ನು ಸರ್ಕಾರದ ಅಂಗಗಳು ಕಾರ್ಯರೂಪದಲ್ಲಿ ಜಾರಿಗೊಳಿಸಬೇಕು.

### 3.2.12 ಸಮುದಾಯ ಪ್ರಾತಿನಿಧ್ಯ ಇಲ್ಲದೆ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ (324 ನೇ ವಿಧಿ) ಸ್ವೀಕಾರ, ಭಾರತದಲ್ಲಿ ವಿಶಾಲವಾದ ಪ್ರದೇಶ ಮತ್ತು ಜನಸಂಖ್ಯೆ ವಿಪರೀತ ಅನಕ್ಷರತೆ ಇದ್ದಾಗಲೂ ಯಾವುದೇ ಜಾತಿ, ಧರ್ಮ, ಆಸ್ತಿ, ತೆರಿಗೆ, ಲಿಂಗ ಮುಂತಾದ ತಾರತಮ್ಯವಿಲ್ಲದ ದೈನಂದಿನ ಪ್ರಯೋಗವಾಗಿದೆ. ಇಂಗ್ಲೆಂಡ್ ಮತ್ತು ಅಮೇರಿಕಾಕ್ಕಿಂತ ಮತದಾನ ಪದ್ಧತಿ ಭಾರತದಲ್ಲಿ ವಿಶಾಲವಾಗಿದೆ.

ಜನರ ಸಾರ್ವಭೌಮತ್ವ ಪ್ರಸ್ತಾವನೆಯಲ್ಲಿದ್ದು ಭಾರತ ಸಂವಿಧಾನ ಅದನ್ನು ಸ್ವೀಕರಿಸಿ, ಜನರಿಂದ ಅವರಿಗೋಸ್ಕರ ಕೊಡಲ್ಪಟ್ಟದಾಗಿದೆ. ಮತದಾನ ಪದ್ಧತಿ ಒಂದು ಇಂದಿನ ಪ್ರಜಾಪ್ರಭುತ್ವದಲ್ಲಿ ಜನರ ಸಾರ್ವಭೌಮತ್ವದ ಮೇಲೆ ಪರಿಣಾಮಕಾರಿ ಸಾದನವಾಗಿದೆ. ಇದು ಇಡೀ ವಯಸ್ಕರನ್ನು ಹೊಂದಿಕೊಂಡಿದೆ. ಅವರು ಹಕ್ಕನ್ನು ಚಲಾಯಿಸಲು ಅರ್ಹರು ಮತ್ತು ಸ್ವತಂತ್ರ ಮತ ಚಲಾವಣೆಗೆ ಸ್ವತಂತ್ರ ಚುನಾವಣಾ ಯಂತ್ರವನ್ನು ರೂಪಿಸಿದೆ.

ಸಂವಿಧಾನ ರಚನಾಕಾರರು ರೂಪಿಸಿದ ಸಮುದಾಯ ಪ್ರಾತಿನಿಧ್ಯ ಸರ್ವರಿಗೂ ಪ್ರಶಂಸಾರ್ಹವಾಗಿದೆ. ಇದು ಭಾರತ ಯೋಜನೆಯಲ್ಲಿ ಪರೀಕ್ಷಿಸಲಾಗಿತ್ತು. ಪ್ರಸ್ತುತ ಹೊಸ ಭಾರತ ಸಂವಿಧಾನದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಮತ್ತು ಆಂಗ್ಲೋ ಇಂಡಿಯನ್‌ರವರನ್ನು ಬಿಟ್ಟು ಬೇರೆ ಯಾರಿಗೂ ಮೀಸಲಾತಿ ಕೊಡಲಾಗಿಲ್ಲ.

### 3.2.13 ಏಕಪೌರತ್ವ

ಭಾರತ ಸಂಯುಕ್ತ ಸರ್ಕಾರ ಹೊಂದಿದ್ದರೂ, ಅಮೇರಿಕಾದಲ್ಲಿ ಎರಡು ಪೌರತ್ವ ಇದ್ದರೂ, ಭಾರತ ಇಷ್ಟರ ತನಕ ಅದನ್ನು ಹೊಂದಿಲ್ಲ. ಬೇರೆ ಬೇರೆ ಭಾಗಗಳಲ್ಲಿ ಪ್ರಜೆಗಳು ವಾಸಿಸುತ್ತಿದ್ದರೂ ಎಲ್ಲಾ ಭಾರತೀಯರು ಒಂದೇ ಪೌರತ್ವವನ್ನು ಅನುಭವಿಸುತ್ತಾರೆ. ಆದರೆ ಅಮೇರಿಕಾದಲ್ಲಿ ರಾಜ್ಯ ಮತ್ತು ಸಂಯುಕ್ತ ಒಕ್ಕೂಟ ಹೀಗೆ ಬೇರೆ ಬೇರೆ ಎರಡು ಪೌರತ್ವವನ್ನು ಅನುಭೋಗಿಸುತ್ತಿದ್ದಾರೆ. ಏಕಪೌರತ್ವ ತತ್ವದ ಉದ್ದೇಶ ರಾಷ್ಟ್ರದ ಜನತೆಯಲ್ಲಿ ಸಾಮಾಜಿಕ ಮತ್ತು ರಾಜಕೀಯ ಎಕತೆ ಮತ್ತು ಭ್ರಾತೃತ್ವ ಬೆಳೆಸುವುದು, ಮತೀಯ ಭಿನ್ನತೆ, ವಿವಿಧ ಭಾಷೆಗಳು ಮತ್ತು ಅಲ್ಪಸಂಖ್ಯಾತ ಧರ್ಮ, ಜಾತಿ ಸಾಂಸ್ಕೃತಿಕ ಹಿನ್ನೆಲೆ ಮೊದಲಾದವುಗಳಿಂದ ರಕ್ಷಿಸುತ್ತದೆ.

### 3.2.14 ನ್ಯಾಯಾಂಗದ ಸ್ವಾತಂತ್ರತೆ

ಸ್ವೇಚ್ಛಾಡಳಿತ ಭಯದಿಂದ ವ್ಯಕ್ತಿಯನ್ನು ರಕ್ಷಿಸುವ ದೃಷ್ಟಿಯಿಂದ ಭಾರತದ ಸಂವಿಧಾನ ಪಿತೃಗಳು ನ್ಯಾಯಾಂಗವನ್ನು ಸ್ವತಂತ್ರಗೊಳಿಸಿದೆ. (ನ್ಯಾಯಾಂಗ ವ್ಯವಸ್ಥೆಯ ತುತ್ತ ತುದಿಯಲ್ಲಿರುವ ಸರ್ವೋಚ್ಚ ನ್ಯಾಯಾಲಯವನ್ನು ರಾಜಕೀಯ ಪ್ರಭಾವದಿಂದ ದೂರವಿಡಲು ಮತ್ತು ಸಂವಿಧಾನದ ನೈಜ ರಕ್ಷಕನಾಗಿರುವಂತೆ ಮಾಡಲು ಅದನ್ನು ಸ್ವತಂತ್ರಗೊಳಿಸಿದೆ) ಸರ್ಕಾರ ತಾನೊಂದು ಪಾರ್ಟಿ ಆಗಿ, ಘರ್ಷಣೆ ಗೊಂದಲಗಳ ಸತ್ಯತೆಯನ್ನು ಅಳೆಯಲು ನ್ಯಾಯಿಕ ಹಾಗೂ ನಿಷ್ಪಕ್ಷಪಾತವಾಗಿ ಕೆಂದ್ರ ಮತ್ತು ರಾಜ್ಯಗಳ ಕೆಳಗಿದ್ದು ಅಥವಾ ಪ್ರತಿನಿಧಿಯಾಗಿ ನಿಭಾಯಿಸುತ್ತದೆ ಅಂತ ನಂಬಿಕೆ ಇಡಲು ಸಾಧ್ಯವಿಲ್ಲ. ಸಂವಿಧಾನದ ಒಳಭಾಗವಾಗಿ ಸ್ವತಂತ್ರ ನ್ಯಾಯಾಂಗವಾಗಿ ರೂಪುಗೊಳ್ಳಲು ಇವು ಕಾರಣೀಭೂತವಾಗಿದೆ ಮತ್ತು ಸ್ವತಂತ್ರ ನ್ಯಾಯಾಂಗದ ಸೇರ್ಪಡೆ ಸಂವಿಧಾನದ ಮೂಲ ತತ್ವವಾಗಿದೆ.

ಸಂಪೂರ್ಣ ಸ್ವತಂತ್ರ ನ್ಯಾಯಾಂಗವನ್ನು ಸ್ಥಾಪಿಸುವುದಕ್ಕಾಗಿ, ಸಂವಿಧಾನ ಕಾರ್ಯಾಂಗ ಮತ್ತು ನ್ಯಾಯಾಂಗದ ಮಧ್ಯೆ ಒಂದು ಬೇರೆ ಮಾಡುವ ಗೋಡೆಯನ್ನು ಇಟ್ಟರು. ಸ್ವತಂತ್ರ ನ್ಯಾಯಾಂಗ ರೂಪಿಸುವಲ್ಲಿ ಇದು ಕೆಲವು ನಿಬಂಧನೆಗಳನ್ನು ಹಾಕಿಕೊಂಡಿತು, ಯಾವಿದೆಂದರೆ ನ್ಯಾಯಾಧೀಶರ ನೇಮಕದಲ್ಲಿ ಕಠಿಣವಾದ ಅರ್ಹತೆಗಳು, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಗಳ ಪ್ರತಿಯೊಬ್ಬ ನ್ಯಾಯಾಧೀಶನ ನೇಮಕಾತಿಯಲ್ಲಿ ಖಡ್ಡಾಯವಾಗಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನ ಸಲಹೆ ಇಂತಹ ನಿಯಮಗಳು. ಸಂಸತ್ತು 2/3ರಷ್ಟು ಬಹುಮತದೊಂದಿಗೆ ಮಹಾಭಿಯೋಗ ಕ್ರಮದ ಮುಖಾಂತರ ನ್ಯಾಯಾಧೀಶರ ಅಶಿಸ್ತು ರುಜುವಾದರೆ ಅವರನ್ನು ಸೇವೆಯಿಂದ ವಜಾ ಮಾಡಬಹುದು.

## 3.3 ಭಾರತದ ಸಂವಿಧಾನದ ಟೀಕೆಗಳು

ಸಂವಿಧಾನದ ವಿರುದ್ಧದ ಪ್ರಮುಖ ಟೀಕೆಗಳು ಕೆಳಗಿನಂತಿವೆ.

**1. ಆನೆ ಗಾತ್ರದ ಸಂವಿಧಾನ**

ಭಾರತದ ಸಂವಿಧಾನ ಬಹಳ ಬೃಹತ್ತಾದ ಮತ್ತು ಸವಿವರಣಾತ್ಮಕ ಸಂವಿಧಾನ ಎಂದು ಟೀಕಿಸಿದ್ದಾರೆ. ಐವರ್ ಜೆನ್ನಿಂಗ್ಸ್‌ರವರ ಮಾತುಗಳ ಪ್ರಕಾರ, ಅನುಕರಿಸಲ್ಪಟ್ಟ ನಿಯಮಗಳು ಯಾವಾಗಲೂ ಉತ್ತಮವಾಗಿರಲಿಲ್ಲ ಮತ್ತು ಸಂವಿಧಾನ, ಸಾಮಾನ್ಯವಾಗಿ ಹೇಳುವುದಾದರೆ ತುಂಬಾ ದೊಡ್ಡದು ಮತ್ತು ಅರ್ಥ ಮಾಡಿಕೊಳ್ಳಲು ಕಷ್ಟಸಾಧ್ಯವಾದುದು.

**2. 1935ರ ಕಾಯೊದೆಯ ಕಾರ್ಬನ್ ಪ್ರತಿ**

ಭಾರತದ ಸಂವಿಧಾನವನ್ನು 1935ರ ಕಾಯಿದೆಯ ಕಾರ್ಬನ್ನ ಪ್ರತಿ ಅಂತ ಕರೆಯಲಾಗಿದೆ. ಸಂವಿಧಾನ ರಚನಾಕಾರರು 1935ರ ಕಾಯಿದೆಯಿಂದ ಹಲವು ನಿಯಮಗಳನ್ನು ಅನುಸರಿಸಿ ಹೊಸ ಸಂವಿಧಾನದ ಭಾಗವನ್ನಾಗಿ ಮಾಡಿದ್ದಾರೆ. ಈ ವಿಷಯದ ಮೇಲೆ ಡಾ. ಅಂಬೇಡ್ಕರ್ ಸಂವಿಧಾನ ರಚನಾ ಸಭೆಯಲ್ಲಿ ಹೀಗೆ ಹೇಳಿದ್ದರು. ನಿಜಾಂಶವಾಗಿ ಭಾರತ ಸರ್ಕಾರ ಕಾಯಿದೆ 1935ರ ಇಳ್ಳೆಯ ನಿಯಮಗಳನ್ನು ಕರಡು ಸಂವಿಧಾನ ಪ್ರಸ್ತುತ ಪಡಿಸಿತು. ನಾನು ಕ್ಷಮೆ ಮಾಡುವುದಿಲ್ಲ. ಇಲ್ಲಿ ಅನುಕರಣೆ ಮಾಡಿದ್ದು ಏನಿಲ್ಲ. ಇದು ಪಿಡುಗಿಗೆ ಒಳಪಡುವುದಿಲ್ಲ. ಯಾಕೆ ನಾನು ಪಶ್ಚಾತಾಪ ಪಡುತ್ತೇನೆಂದರೆ ಭಾರತ ಸರ್ಕಾರ ಕಾಯಿದೆ, 1935 ರಿಂದ ತೆಗೆದುಕೊಂಡ ನಿಯಮಗಳು ಆಡಳಿತದ ವಿವರಣೆಗೆ ಸಂಬಂಧಪಟ್ಟವುಗಳಾಗಿವೆ.

**3. ವಕೀಲರ ಪ್ಯಾರಡೈಸ್**

ಸಂವಿಧಾನದ ಬಹಳ ಟೀಕೆಗಳಲ್ಲಿ ಅದು ವಕೀಲರ ಪ್ಯಾರಡೈಸ್ ಒಂದಾಗಿದೆ. ಸಂವಿಧಾನದ ಒಂದು ಗೊಂದಲದ ದಸ್ತವೇಜಾಗಿದೆ. ಇದನ್ನು ರಚಿಸಲು ಉಪಯೋಗಿಸಿದ ಭಾಷೆ ಕಾನೂನು ನ್ಯಾಯಾಲಯಗಳಲ್ಲಿ ಪರಿಚಯಿಸುವಂಲಹುದಾಗಿದೆ. ಈ ನಿಟ್ಟಿನಲ್ಲಿ ಸಂವಿಧಾನದ ವಿಶೇಷ ಗುಣಲಕ್ಷಣವೇನೆಂದರೆ, ಹಲವು ಪ್ರತಿಷೇಧ, ಅರ್ಹತೆಗಳು ಮತ್ತು ವಿವರಣೆ ಇವು ಸಾಮಾನ್ಯವಾಗಿ ಪ್ರತಿಯೊಂದು ನಿಯಮಗಳಲ್ಲಿ ಕಾಣುತ್ತೇವೆ. ಅನುಭವಸ್ಥ ವಕೀಲ ಮಾತ್ರ ಕಾನೂನಾತ್ಮಕ ಭಾಷೆಯ ಸಾರಾಂಶವನ್ನು ಅರ್ಥೈಸಿಕೊಳ್ಳಬಹುದು.

**4. ಗಾಂಧಿ ತತ್ವವಲ್ಲದ ಸಂವಿಧಾನ**

ಸಂವಿಧಾನ ಗಾಂಧಿತತ್ವವಲ್ಲದ ಸಂವಿಧಾನ ಎಂದು ಒಂದು ಗುಂಪಿನ ಜನತೆ ಟೀಕಿಸಿದೆ. ಮಹಾತ್ಮಗಾಂಧಿಯವರು ಅಪೇಕ್ಷಿಸಿದ ತತ್ವಗಳು ಸಂವಿಧಾನದಲ್ಲಿ ಅಳವಡಿಸಿಲ್ಲ. ಕೆಲವರು ಗ್ರಾಮ ಪಂಚಾಯತ್ಗಳು ಮತ್ತು ಜಿಲ್ಲಾ ಪಂಚಾಯತ್‌ಗಳು ರಚಿಸುವಲ್ಲಿ ಪ್ರಾಮುಖ್ಯತೆ ನೀಡಬೇಕಾಗಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

**5. ಅನುಕರಣೀಯ ಸಂವಿಧಾನ**

ಭಾರತ ಸಂವಿಧಾನ ಅನುಕರಣೀಯ ಚೀಲವಾಗಿದೆ ಮತ್ತು ಮುಖ್ಯವಾಗಿ ಪೇಪರ್ ಮತ್ತು ಕತ್ತರಿ ಕೆಲಸವಾಗಿದೆ ಅಂತ ಹೇಳಿದ್ದಾರೆ. ಆದುದರಿಂದ ರಚನಾಕಾರರ ಕೀರ್ತಿ, ಭಾರತದ ವಸ್ತುಸ್ಥಿತಿ ಮತ್ತು ಅಗತ್ಯಗಳಿಗೆ ಸ್ಪಂದಿಸುವಂತೆ, ಸ್ಥಾಪಿತ ಸಂವಿಧಾನಗಳ ಉತ್ತಮ ಲಕ್ಷಣಗಳನ್ನು ಒಟ್ಟುಗೂಡಿಸಿ, ತಿದ್ದುಪಡಿ ಮಾಡಿ ಜಾರಿಗೊಳಿಸಿದುದರ ಮೇಲಿದೆ.

**6. ಕೇಂದ್ರವನ್ನು ತೀರಾ ಬಲಿಷ್ಟಗೊಳಿಸಿದೆ**

ಕೆಲವು ಟೀಕಾಕಾರರ ಪ್ರಕಾರ, ಕೇಂದ್ರವನ್ನು ತೀರಾ ಬಲಿಷ್ಟವಾಗಿರಿಸಿದೆ. ಕೇಂದ್ರದಲ್ಲಿ ಅಧಿಕಾರ ಕೇಂದ್ರೀಕೃತವಾಗಿದೆ ಮತ್ತು ರಾಜ್ಯಗಳನ್ನು ಮುನಿಸಿಪಾಲಿಟಿಗಳ ಮಟ್ಟಕ್ಕೆ ಇಳಿಸಿದೆ.

7. ಭಾರತೀಯವಲ್ಲ

ಹೊಸ ಸಂವಿಧಾನವನ್ನು ಭಾರತೀಯರಿಗೆ ವಿರುದ್ಧವಾದುದು ಅಂತ ಕರೆದಿದಾರೆ. ಭಾರತ ಸಂವಿಧಾನದ ಯಾವುದೇ ಭಾಗ ಭಾರತದ ರಾಜಕೀಯ ಪಾವಿತ್ರ್ಯತೆ ಅದರ ವೈಭವ ಮತ್ತು ಅದರ ಸ್ವಾದಿಷ್ಟ ಮತ್ತು ಪ್ರಬುದ್ಧ ಸಂಪ್ರದಾಯಗಳನ್ನು ಪ್ರತಿನಿಧೀಕರಿಸುವುದಿಲ್ಲ. ಸಭೆಯ ಸದಸ್ಯ ಹೇಳುವ ಪ್ರಕಾರ ನಾವು ವೀಣಾ ಅಥವಾ ಸಿತಾರಾ ಸಂಗೀತವನ್ನು ಆಶಿಸುತ್ತೇವೆ. ಆದರೆ ಇಲ್ಲಿ ನಮ್ಮಲ್ಲಿ ಇಂಗ್ಲಿಷ್ ಬ್ಯಾಂಡ್‌ನ ಸಂಗೀತ ಇದೆ. ಇಲ್ಲಿ ಹೇಳುವ ಹಾಗೆ ನಮ್ಮ ಸಂವಿಧಾನ ಭಾರತದ ಮೂಲಭೂತ ಭಾವನೆಗಳಿಗೆ ಸ್ಪಂದಿಸಿಲ್ಲ.

## 3.4 ಸಾರಾಂಶ

ಬ್ರಿಟಿಷ್ ರಾಜ್ಯದ ಚೌಕಟ್ಟಿನ ಮೇಲೆ ನಮ್ಮ ಸಂವಿಧಾನ ರಾಜಕೀಯದ ಮೂಲ ತತ್ವಗಳನ್ನು, ಸರ್ಕಾರದ ಸಂಸ್ಥೆಗಳನ್ನು ಸ್ಥಾಪಿಸಿದೆ. ಯಾವಾಗಲೋ ಬದಲಾಯಿಸಿ, ಇವತ್ತು ಅದು ವಿದೇಶಿ ಆಮದಾಗಿ ಉಳಿದಿಲ್ಲ. ಇವು ನ್ಯಾಯತೆಯನ್ನು ಪಡೆದುಕೊಂಡಿದೆ ಮತ್ತು ಸಿದ್ಧಾಂತಗಳ ಅಡಿಯಲ್ಲಿ ರಾಜಕೀಯ ಪಕ್ಷಗಳು ಸವಿಸ್ತಾರವಾಗಿ ಸ್ವೀಕರಿಸಿವೆ. ಭಾರತ ಪರಿಸರಕ್ಕೆ ಹೊಂದಿಕೊಂಡು ಅದರ ಅರ್ಥ ಮತ್ತು ನಿರ್ವಹಣೆ ಜಾರಿ ಮಾಡಿದೆ ಮತ್ತು ಈವಾಗಲೂ ಇದನ್ನು ಮುಂದುವರಿಸುತ್ತಾ ಇವೆ.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶಿಲಿಸಿ.

**1. ಭಾರತದಲ್ಲಿ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿರಿ.**

......................................................................................................................................................

......................................................................................................................................................

......................................................................................................................................................

......................................................................................................................................................

......................................................................................................................................................

......................................................................................................................................................

## 3.5 ಕಠಿಣ ಪದಗಳು

ಧರ್ಮತತ್ವ – ಮೂಲತತ್ವಗಳು–ನಂಬಿಕೆಗಳು

ಸಾರ್ವಭೌಮತ್ವ – ಪರಮಾಧಿಕಾರ–ಅಧಿಕಾರ

ಉಳಿದ – ಬಿಟ್ಟ

ಮಹಾಭಿಯೋಗ – ತಪಿತಸ್ಥನಾದವನನ್ನು ಹುದ್ದೆಯಿಂದ ತೆಗೆಯುವುದು–ಒಂದು ವಿಧಾನ ಇದನ್ನು ಸಂಸತ್ ಮಾತ್ರ ಉಪಯೋಗಿಸಬಹುದು

## 3.6 ಕೆಲವು ಉಪಯುಕ್ತ ಗ್ರಂಥಗಳು


| | | |
|---|---|---|
| ಭಾರತ ಸರ್ಕಾರ (ಪ್ರಕಟಿತ) | – | ಭಾರತ ಸಂವಿಧಾನ |
| ಜೆ.ಸಿ ಜೊಹಾರಿ | – | ಇಂಡಿಯನ್ ಗವರ್ನ್‌ಮೆಂಟ್ ಅಂಡ್ ಪಾಲಿಟಿಕ್ಸ್ |
| ಎಂ.ವಿ. ಪೈಲಿ | – | ಇಂಡಿಯನ್ ಕಾನ್‌ಸ್ಟಿಟ್ಯೂಷನ್ |
| ಡಿ.ಡಿ. ಬಸು | – | ಕಮ್ಯುನಿಕೇಟಿಸ್ ಆನ್ ಇಂಡಿಯನ್ ಗವರ್ನ್‌ಮೆಂಟ್ |
| ಡಿ.ಸಿ. ಗುಪ್ತಾ | – | ಇಂಡಿಯನ್ ಗವರ್ನ್‌ಮೆಂಟ್ ಅಂಡ್ ಪಾಲಿಟಿಕ್ಸ್ |
| ಕೆ.ವಿ.ರಾವ್ | – | ಪಾರ್ಲಿಮೆಂಟರಿ ಡೆಮಾಕ್ರಸಿ ಇನ್ ಇಂಡಿಯಾ |
| ಡಾ. ಟಿ.ಡಿ.ದೇವೇಗೌಡ | – | ಭಾರತ ಸರ್ಕಾರ ಮತ್ತು ರಾಜಕೀಯ |
| ಡಾ. ಟಿ.ಡಿ.ದೇವೇಗೌಡ | – | ಭಾರತ ಸಂವಿಧಾನ |
| ಡಾ. ಕೆ.ಜೆ. ಸುರೇಶ್ | – | ಭಾರತ ಸರ್ಕಾರ ಮತ್ತು ರಾಜಕೀಯ |
| ಡಾ. ಹೆಚ್.ಎಂ. ರಾಜಶೇಖರ | – | ಭಾರತ ಸಂವಿಧಾನ ಮತ್ತು ರಾಜಕೀಯ |


## 3.7 ನಿಮ್ಮ ಪ್ರಗತಿ ಪರಿಶೀಲನೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ –1**

1. ನೋಡಿ ವಿಭಾಗ 3.2

# ಟಿಪ್ಪಣಿ

# ಘಟಕ – 4 : ಸಂವಿಧಾನದ ಪ್ರಸ್ತಾವನೆ ಹಾಗೂ ತತ್ವ

ರಚನೆ

4.0 ಉದ್ದೇಶಗಳು

4.1 ಪೀಠಿಕೆ

4.2 ಸಂವಿಧಾನದ ತತ್ವಗಳು ಮತ್ತು ಪ್ರಸ್ತಾವನೆ

4.3 ಸಾರಾಂಶ

4.4 ಕಠಿಣ ಪದಗಳು

4.5 ಕೆಲವು ಉಪಯುಕ್ತ ಗ್ರಂಥಗಳು

4.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 4.0 ಉದ್ದೇಶಗಳು

ಈ ಘಟಕವನ್ನು ಅಭ್ಯಸಿಸಿದ ನಂತರ ನಿಮಗೆ

- ನಮ್ಮ ಸಂವಿಧಾನದ ತತ್ವಗಳನ್ನು ತಿಳಿಯಲು ಮತ್ತು
- ನಮ್ಮ ಸಂವಿಧಾನದಲ್ಲಿ ಸ್ಪಷ್ಟಪಡಿಸಿರುವ ಗುರಿ ಮತ್ತು ಉದ್ದೇಶಗಳನ್ನು ತಿಳಿಯಲು ಅನುಕೂಲವಾಗುತ್ತದೆ.

## 4.1 ಪೀಠಿಕೆ

ಪ್ರತಿಯೊಂದು ಸಂವಿಧಾನಕ್ಕೆ ತನ್ನದೇ ಆದ ತತ್ವಜ್ಞಾನವಿದೆ. ನಮ್ಮ ಸಂವಿಧಾನದಲ್ಲಿ ಅಡಕವಾಘಿರುವ ತತ್ವಜ್ಞಾನವನ್ನು ನಾವು ಪಂಡಿತ್ ನೆಹರುರವರ ಚಾರಿತ್ರಿಕ ಉದ್ದೇಶಗಳಲ್ಲಿ ಕಂಡುಕೊಳ್ಳಬಹುದು. ಸಂವಿಧಾನ ರಚನಾ ಸಭೆಯು ಈ ಉದ್ದೇಶಗಳನ್ನು ಜನವರಿ 22, 1947 ರಲ್ಲಿ ಅಳವಡಿಸಿಕೊಂಡಿತು. ಸಂವಿಧಾನವನ್ನು ರೂಪಿಸುವ ದಿಕ್ಕಿನಲ್ಲಿ ಈ ಉದ್ದೇಶಗಳು ಪೂರವಾಗಿ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಪ್ರತಿಬಿಂಬಿಸಲ್ಪಟ್ಟಿವೆ. 1976ರಲ್ಲಿ ತಿದ್ದುಪಡಿಯಾದ ಸಂವಿಧಾನದ ಪೂರ್ವ ಪೀಠಿಕೆ ನಮ್ಮ ಸಂವಿಧಾನದ ಗುರಿ ಮತ್ತು ಉದ್ದೇಶಗಳನ್ನು ಸಂಕ್ಷಿಪ್ತವಾಗಿ ಒಳಗೊಂಡಿದೆ.

## 4.2 ಸಂವಿಧಾನದ ತತ್ವಗಳು ಮತ್ತು ಪ್ರಸ್ತಾವನೆ

ಪ್ರತಿಯೊಂದು ಸಂವಿಧಾನಕ್ಕೆ ತನ್ನದೇ ಆದ ತತ್ವಗಳಿವೆ. ಈ ತತ್ವಗಳು ಸಂವಿಧಾನದ ತಳಕಟ್ಟು. ದೇಶದ ಮೌಲ್ಯಗಳು ಹಾಗೂ ಆದರ್ಶಗಳು ಈ ತತ್ವಗಳ ಮೇಲೆ ಅವಲಂಬಿತ, ಆದುದರಿಂದ ನಮ್ಮ ಸಂವಿಧಾನದ ತಳಹದಿ ಆಗಿರುವ ಮೌಲ್ಯಗಳು, ಆದರ್ಶಗಳನ್ನು ತಿಳಿದುಕೊಳ್ಳುವುದು ಅಗತ್ಯ.

ಭಾರತದ ಪ್ರಜೆಗಳಾದ ನಾವು ಈ ಭಾರತವನ್ನು ಸಂಪೂರ್ಣ ಪ್ರಭುತ್ವ ಸಂಪನ್ನ ಸಮಾಜವಾದಿ, ಜಾತ್ಯಾತೀತ, ಲೋಕ ತಂತ್ರಾತ್ಮಕ ಗಣರಾಜ್ಯವನ್ನಾಗಿ ನಿರ್ಮಿಸುವ ಸಲುವಾಗಿಯೂ ಮತ್ತು ಅದರ ಸಮಸ್ತಪೌರರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ, ಅಭಿಪ್ರಾಯ, ವಿಶ್ವಾಸ, ಧರ್ಮ ಮತ್ತು ಉಪಾಸನೆಗಳ ಸ್ವಾತಂತ್ರ್ಯ. ಅಂತಸ್ತು ಮತ್ತು ಅವಕಾಶಗಳ ವಿಷಯಗಳಲ್ಲಿ ಸಮಾನತೆ ಇವುಗಳನ್ನು ಗಳಿಸಿಕೊಂಡು ಮತ್ತು ಅವರೆಲ್ಲರಲ್ಲಿಯೂ ವ್ಯಕ್ತಿಗೌರವ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆ. ಇವುಗಳನ್ನು ವೃದ್ಧಿಗೊಳಿಸಲು ಬಂಧುತ್ವ ಭಾವನೆಗಳನ್ನು ಬೆಳೆಸಲು ಧೃಡ ಸಂಕಲ್ಪ ಮಾಡಿ ನಮ್ಮ ಸಂವಿಧಾನ ರಚನ ಸಭೆಯಲ್ಲಿ 1949ರ ನವೆಂಬರ್ 26ರಂದು ಈ ಸಂವಿಧಾನವನ್ನು ಅಂಗೀಕರಿಸಿ ವಿಧಿನಿಯಮಿತ ಮಾಡಿ, ಒಪ್ಪಿಕೊಂಡಿದ್ದೇವೆ. ಸಂವಿಧಾನದ ಪೀಠಿಕೆ ಎರಡು ಉದ್ದೇಶಗಳನ್ನು ಪೂರೈಸುತ್ತದೆ.

ಅ) ಸಂವಿಧಾನದ ಅಧಿಕಾರದ ಮೂಲ ಎಲ್ಲಿದೆ ಎಂದು ತೋರಿಸಿಕೊಡುತ್ತದೆ

ಆ) ಸಂವಿಧಾನದ ಉದ್ದೇಶಗಳು ಮತ್ತು ಅವುಗಳನ್ನು ಪೂರೈಸುವ ರೀತಿಯನ್ನು ತೋರಿಸಿಕೊಡುತ್ತದೆ.

### 1. ಸ್ವಾತಂತ್ರ್ಯ ಮತ್ತು ಸಾರ್ವಭೌಮ

ಭಾರತ ಸಂವಿಧಾನ ಬ್ರಿಟಿಷ್ ಪಾರ್ಲಿಮೆಂಟಿನ ಕೊಡುಗೆಯಲ್ಲ. ಸಂವಿಧಾನವನ್ನು ರೂಪಿಸಿದವರು ಭಾರತದ ಪೌರರು ಸಂವಿಧಾನ ರಚನಾ ಸಭೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿ, ಸಂವಿಧಾನದ ಈ ಶಬ್ದಗಳು ಭಾರತದ ಪ್ರಜೆಗಳಾದ ನಾವು ಈ ಭಾರತವನ್ನು ಸಂಪೂರ್ಣ ಪ್ರಭುತ್ವ ಆತ್ಮೀ......... ಮಾಡಿಕೊಳ್ಳುತ್ತೇವೆ. ರಾಷ್ಟ್ರದ ಸಾರ್ವಭೌಮಾಧಿಕಾರದ ಮೂಲ ಮತ್ತು ಸಂವಿಧಾನ ಜನತೆಯ ಕೈಯಲ್ಲಿದೆ ಎಂದು ತೋರಿಸುತ್ತದೆ.

ಸಂಪೂರ್ಣ ಪ್ರಭುತ್ವವೆಂದರೆ ದೇಶದ ಸ್ವತಂತ್ರ ಅಧಿಕಾರ, ಯಾವ ವಿಷಯದಲ್ಲಿಯೂ ಶಾಸನ ಜಾರಿಗೆ ತರುವ ಅಧಿಕಾರ ರಾಷ್ಟ್ರಕ್ಕಿದೆ. ಬೇರೆ ಯಾವ ರಾಷ್ಟ್ರ ಅಥವಾ ಹೊರಗಿನ ಶಕ್ತಿಯ ಅಧಿಕಾರಕ್ಕೆ ದೇಶ ಒಳಪಟ್ಟಿರುವುದಿಲ್ಲ.

1950 ಜನವರಿ 26 ಸಂವಿಧಾನದ ಅಧಿಕಾರ ಬಂದ ನಂತರ ಭಾರತದಲ್ಲಿ ಬ್ರಿಟಿಷ್ ರಾಣಿಯ ಕಾನೂನು ಅಥವಾ ಸಂವಿಧಾನಿಕ ಅಧಿಕಾರ ಸಂಪೂರ್ಣ ನಿಂತು ಹೋಯತು. ದೇಶದ ಪ್ರಜೆಗಳು ಬ್ರಿಟಿಷ್ ಸರ್ಕಾರಕ್ಕೆ ಯಾವ ರೀತಿಯ ನಿಷ್ಠೆಯನ್ನು ತೋರಿಸಬೇಕಿಲ್ಲ, ಆದರೆ ಭಾರತ ಗಣರಾಜ್ಯ ಎಂದು ಸಾರಿದರೂ ಬ್ರಿಟಿಷ್ ಕಾಮನ್ವೆಲ್ತ್ ಜೊತೆ ಐಯರ್ಲೆಂಡ್ ರಿಪಬ್ಲಿಕ್ ಆಫ್ ಐಯರ್‌ಲೆಂಡ್ ಆಕ್ಟ್ 1948 (Republic of Ireland Act, 1948) ಮಾಡಿದ ಹಾಗೆ ಎಲ್ಲಾ ಸಂಬಂಧಗಳನ್ನು ಕಿತ್ತೊಗೆಯಬೇಕಿಲ್ಲ. ರಾಷ್ಟ್ರ ಅಧ್ಯಕ್ಷರು ಎಲ್ಲಾ ಕಾಮನ್‌ವೆಲ್ತ್ ಕಾನ್ಫೆರೆನ್ಸಸ್ (Conferences) ಅಲ್ಲಿ ದೇಶವನ್ನು ಪ್ರತಿನಿಧಿಸುತ್ತಾರೆ. ಭಾರತದ ಒಪ್ಪಿಗೆ ಅಥವಾ ಸಹಿ ಇಲ್ಲದೆ ಕಾಮನ್‌ವೆಲ್ತಿನ ನಿರ್ಧಾರಗಳು ಅಥವಾ ಬೇರೆ ದೇಶದೊಂದಿಗೆ ಒಪ್ಪಂದಗಳು ಭಾರತದ ಮೇಲೆ ಹೇರಲ್ಪಡುವುದಿಲ್ಲ. ನಮ್ಮ ದೇಶ ಕಾಮನ್‌ವೆಲ್ತ್ ಜೊತೆಗಿನ ಸಂಬಂಧ ಯಾವ ರೀತಿಯಲ್ಲಿಯೂ ದೇಶದ ಸಾರ್ವಭೌಮತೆಗೆ ಧಕ್ಕೆ ತರುವುದಿಲ್ಲ. ತಂದಲ್ಲಿ ಭಾರತವು ಈ ಸಂಬಂಧವನ್ನು ತೊಡೆದು ಹಾಕಬಹುದು.

**2. ಗಣರಾಜ್ಯ**

ಸಂವಿಧಾನದ ಪೂರ್ವಪೀಠಿಕೆ ರಾಷ್ಟ್ರದ ಸಾರ್ವಭೌಮಾಧಿಕಾರದ ಮೂಲ ನೆಲೆ ಜನತೆಯಲ್ಲಿದೆ ಎಂದು ಸಾರಿ ಹೇಳುತ್ತದೆ. ಯಾವ ಹೊರಗಿನ ಅಧಿಕಾರಕ್ಕೆ ಅಸ್ಪದವಿಲ್ಲ. ಪಾಕಿಸ್ತಾನ 1956 ವರೆಗೆ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿದ್ದರೂ ಭಾರತ 1949ರಲ್ಲಿ ಸಂವಿಧಾನ ರಚನೆ ಆದ ಕೂಡಲೆ ಗಣರಾಜ್ಯವಾಗಿ ನಿರ್ಮಾಣವಾಯಿತು. ಜನರ ಸರ್ಕಾರ ಹಾಗೂ ಜನರಿಗಾಗಿ ಸರ್ಕಾರ.

**3. ಪ್ರಜಾಪ್ರಭುತ್ವ**

ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ವ್ಯಕ್ತವಾಗಿರುವಂತೆ ಪ್ರಜಾಪ್ರಭುತ್ವ ಗಣರಾಜ್ಯ ಕೇವಲ ರಾಜಕೀಯದ್ದು ಮಾತ್ರವಲ್ಲ. ಸಾಮಾಜಿಕ ದೃಷ್ಟಿಕೋನದಿಂದಲೂ ಅದು ' ಪ್ರಜಾಪ್ರಭುತ್ವ ಗಣರಾಜ್ಯ'. ಅದೂ ಪ್ರಜಾಪ್ರಭುತ್ವ ಸರ್ಕಾರವನ್ನು ಮಾತ್ರ ಒಳಗೊಂಡಿರದೆ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಸಮಾಜ–ನೀತಿ, ಸ್ವಾತಂತ್ರ್ಯ ಸಮಾನತೆ ಮತ್ತು ಬಂಧುತ್ವಗಳನ್ನು ಒಳಗೊಂಡಿರುವ ಸಮಾಜವನ್ನು ಚಿತ್ರಿಸಿದೆ.

**ಅ) ಪ್ರತಿನಿಧಿತ್ವ ಪ್ರಜಾಪ್ರಭುತ್ವ**

ನಮ್ಮ ಸಂವಿಧಾನದಲ್ಲಿ ಹೇಳಿರುವಂತೆ ಸರ್ಕಾರದಲ್ಲಿ ಜನರ ನೇರವಾದ ಅಧಿಕಾರವಿಲ್ಲ. ನಮ್ಮ ಪ್ರಜಾಪ್ರಭುತ್ವ (ಪರೋಕ್ಷ) ಪ್ರತಿನಿಧಿತ್ವದ ಪ್ರಜಾಪ್ರಭುತ್ವ. ಜನರು ತಮ್ಮ ಸಾರ್ವಭೌಮತೆಯನ್ನು ಕೇಂದ್ರದಲ್ಲಿ ಸಂಸತ್ತು ಮತ್ತು ರಾಜ್ಯಗಳಲ್ಲಿ ಶಾಸಕಾಂಗ ಮತ್ತು ಮಂತ್ರಮಂಡಲದ ಚುನಾವಣೆಗಳಲ್ಲಿ ಭಾಗವಹಿಸಿ ತೋರಿಸಿಕೊಡುತ್ತಾರೆ. ನಿಜವಾದ ಕಾರ್ಯಾಂಗ ಮಂತ್ರಮಂಡಲ. ದೇಶದ ಮುಖ್ಯಸ್ಥ ರಾಷ್ಟ್ರಾಧ್ಯಕ್ಷ ಮತ್ತು ರಾಜ್ಯಗಳ ಮುಖ್ಯಸ್ಥ ರಾಜ್ಯಪಾಲ ಆದರೂ ಅವರಿಗೆ ಹೆಚ್ಚು ಅಧಿಕಾರಗಳಿಲ್ಲ. ಸಂವಿಧಾನ ಎಲ್ಲಾ ಭಾರತದ ಪ್ರಜೆಗಳಿಗೆ ಸಮಾನ ಮತದಾನದ ಹಕ್ಕನ್ನು ಕೊಟ್ಟಿದೆ.

**ಆ) ರಾಜಕೀಯ ನೀತಿ**

ಪ್ರಜಾಪ್ರಭುತ್ವ ಗಣರಾಜ್ಯದ ಆದರ್ಶ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಇದ್ದಂತೆ ಸಾರ್ವಜನಿಕ ಮತದಾನ ಹಾಗೂ ಲಿಂಗಸಮಾನತೆಯಲ್ಲಿ ತೋರಿ ಬರುತ್ತದೆ. ಲಿಂಗ ಸಮಾನತೆ ಕಾನೂನಿನ ದೃಷ್ಟಿಯಿಂದ ಮಾತ್ರವಲ್ಲ ರಾಜಕೀಯ ದೃಷ್ಟಿಯಿಂದ ಕೂಡಾ. ದೇಶದ ಪ್ರತಿಯೊಬ್ಬ ಪ್ರಜೆಗೆ ಅವರ ವಾಸಸ್ಥಳ, ವಿದ್ಯಾರ್ಹತೆಯನ್ನು ಲೆಕ್ಕಿಸದೆ ಸಮಾನ ಮತದಾನದ ಹಕ್ಕಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ದೇಶದ ಹಾಗೂ ರಾಜ್ಯದ ಶಾಸಕಾಂಗಗಳಿಗೆ ಸಾರ್ವತ್ರಿಕ ಮತದಾನ ನಡೆಯುತ್ತದೆ. ಒಬ್ಬ ಪ್ರಜೆಗೆ ಒಂದು ಮತ–ನಿಯಮದಂತೆ.

ಇ) ಪ್ರಜಾಪ್ರಭುತ್ವವೆಂಬ ಆದರ್ಶತೆ

ಧರ್ಮವೆಂಬ ಭೇದವಿಲ್ಲದೆ ಪುರುಷ–ಸ್ತ್ರೀಗೆ ಉದ್ಯೋಗದಲ್ಲಿ ಸಮಾನ ಅವಕಾಶ ಕೊಡುವುದರಿಂದ ಪ್ರದರ್ಶಿತವಾಗುತ್ತದೆ. ದೇಶದ ನಾಯಕರು ಅಧಿಕಾರದಲ್ಲಿರುವವರು ಅಲ್ಪಸಂಖ್ಯಾತರಿಗೆ ಕೊಡಬೇಕಾದ ಹಕ್ಕು ಭಾದ್ಯತೆಗಳನ್ನು ಮರೆತಿಲ್ಲ. ಮುಸ್ಲಿಂ, ಕ್ರಿಶ್ಚಿಯನ್ ಮತಗಳ ಪ್ರತಿನಿಧಿಗಳಿಗೆ ಮಂತ್ರಿಮಂಡಲದಲ್ಲಿ ಸುಪ್ರೀಂಕೋರ್ಟ್‌ನಲ್ಲಿ, ಇತರ ರಾಜಕೀಯ ಪ್ರತಿನಿಧಿತ್ವಗಳಲ್ಲಿ ಸಕ್ರಿಯ ಭಾಗವಹಿಸುವಿಕೆ ಸಂವಿಧಾನದ ನಿಜವಾದ ಆದರ್ಶವನ್ನು ತೋರಿಸಿಕೊಡುತ್ತದೆ. ಏನೆಂದರೆ ಪ್ರತಿಯೊಬ್ಬ ಪ್ರಜೆಗೆ ಈ ದೇಶ ತಮ್ಮದು ಎಂಬ ಮನವರಿಕೆಯಾಗುವಂತಿದೆ.

ಈ) ಪ್ರಜಾಪ್ರಭುತ್ವದ ಸಮಾಜ

ಪ್ರಜಾಪ್ರಭುತ್ವ ಗಣರಾಜ್ಯ ಪ್ರತಿಪ್ರಜೆಯ ಕಲ್ಯಾಣಕ್ಕಾಗಿ ಶ್ರಮಿಸುತ್ತದೆ. ಈ ಕಲ್ಯಾಣದ ಆದರ್ಶ, ಕಲ್ಯಾಣ ರಾಜ್ಯ ಮತ್ತು ಇದು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಡಕವಾಗಿದೆ. ಸಂವಿಧಾನದ ಪೂರ್ವ ಪೀಠಿಕೆಯಲ್ಲಿರುವ ಆರ್ಥಿಕ ನೀತಿಯನ್ನು ಪ್ರಜಾಪ್ರಭುತ್ವ ಕೇವಲ ರಾಜಕೀಯ ಪ್ರಜಾಪ್ರಭುತ್ವವಾದರೆ ಕಾರ್ಯಗತಗೊಳಿಸಲು ಅಸಾಧ್ಯ. ಭಾರತ ಸಂವಿಧಾನ ಕೇವಲ ರಾಜಕೀಯ ಪ್ರಜಾಪ್ರಭುತ್ವವಾದರೆ ಕಾರ್ಯಗತಗೊಳಿಸಲು ಅಸಾಧ್ಯ. ಭಾರತ ಸಂವಿಧಾನ ಕೇವಲ ರಾಜಕೀಯ ಪ್ರಜಾಪ್ರಭುತ್ವ ಮಾತ್ರವಲ್ಲ, ಸಾಮಾಜಿಕ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುತ್ತದೆ. ಡಾ॥ ಅಂಬೇಡ್ಕರ್‌ರವರು ಸಂವಿಧಾನ ರಚನಾ ಸಭೆಯನ್ನು ಉದ್ದೇಶಿಸಿ ಹೇಳಿದಂತೆ, "ಸಾಮಾಜಿಕ ಪ್ರಜಾಪ್ರಭುತ್ವವಿಲ್ಲದೆ ರಾಜಕೀಯ ಪ್ರಜಾಪ್ರಭುತ್ವವಿರದು. ಸಾಮಾಜಿಕ ಪ್ರಜಾಪ್ರಭುತ್ವವೆಂದರೇನು? ಸ್ವಾತಂತ್ರ್ಯ, ಸಮಾನತೆ, ಬಂಧುತ್ವ, ಅಳವಡಿಸಿರುವಂತಹ ಜೀವನ ಕ್ರಮ. ಈ ಮೂರು ಆದರ್ಶಗಳು ತ್ರಿಭುಜಗಳಿದ್ದಂತೆ. ಯಾವುದಾದರೂ ಒಂದರ ವಿಚ್ಛೇದನ ಪ್ರಜಾಪ್ರಭುತ್ವದ ಉದ್ದೇಶದ ಸೋಲುವಿಕೆ. ಸ್ವಾತಂತ್ರ್ಯವನ್ನು ಸಮಾನತೆಯಿಂದ, ಸಮಾನತೆಯನ್ನು ಸ್ವಾತಂತ್ರ್ಯದಿಂದ ಸ್ವಾತಂತ್ರ ಮತ್ತು ಸಮಾನತೆಯನ್ನು ಬಂಧುತ್ವದಿಂದ ಬೇರ್ಪಡಿಸಲು ಅಸಾಧ್ಯ. "ಸ್ವಾತಂತ್ರಯುತ ಸಮಾಜದಲ್ಲಿ ರಾಷ್ಟ್ರ ಸ್ವತಂತ್ರ ಹಾಗೂ ಸಮಾನ ಪ್ರಜೆಗಳ ಸಹಕಾರಿ ಭಾವನೆಯಿಂದ ಶಕ್ತಿಯನ್ನು ಪಡೆಯುತ್ತದೆ. ಭಾರತದ ರಾಜಕೀಯದಲ್ಲಿ ರಾಜಕೀಯ ಪ್ರಜಾಪ್ರಭುತ್ವದ ತಳಕಟ್ಟು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ..

4. ಆರ್ಥಿಕ ನ್ಯಾಯ

ಬಡತನದ ಹೋಗಲಾಡಿಸುವಿಕೆ ಇದ್ದವರ ಸಂಪತ್ತನ್ನು ಕಿತ್ತುಕೊಳ್ಳದೆ, ದೇಶದ ಸಂಪತ್ತನ್ನು ಹಾಗೂ ಸಂಪನ್ಮೂಲಗಳನ್ನು ವೃದ್ಧಿಸುವುದರಿಂದ ಮತ್ತು ಉತ್ಪಾದಕರಲ್ಲಿ ಸಮಾನ ಹಂಚಿಕೆಯಿಂದ ಎಂಬುದು ರಾಜ್ಯ ನಿರ್ದೇಶಕ ತತ್ವಗಳಲ್ಲಿರುವಂತೆ ಈ ರಾಷ್ಟ್ರದ ಗುರಿ. ನಮ್ಮ ಉಪಖಂಡದಲ್ಲಿ ಈ ಧ್ಯೇಯದ ಸಾಧನೆಯಿಂದಲೇ ಆರ್ಥಿಕ ಪ್ರಜಾಪ್ರಭುತ್ವ ಸಾಧ್ಯ. ಆರ್ಥಿಕ ನೀತಿಯ ಗುರಿ, ಆರ್ಥಿಕ ಪ್ರಜಾಪ್ರಭುತ್ವ ಮತ್ತು 'ಕಲ್ಯಾಣ ರಾಜ್ಯ'. ಆರ್ಥಿಕ ನೀತಿಯ ಆದರ್ಶವೇನೆಂದರೆ ಸಮಾನತೆ – ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಯನ್ನು ತೊಲಗಿಸುವುದರಿಂದ.

5. ಸಾಮಾಜಿಕ ನ್ಯಾಯ

ಸಾಮಾಜಿಕ ನೀತಿ ಮೂಲಭುತ ಹಕ್ಕು, ಸಣ್ಣ ಪುಟ್ಟ ಗುಂಪುಗಳ ಸಾಮಾಜಿಕ ಅಸಮತೋಲನವನ್ನು ಕಾನೂನಿನ ಮೂಲಕ ಹೋಗಲಾಡಿಸಿದರೆ ಮಾತ್ರ ಕಲ್ಯಾಣ ರಾಜ್ಯವನ್ನು ಕಟ್ಟಿದಂತಾಗುತ್ತದೆ. ಗುಂಪುಗಳ ನಡುವಿನ ಪ್ರತಿಸ್ಪರ್ಧೆಯ ಮನೋಭಾವನೆಯನ್ನು ಕಾನೂನು ಮುಖಾಂತರ ಹೋಗಲಾಡಿಸುವುದು.

6. ಸ್ವಾತಂತ್ರತೆ, ಸಮಾನತೆ ಮತ್ತು ಭ್ರಾತೃತ್ವ

ಕಾನೂನಿನ ನಿಯಮದ ಪ್ರಕಾರ ಈ ಮೂರರನ್ನೂ ಸಾಮಾಜಿಕ ನೀತಿ, ಆರ್ಥಿಕ ಸುಭದ್ರತೆ ಮತ್ತು ಎಲ್ಲಾ ಪ್ರಜೆಗಳಿಗೆ ರಾಜಕೀಯ ನೀತಿಯನ್ನು ಒದಗಿಸಿ ಕಾಪಾಡುವಂತಹದು.

**ಸ್ವಾತಂತ್ರ:** ದೇಶದ ಪ್ರತಿಯೊಬ್ಬ ಪ್ರಜೆಗೆ ಸ್ವತಂತ್ರವಾಗಿ ಜೀವನ ಮಾಡಲು ಕನಿಷ್ಠ ಹಕ್ಕುಗಳನ್ನು ಕೊಡದೆ ಪ್ರಜಾಪ್ರಭುತ್ವವನ್ನು ದೇಶದಲ್ಲಿ ಅಳವಡಿಸುವುದು ಅಸಾಧ್ಯ. ಸಂವಿಧಾನದ ಪೂರ್ವ ಪೀಠಿಕೆ ಮೂರು ಅತೀ ಮುಖ್ಯ ವ್ಯಕ್ತಿಗತ ಹಕ್ಕುಗಳನ್ನು ಸೂಚಿಸುತ್ತದೆ. ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಧಾರ್ಮಿಕ ಬೋಧನೆ ಹಾಗೂ ಪ್ರಚಾರ ಸ್ವಾತಂತ್ರ್ಯ ಈ ಹಕ್ಕುಗಳು ಸಂವಿಧಾನದ ಮೂನೇ ಭಾಗದಲ್ಲಿ ಸೇರ್ಪಡೆಯಾಗಿದೆ. ರಾಜ್ಯ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಕರ್ತವ್ಯಗಳ ಚೌಕಟ್ಟಿನೊಳಗೆ ಈ ಹಕ್ಕುಗಳ ಕಾರ್ಯಸಿದ್ಧಿ ಆಗುತ್ತದೆ.

**ಸಮಾನತೆ:** ಸಮಾಜದ ರಚನಾ ಕ್ರಮದಲ್ಲಿಎಲುವ ಅಸಮಾನತೆಯನ್ನು ಹೋಗಲಾಡಿಸದೆ ಮತ್ತು ಪ್ರತಿಯೊಬ್ಬ ಪ್ರಜೆಗೆ ಸಮಾನ ಅವಕಾಶಗಳನ್ನು ಕಲ್ಪಿಸದೆ ಕೇವಲ ಹಕ್ಕುಗಳನ್ನು ಒದಗಿಸುವುದರಲ್ಲಿ ಅರ್ಥವಿಲ್ಲ. ಸಮಾನತೆ ಒದಗಿಸುವುದೆಂದರೆ ಪ್ರಜೆಗಳ ನಡುವೆ ಮತ, ಜಾತಿ, ಲಿಂಗ, ಜನ್ಮಸ್ಥಳಗಳ ಮೇಲೆ ಹೊಂದಿಕೊಂಡು ತಾರತಮ್ಯ ಮಾಡುವುದನ್ನು ಕಾನೂನು ಪ್ರಕಾರ ನಿಲ್ಲಿಸುವುದು. ಸಾರ್ವಜನಿಕ ಪ್ರದೇಶಗಳನ್ನು ಎಲ್ಲರಿಗೂ ಉಪಯೋಗಿಸಲು ಅನುವು ಮಾಡಿಕೊಡುವುದು. ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು, ಗೌರವ ಬಿರುದುಗಳನ್ನು ತೆಗೆದುಹಾಕುವುದು, ಉದ್ಯೋಗದಲ್ಲಿ ಎಲ್ಲರಿಗೂ ಸಮಾನ ಹಕ್ಕು ಒದಗಿಸುವುದು, ಕಾನೂನಿನ ಮುಂದೆ ಎಲ್ಲರ ಸಮಾನತೆ ಮತ್ತು ಕಾನೂನಿನ ಆಶ್ರಯ ಒದಗಿಸುವುದು. ಸಾರ್ವಜನಿಕ ಮತದ ಹಕ್ಕು ಹಾಗೂ ಯಾವ ಪ್ರಜೆಯನ್ನು ಮತದಾನದಿಂದ ವಂಚಿಸುವುದು ಅಥವಾ ಮತ, ಧರ್ಮ, ಜಾತಿ, ಲಿಂಗಕ್ಕನುಗುಣವಾಗಿ ಮತದಾನದ ಹಕ್ಕು ನೀಡುವುದನ್ನು ತಡೆಯುವುದರಿಂದ ಸಂವಿಧಾನ ರಾಜಕೀಯ ಸಮಾನತೆಯನ್ನು ಒದಗಿಸಿಕೊಡುತ್ತದೆ. ಆರ್ಥಿಕ ರಂಗದಲ್ಲಿ ಪುರುಷ–ಸ್ತ್ರೀಯರಿಗೆ ಸಮಾನ ವೃತ್ತಿ ಹಕ್ಕು ಮತ್ತು ವೇತನ ಹಕ್ಕುಗಳನ್ನು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಒದಗಿಸಲಾಗಿದೆ. (part IV)

**7. ಸಮಾಜವಾದಿ ಸಮಾಜ ಪದ್ಧತಿಯಿಂದ ಸಮಾಜತತ್ವದೆಡೆಗೆ**

ಬಹವಾದ ಉದ್ದೇಶಗಳೆಂದರೆ ರಾಷ್ಟ್ರದ ಕಾರ್ಯಗಳ ಹೆಚ್ಚಳ. ಆದುದರಿಂದ ಸಂವಿಧಾನದ ಗುರಿ ಏನೆಂದರೆ 'ಕಲ್ಯಾಣರಾಷ್ಟ್ರ' ಮತ್ತು 'ಸಮಾಜವಾದಿ ರಾಷ್ಟ್ರವನ್ನು' ರೂಪಿಸುವುದು 1965ರ (Avadi) ಅಧಿವೇಶನದಲ್ಲಿ ಸಮಾಜವಾದ ಸಮಾಜ ರೀತಿಯನ್ನು ಕಾಂಗ್ರೆಸ್ ಕೈಗೆತ್ತಿಕೊಂಡಿತು.

42ನೇಯ ತಿದ್ದುಪಡಿಯ ಪ್ರಕಾರ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ 'ಸಮಾಜವಾದಿ' ಎಂಬ ಶಬ್ದವನ್ನು ಅಳವಡಿಸಿ ಸಮಾಜವಾದ ದೇಶದ ಗುರಿ ಎಂಬುದನ್ನು ಸ್ಪಷ್ಟಪಡಿಸಲಾಯಿತು. ಆದರೆ ಭಾರತದ ಸಂವಿಧಾನದಲ್ಲಿ ಸಮಾಜವಾದವೆಂದರೆ ಎಲ್ಲಾ ಉತ್ಪಾದನಾ ಮೂಲ ರಾಷ್ಟ್ರೀಕರಣ ಮತ್ತು ಖಾಸಗಿ ಆಸ್ತಿ ಹಕ್ಕಿನ ರದ್ಧತಿ ಇಲ್ಲ.

ಸುಪ್ರೀಂ ಕೋರ್ಟ್ ಅಭಿಪ್ರಾಯದ ಪ್ರಕಾರ ಸಮಾಜವಾದವೆಂದರೆ ಅಸಮಾನತೆಯನ್ನು ಹೋಗಲಾಡಿಸುವುದು, ಆದಾಯ ಮತ್ತು ಜೀವನ ಮಟ್ಟದಲ್ಲಿ ಮತ್ತು ಎಲ್ಲಾ ಕೆಲಸಗಾರರಿಗೆ ಒಳ್ಳೆಯ ಜೀವನ ಮಟ್ಟವನ್ನು ಒದಗಿಸುವುದು. ಖಾಸಗಿ ಆಸ್ತಿ ಹಕ್ಕನ್ನು ರದ್ದು ಮಾಡಲು ಸಂವಿಧಾನ ಹೇಳಿಕೊಡುವುದಿಲ್ಲ. ಆದರೆ ಬಡವರ ಉದ್ಧಾರಕ್ಕಾಗಿ ಕೆಲವು ತಡೆಗಳನ್ನು ಖಾಸಗಿ ಆಸ್ತಿ ಹಕ್ಕಿನ ಮೇಲೆ ಹೇರುತ್ತದೆ. ಆಸ್ತಿ ಮತ್ತಿ ಕೈಗಾರಿಕೆ ರಾಷ್ಟ್ರೀಕರಣದ ಬದಲು ಮಿಶ್ರ ಆರ್ಥಿಕ ವ್ಯವಸ್ಥೆ ಮತ್ತು ಎಲ್ಲರಿಗೂ ಸಮಾನ ಅವಕಾಶಗಳು ಮತ್ತು ಆಸ್ತಿಗಳ ನಿರ್ಮೂಲನ. 1992ರ ನಂತರ ಸಮಾಜವಾದದಿಂದ ಖಾಸಗೀಕರಣ ಹಾದಿಯಲ್ಲಿದೆ ನಮ್ಮ ದೇಶ. ಸಮಾಜವಾದ ರಷ್ಯಾ ಮತ್ತು ಯುರೋಪ್ ದೇಶಗಳಲ್ಲಿ ನಶಿಸಿದ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿಯೂ ಅದು ಹಿನ್ನಡೆಯನ್ನು ಕಂಡಿದೆ. ಖಾಸಗಿ ಆಸ್ತಿಯನ್ನು ಸರ್ಕಾರ ಕೊಳ್ಳುವ ಸಮಯದಲ್ಲಿ ಪರಿಹಾರ ಕೊಡುವಂತಹ ಭಾಧ್ಯತೆಯನ್ನು 44ನೇ ಸಂವಿಧಾನ ತಿದ್ದುಪಡಿ 1978ರಲ್ಲಿ ತೆಗಿದುಹಾಕಲಾಗಿದೆ.

**8. ದೇಶದ ಐಕ್ಯತೆ ಮತ್ತು ಏಕಾಗ್ರತೆ ಅಗತ್ಯತೆ**

ಪ್ರಜಾಪ್ರಭುತ್ವದ ಪ್ರಯೋಗವನ್ನು ಯಶಸ್ವಿಗೊಳಿಸಲು ಹಾಗೂ ಸ್ವಾತಂತ್ರ್ಯವನ್ನು ಕಾಪಾಡಲು ಸತೀ ಮುಖ್ಯವಾದದ್ದು, ಹಲವಾರು ಸಮಸ್ಯೆ ಹಾಗೂ ವಿರೋಧ ಶಕ್ತಿಗಳ ನಡುವೆ ಈ ಬೃಹತ್ ರಾಷ್ಟ್ರದ ಐಕ್ಯತೆಯನ್ನು ಕಾಪಾಡುವುದು.

ಐಕ್ಯತೆಯ ಅರ್ಥವನ್ನು ಇನ್ನೂ ಶಕ್ತಿಯುತವಾಗಿರಿಸಿದ್ದು ಏಕಾಗ್ರತೆ ಎಂಬ ಶಬ್ದವನ್ನು 42ನೇಯ ಸಂವಿಧಾನ ತಿದ್ದುಪಡಿಯಲ್ಲಿ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಅಳವಡಿಸಿ. ನಿಜವಾದ ಭಾತೃಭಾವನೆ ನಮ್ಮ ವಿಜಾತಿಯ ಜನರಲ್ಲಿ, ವಿವಿಧ ಜಾತಿ, ಧರ್ಮ, ಸಂಸ್ಕೃತಿಯ ಜನರಲ್ಲಿ ಇಲ್ಲದಿದ್ದರೆ ಜನರ ಏಕತೆ ಮತ್ತು ಪ್ರಜಾಪ್ರಭುತ್ವ ಸಕಾರವಿಡಲು ಅಸಾಧ್ಯ.

**9. ಜಾತ್ಯಾತೀತ ರಾಷ್ಟ್ರ**

ದೇಶದ ಜನರಲ್ಲಿ ಏಕತೆ ಮತ್ತು ಭಾತೃತ್ವವನ್ನು ಹೆಚ್ಚಿಸುವುದು, ಎಲ್ಲಾ ಮತಗಳ ಜನರು ಒಗ್ಗಟ್ಟಾಗಿರುವ ಗುರಿ ಅಥವಾ ಆದರ್ಶ ಭಾರತ ರಾಷ್ಟ್ರತೀತ ರಾಜ್ಯ ಎಂಬುದರಲ್ಲಿ ಅಡಕವಾಗಿದೆ. ಜಾತ್ಯತೀತ ರಾಜ್ಯವೆಂದರೆ ಎಲ್ಲಾ ಧರ್ಮಗಳ ರಕ್ಷಣೆ ಮತ್ತು ಯಾವ ಧರ್ಮವನ್ನೂ ರಾಷ್ಟ್ರ ಧರ್ಮವೆಂದು ಪರಿಗಣಿಸದೆ ಇರುವುದು. ಕಾನೂನಿನ ಚೌಕಟ್ಟಿನ ಪ್ರಕಾರ ದೇಶ ಜಾತ್ಯಾತೀತ ರಾಷ್ಟ್ರ. ಸಂವಿಧಾನದ ಪೂರ್ವ ಪೀಠಿಕೆಯಲ್ಲಿ 42ನೆಯ ತಿದ್ದುಪಡಿ ಪ್ರಕಾರ 1976 ಜಾತ್ಯಾತೀತ ಎಂಬ ಶಬ್ದವನ್ನು ಅಳವಡಿಸಲಾಗಿದೆ. ಸಂವಿಧಾನದ ರಚನೆಯಲ್ಲಿ ಜಾತ್ಯತೀತತೆ ಮುಖ್ಯವಾದ ಭಾಗ. ಬೇರೆ ಸಂವಿಧಾನಗಳಲ್ಲಿರುವಂತೆ ನಮ್ಮ ಸಂವಿಧಾನ ಒಂದು ಧರ್ಮವನ್ನು ರಾಷ್ಟ್ರದ 'ಇಗರ್ಜಿ ಎಂದು ಎಂದು ಪರಿಗಣಿಸುವುದಿಲ್ಲ. ನಂಬಿಕೆ, ಧರ್ಮ ಸ್ವಾತಂತ್ರ್ಯ ಸಂವಿಧಾನದ ಪೂರ್ವ ಪೀಠಿಕೆಯಲ್ಲಿರುವಂತೆ ಮೂಲಭೂತ ಹಕ್ಕು ಎಂದು ಪ್ರಜೆಗಳಿಗೆ ಒದಗಿಸಲಾಗಿದೆ. ಈ ಹಕ್ಕಿನ ಪ್ರಕಾರ ಪ್ರತಿಯೊಬ್ಬನು ತನ್ನ ಧರ್ಮಪಾಲನೆ, ಪ್ರಚಾರ ಮಾಡಬಹುದು. ರಾಷ್ಟ್ರ ಎಲ್ಲಾ ಧರ್ಮಗಳ ಬಗೆಗೆ ತಟಸ್ಥ ಮನೋಭಾವ ಪ್ರದರ್ಶಿಸುತ್ತದೆ.

ಪ್ರತಿಯೊಬ್ಬ ಸದಸ್ಯನಿಗೆ ಗೌರವ ಕೊಡದೆ ಬಂಧುತ್ವದ ಭಾವನೆಯನ್ನು ಬೆಳೆಸಲು ಅಸಾಧ್ಯ. ಆದುದರಿಂದ ಸಂವಿಧಾನದ ಪೂರ್ವ ಪೀಠಿಕೆಯು ಭಾರತದ ಪ್ರತಿ ರಾಜ್ಯದಲ್ಲಿಯೂ ವ್ಯಕ್ತಿಗೆ ತಕ್ಕ ಗೌರವವನ್ನು ಸಲ್ಲಬೇಕಾಗಿ ಹೇಳುತ್ತದೆ. ಈ ಧ್ಯೇಯವನ್ನು ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಗೆ ಸಮಾನ ಮೂಲಭೂತ ಹಕ್ಕುಗಳನ್ನು ಕೊಟ್ಟು ಪೂರೈಸಲಿಚ್ಚಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಹಕ್ಕು ಉಲ್ಲಂಘನೆ ಆದಾಗ ಕೋರ್ಟಿನ ನೆರವು ಕೇಳಬಹುದು. ಈ ಹಕ್ಕುಗಳು ಇದ್ದರೂ ಒಬ್ಬ ವ್ಯಕ್ತಿಗೆ ಬಯಕೆಗಳಿಂದ ಮುಕ್ತಿ ಹಸಿವಿನಿಂದ ಮುಕ್ತಿ ಇಲ್ಲದಿದ್ದರೆ, ಆತ್ಮಗೌರವವಿರುವುದಿಲ್ಲವಾದುದರಿಂದ ಸಂವಿಧಾನದ 4ನೇ ಭಾಗ ರಾಜ್ಯಕ್ಕೆ ಈ ಆದೇಶಗಳನ್ನು ನೀಡುತ್ತದೆ. ಪ್ರತಿಯೊಬ್ಬ ಪ್ರಜೆಗೆ, ಪುರುಷನಾಗಲಿ, ಸ್ತ್ರೀಯರಾಗಲಿ ಸಮಾನವಾಗಿ ಜೀವನ ಸಾಗಿಸುವ ಹಕ್ಕು (Art 39(9)) ನ್ಯಾಯಾಯುತ ಮತ್ತು ಮಾನವೀಯ ಕೆಲಸ ಮಾಡುವ ಪರಿಸರ (Art 42) ಮತ್ತು ಉತ್ತಮ ಜೀವನಮಟ್ಟ ಹಾಗೂ ವಿರಾಮದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಅವಕಾಶಗಳು (Art 43) ಸುಪ್ರೀಂ ಕೋರ್ಟ್ ವ್ಯಕ್ತಿ ಗೌರವದ ಹಕ್ಕನ್ನು ಮೂಲಭೂತ ಹಕ್ಕೆಂದು ಎತ್ತಿ ಹಿಡಿದಿದೆ. ಬಡತನದ ನಿರ್ಮೂಲನ ಮಾಡಲು ಮತ್ತು ಸಾಮಾಜಿಕ, ಆರ್ಥಿಕ ಕ್ರಾಂತಿಯನ್ನು ತರಲು 1976ನೇ ಸಂವಿಧಾನದ 42ನೇಯ ತಿದ್ದುಪಡಿಯಲ್ಲಿ ನಿರ್ದೇಶಕ ತತ್ವಗಳ ಜಾರಿಯಲ್ಲಿ ಯಾವುದೇ ನಿಯಮ ನ್ಯಾಯಾಲಯದಲ್ಲಿ ಯಾವುದೇ ಪ್ರತಿಭಟನೆಯಲ್ಲಿ ಸ್ವತಂತ್ರವಾಗಿದ್ದು, 14ಅಥವಾ 19ನೇ ವಿಧಿಯಡಿಯಲ್ಲಿ ಯಾವನೇ ವ್ಯಕ್ತಿಯ ಮೂಲಭೂತ ಹಕ್ಕುಗಳಿಗೆ ಯಾವುದೇ ತೊಂದರೆ ಮಾಡುವುದಿಲ್ಲ.

## 4.3 ಸಾರಾಂಶ

ನಾವು ಕಂಡಂತೆ ಸಂವಿಧಾನದ ಪೂರ್ವ ಪೀಠಿಕೆಯು ಭಾರತದ ಸಂವಿಧಾನದ ತತ್ವಗಳನ್ನು ಬಿಂಬಿಸುತ್ತದೆ. ಆದ್ದರಿಂದ ಅದು ಸಂವಿಧಾನದ ಅತೀ ಅಮೂಲ್ಯವಾದ ಭಾಗ–ಹೃದಯ ಮತ್ತು ಆತ್ಮ. ಸಂವಿಧಾನ ಉತ್ತೇಜಿಸುವ ರಾಜಕೀಯ, ನೈತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ಅದು ಸಾರುತ್ತದೆ. (Express) ನಿಜವಾಗಿ, ಚಾರಿತ್ರಿಕ ದೃಷ್ಟಿಯಿಂದ ಅದು ಎರಡು ಮಹಾಕ್ರಾಂತಿಗಳ ತತ್ವಶಾಸ್ತ್ರವನ್ನು ಬಿಂಬಿಸುತ್ತದೆ. ಫ್ರಾನ್ಸಿನ ಮಹಾಕ್ರಾಂತಿಯಿಂದ ಸ್ವತಂತ್ರತೆ, ಸಮಾನತೆ, ಭ್ರಾತೃತ್ವ–ರಷ್ಯಾದ ಮಹಾಕ್ರಾಂತಿಯಿಂದ, ಸಾಮಾಜಿಕ, ಆರ್ಥಿಕ, ರಾಜಕೀಯ ನೀತಿ, ನಮ್ಮ ಸಂವಿಧಾನದ ಪೂರ್ವ ಪೀಠಿಕೆ ವಿಶಿಷ್ಟವಾದುದು (Unique) ಮತ್ತು ನಾವು ಸಂವಿಧಾನವನ್ನು ಅರ್ಥ ಮಾಡುವಲ್ಲಿ ತುಂಬಾ ಸಹಕಾರಿ.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶಿಲಿಸಿ.

**1. ಭಾರತ ಸಂವಿಧಾನದ ತತ್ವಶಾಸ್ತ್ರವನ್ನು ವಿವರಿಸಿರಿ.**

........................................................................................................................................

........................................................................................................................................

........................................................................................................................................

........................................................................................................................................

........................................................................................................................................

........................................................................................................................................

........................................................................................................................................

## 4.4 ಕಠಿಣ ಪದಗಳು

| | | |
|---|---|---|
| ಸಾರ್ವಭೌಮತ್ವ | – | ಪರಮಾಧಿಕಾರ |
| ಅದುಮಿಡುವುದು | – | ಅಧೀನದಲ್ಲಿಡುವುದು |
| ಆರ್ಬಿಟೇಶನ | – | ಬಿಕ್ಕಟ್ಟು ಶಮನ |
| ಪ್ರತ್ಯೇಕವಾದ | – | ಸಂಪೂರ್ಣ ಪ್ರತ್ಯೇಕತೆ |
| ವೃದ್ಧಿಸು | – | ಹೆಚ್ಚಿಸು |

## 4.5 ಕೆಲವು ಉಪಯುಕ್ತ ಗ್ರಂಥಗಳು


| | | |
|---|---|---|
| ಭಾರತ ಸರ್ಕಾರ (ಪ್ರಕಟಿತ) | – | ಭಾರತ ಸಂವಿಧಾನ |
| ಜೆ.ಸಿ ಜೊಹಾರಿ | – | ಇಂಡಿಯನ್ ಗವರ್ನ್‌ಮೆಂಟ್ ಅಂಡ್ ಪಾಲಿಟೆಕ್ಸ್ |
| ಎಂ.ವಿ. ಪೈಲಿ | – | ಇಂಡಿಯನ್ ಕಾನ್‌ಸ್ಟಿಟ್ಯೂಷನ್ |
| ಡಿ.ಡಿ. ಬಸು | – | ಕಮ್ಯುನಿಕೇಟಿಸ್ ಆನ್ ಇಂಡಿಯನ್ ಗವರ್ನ್‌ಮೆಂಟ್ |
| ಡಿ.ಸಿ. ಗುಪ್ತಾ | – | ಇಂಡಿಯನ್ ಗವರ್ನ್‌ಮೆಂಟ್ ಅಂಡ್ ಪಾಲಿಟೆಕ್ಸ್ |
| ಕೆ.ವಿ.ರಾವ್ | – | ಪಾರ್ಲಿಮೆಂಟರಿ ಡೆಮಾಕ್ರಸಿ ಇನ್ ಇಂಡಿಯಾ |

| | | |
|---|---|---|
| ಡಾ. ಟಿ.ಡಿ.ದೇವೇಗೌಡ | – | ಭಾರತ ಸರ್ಕಾರ ಮತ್ತು ರಾಜಕೀಯ |
| ಡಾ. ಟಿ.ಡಿ.ದೇವೇಗೌಡ | – | ಭಾರತ ಸಂವಿಧಾನ |
| ಡಾ. ಕೆ.ಜೆ. ಸುರೇಶ್ | – | ಭಾರತ ಸರ್ಕಾರ ಮತ್ತು ರಾಜಕೀಯ |
| ಡಾ. ಹೆಚ್.ಎಂ. ರಾಜಶೇಖರ | – | ಭಾರತ ಸಂವಿಧಾನ ಮತ್ತು ರಾಜಕೀಯ |


## 4.6 ನಿಮ್ಮ ಪ್ರಗತಿ ಪರಿಶೀಲನೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ – 1**

1. ನೋಡಿ ವಿಭಾಗ 4.2


ಆದೇಶ ಸಂಖ್ಯೆ : ಕರಾಮುವಿ/ಸಿಪಾವಿ / 02-1136/2009-2010 ದಿನಾಂಕ : 29-10-2009
ಒಳಪುಟ : 60 GSM MPM ವೈಟ್ ಪ್ರಿಂಟಿಂಗ್ ಪೇಪರ್ ಮತ್ತು ಹೊರಪುಟ : 170 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು - 560 040. ಪ್ರತಿಗಳು : 1000

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಹಾಗೂ ಅಧ್ಯಯನ ಕೇಂದ್ರಗಳು
## Regional and Study Centres of Karnataka State Open University




(ನಮೂದಿಸಿರುವ ಅಂಕಿ - ಜಿಲ್ಲೆಯಲ್ಲಿರುವ ಒಟ್ಟು ಅಧ್ಯಯನ ಕೇಂದ್ರಗಳ ಸಂಖ್ಯೆಯನ್ನು ಸೂಚಿಸುತ್ತದೆ.)

The Number Indicate the Total Number of Study Centres Existing in that Districts.


Feedback : improvement, revision and launching of new programmes
Multimedia learning material
Electronic media learning component
Academic and other support
Evaluation - methods and modes
STUDENT
INSTRUCTIONAL SYSTEM